ಕದಂಬ ಪೂರ್ವ: ಈ ಅವಧಿಗೆ ಸಂಬಂಧಿಸಿದ ಕದಂಬರ ಶಾಸನಗಳಲ್ಲಿ ಮೊದಲನೆಯದೆಂದರೆ ಹಲ್ಮಿಡಿಗ್ರಾಮದ ಶಾಸನ. ಕನ್ನಡ ಭಾಷೆಯಲ್ಲಿ ಬರೆಯಲಾದ ಶಾಸನಗಳಲ್ಲಿ ಸದ್ಯ ಉಪಲಬ್ಧ ಮೊದಲನೆಯ ಶಾಸನ. ಇದು ದೊರೆತ ಕಾಲದಿಂದ ಅನೇಕ ವಿದ್ವಾಂಸರ ಗಮನ ಸೆಳೆದಿದೆ. 1936 ಎಂ. ಎ. ಆರ್.ದಲ್ಲಿ ಮೊದಲಬಾರಿಗೆ ಪ್ರಕಟಿಸಿದ ಡಾ॥ ಎಂ. ಎಚ್. ಕೃಷ್ಣ ಅವರೆ ಪ್ರಬುದ್ಧ ಕರ್ಣಾಟಕದಲ್ಲಿ ಕಿಂಚಿತ್ ಮಾರ್ಪಾಟುಗಳೊಂದಿಗೆ ಪ್ರಕಟಿಸಿದರು[1]. ಶ್ರೀಯುತರು ಇದರ ಕಾಲ ಕ್ರಿ. ಶ. 450 ಎಂದು ಸ್ಥೂಲವಾಗಿ ನಿರ್ಧರಿಸಿದರು. ಕನ್ನಡ ಭಾಷೆಯ ಚರಿತ್ರೆಯನ್ನು ಪರಾಮರ್ಶಿಸಿದ ವಿದ್ವಾಂಸರೆಲ್ಲರೂ ದಿವಂಗತ ಗೋವಿಂದ ಪೈ ಅವರನ್ನು ಬಿಟ್ಟರೆ ಈ ಅಭಿಪ್ರಾಯವನ್ನೇ ಒಪ್ಪಿಕೊಂಡು ತಮ್ಮ ತಮ್ಮ ಬರವಣಿಗೆಗಳನ್ನೂ ಸಂಶೋಧನೆಗಳನ್ನೂ ಪ್ರಕಟಿಸಿದ್ದಾರೆ. ಗೋವಿಂದ ಪೈ ಅವರು ಈ ಶಾಸನದ ಕಾಲವನ್ನು ಕ್ರಿ. ಶ. 265–282 ಎಂದಿದ್ದಾರೆ[2]. ಅವರ ಪ್ರಕಾರ ಇದರ ಕಾಲ ಕ್ರಿ.ಶ. 3ನೆಯ ಶತಮಾನ. ಈ ಶಾಸನವನ್ನು ಓದುವಲ್ಲಿ ನಾವು ಲಿಪಿ, ಭಾಷೆ ಹಾಗೂ ಚಾರಿತ್ರಿಕ ಸಂಗತಿಗಳನ್ನು ಬಹಳ ಎಚ್ಚರದಿಂದ ಪರಿಶೀಲಿಸಬೇಕು. ಎಲ್ಲ ಸಮಸ್ಯೆಗಳೂ ಸುಲಭದಲ್ಲಿ ಪರಿಹಾರ ಕಾಣದೆ ಇರಬಹುದು. ಆದರೆ ಕೆಲವನ್ನಾದರೂ ಪುನಃ ಪರಿಶೀಲಿಸಬೇಕಾದುದು ಅನಿವಾರ್ಯವಾಗಿದೆ. ಈ ಮಾರ್ಪಾಟುಗಳು ಅವಶ್ಯ ಆಗಬೇಕಾದ್ದು ಎಂದು ನನಗೆ ತೋರುತ್ತದೆ. "ಕನ್ನಡ ಶಾಸನ ಸಂಪದ ಪುಸ್ತಕದ ಎರಡನೆಯ ಆವೃತ್ತಿಯಲ್ಲಿ ಈ ಶಾಸನದ 15ನೆಯ ಸಾಲಿನಲ್ಲಿರುವ 'ಆದಾನಟಿ°ವೊನ್ಗೆ'[3] ಎಂಬ ಪ್ರಯೋಗದಲ್ಲಿ ಕುಳದ ಬದಲು ರಳವೇ ಇದೆಯೆಂದು ಹೇಳಲಾಗಿದೆ. ಇದು ಮೌಲಿಕವಾದ ತಿದ್ದುಪಡಿ"[4]. 'ಸುತನ್ಗೆ' ಎಂಬಲ್ಲಿ ಚತುರ್ಥೀ ವಿಭಕ್ತಿಯ 'ಗೆ' ಇದರ ಜೊತೆಗೆ ಗಕಾರದ ಅನುನಾಸಿಕ 'ಙ್' ಬರಬೇಕು. ಆದರೆ ಲಿಪಿಯಲ್ಲಿ 'ನ' ಕಾರ ಬಂದಿದೆ. 'ಅರಸಙ್ಗೆ', ಮತ್ತು 'ಅಟಿ°ವೊಙ್ಗೆ' ಎಂಬಲ್ಲಿ ತಜ್ಜಾತಿಯ ವರ್ಗದ ಅನುನಾಸಿಕ ಬಂದಿರುವುದು ಶಾಸ್ತ್ರೋಕ್ತ ವಿಧಾನವಾಗಿದೆ. ಪ್ರಾಚೀನಕಾಲದಲ್ಲಿ ಆಯಾವರ್ಗದ ಅನುನಾಸಿಕವನ್ನೇ ಬರೆಯಲು ಬಳಸುತ್ತಿದ್ದರು[5]. ಬಿಂದು

---

[1] ಪ್ರಬುದ್ಧ ಕರ್ಣಾಟಕ ಸಂಪುಟ—20, ಸಂಚಿಕೆ–3, ಪು. 31–40

[2] (a) "ಕನ್ನಡ ಸಾಹಿತ್ಯದ ಪ್ರಾಚೀನತೆ" (ಗೋವಿಂದ ಪೈ) 'ಮೂರು ಉಪನ್ಯಾಸಗಳು' ಪು. 137–38
(b) Journal of Indian History, Vol. XIII, p. 165

[3] (a) ಪ್ರಬುದ್ಧ ಕರ್ಣಾಟಕ, ಸಂ. 20, ಸಂ. 3, ಪು. 39
(b) ಕನ್ನಡ ಶಾಸನಸಂಪದ (ಸಂ. ಡಾ॥ ಆರ್. ಸಿ. ಹಿರೇಮಠ ಮತ್ತು ಡಾ॥ ಎಂ. ಎಂ. ಕಲ್ಬುರ್ಗಿ) ಶಾಸನ–೧, ಪು. ೧
(c) ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ 'ಶಬ್ದಾರ್ಥವಿಹಾರ' ಪು. 2

[4] ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ (ಲೇ. ಡಾ॥ ಎಂ. ಬಿ. ನೇಗಿನಹಾಳ), ಪು. 5 ; ವಾಸ್ತವದಲ್ಲಿ ಈ ತಿದ್ದುಪಡಿಯನ್ನು ಡಾ॥ ಎಂ. ಎಚ್. ಕೃಷ್ಣರೇ ಪೂರ್ವೋಕ್ತ ಪ್ರಬುದ್ಧ ಕರ್ಣಾಟಕದ ಲೇಖನದಲ್ಲಿ ಮಾಡಿದ್ದಾರೆ.

[5] (ಎ) ಕಾವ್ಯಾವಲೋಕನಂ (ಸಂ. ರಾ. ನರಸಿಂಹಾಚಾರ್) ಸೂತ್ರ: 5 (1967)
(ಬಿ) ಶಬ್ದಮಣಿದರ್ಪಣಂ (ಸಂ. ಪ್ರೊ. ಡಿ. ಎಲ್. ನರಸಿಂಹಾಚಾರ್) ಸೂತ್ರ: 25 (1968)

ಅನಂತರದಲ್ಲಿ ಐದೂ ಅನುನಾಸಿಕಗಳಿಗೆ ಪ್ರತಿನಿಧಿಯಾಗಿ ವರ್ತಿಸುವುದು ಲೋಕರೂಢಿ. ಅಂತೆಯೆ "The use of 'n' for the Bindu-sutaṅge (line 10), etc" ಎಂಬ ವಿವರಣೆ[6] ಶಾಸನದಲ್ಲಿ ಬಂದಿರುವ ಶುದ್ಧ ರೂಪಕ್ಕೆ ವಿರೋಧದ ಹೇಳಿಕೆಯಾಗಿದೆ. ಈ ಶಾಸನದ ಬರಹಗಾರ ಬರಹವನ್ನು ಅತ್ಯಂತ ಶುದ್ಧವಾಗಿ ಬರೆದಿಲ್ಲವೆಂಬುದಕ್ಕೆ ಇದೂ ಸಾಕ್ಷಿಯಾಗಿದೆ.

ಶಾಸನದ ಅಕ್ಷರಗಳನ್ನು ನೋಡಿದಾಗ ಇದರಲ್ಲಿನ ಲಿಪಿ ತತ್ಕಾಲೀನ ಕದಂಬ, ಗುಪ್ತ, ವಾಕಾಟಕ ಹಾಗೂ ಇತರ ರಾಜಮನೆತನಗಳ ಲಿಪಿಯಿಂದ ಎಂದರೆ ಪೇಟಿಕಾಶಿರ (Box headed script) ಪದ್ಧತಿಯನ್ನು ಹೊಂದಿರದೆ ಅರ್ಥಾತ್ ತಾಳಗುಂದ ಇತ್ಯಾದಿ ಶಾಸನಗಳ ಲಿಪಿಯಿಂದ ಭಿನ್ನವಾಗಿದ್ದು ಕದಂಬರ ಕಾಲದ ಲಿಪಿಯ ಸ್ವರೂಪದ ಬಗೆಗೆ ನಿಶ್ಚಿತ ಬೆಳಕನ್ನು ಚೆಲ್ಲುತ್ತದೆ. ತಾಳಗುಂದ ಹಾಗೂ ಗುಡ್ನಾಪುರ ಇತ್ಯಾದಿ ಶಾಸನಗಳ ಬರಹದ ರೂಪಕ್ಕೂ ಇದರಲ್ಲಿನ ಬರಹದ ರೂಪಕ್ಕೂ ವ್ಯತ್ಯಾಸವಿದೆಯೆನ್ನುವುದು ಸುಸ್ಪಷ್ಟ ಇದರಲ್ಲಿ ಇಲ್ಲದ ಪೇಟಿಕಾಶಿರ ಅಥವಾ ಚೌಕತಲೆಕಟ್ಟುಗಳು ಅಲ್ಲಿ ಕಾಣಿಸಿಕೊಂಡಿರುವುದು ಕರ್ನಾಟಕದಲ್ಲಿ ಆ ಕಾಲಕ್ಕೆ ಎರಡು ಬಗೆಯ ಬರಹದ ಶೈಲಿಗಳನ್ನು ಬರಹಕ್ಕೆ ಬಳಸುತ್ತಿದ್ದರೆಂದು ಸೂಚಿಸುತ್ತದೆ. ಶಾಸನದಲ್ಲಿ 16 ಪಂಕ್ತಿಗಳಿದ್ದು ಕೊನೆಯ ಪಂಕ್ತಿಯ ಆರಂಭದ 'ಸ್ವಸ್ತಿ' ಎಂಬ ಭಾಗವನ್ನು ಶಾಸನದ ಮುಂಭಾಗದಲ್ಲಿಯೇ ಕೆತ್ತಿದ್ದು ಉಳಿದ "ಭಟ್ಟರ್ಗ್ಗೀಗಟಿ³ದ್ದಿ ಒಡ್ಡಲಿಆ ಪತ್ತೊನ್ದಿ ವಿಟ್ಟಾರಕರ" ಎಂಬ ಭಾಗವನ್ನು ಕಲ್ಲಿನ ಒಂದು ಪಕ್ಕದಲ್ಲಿ ಕೆತ್ತಿದ್ದಾರೆ. 'ಸ್ವಸ್ತಿ' ಎಂಬ ಭಾಗವನ್ನು ಗಮನಿಸದೆ 'ಭಟ್ಟರ್ಗ್ಗ ಪತ್ತೊನ್ದಿ' ಯಾರು ಕೊಟ್ಟರು ಎಂಬುದನ್ನು ಲೆಕ್ಕಿಸದೆ, ಶಾಸನದ ಈ ಭಾಗವನ್ನು 'ಅನಂತರದಲ್ಲಿ ಸೇರಿಸಿದ್ದಾರೆ' ಮತ್ತು ಈ ಭಾಗಕ್ಕೂ ಇತರ ಭಾಗಕ್ಕೂ ಯಾವ ಸಂಬಂಧವಿಲ್ಲ ಇತ್ಯಾದಿಯಾಗಿ ಕೆಲವಿದ್ವಾಂಸರು ಬರೆದಿದ್ದಾರೆ.[7] 'ಪತ್ತೊನ್ದಿ' ಅಥವಾ 'ದಶಬಂಧ' ($\frac{1}{10}$) ಎಂಬುದನ್ನೂ ಭಟ್ಟರ್ಗೆ ಅನುಭೋಗಿಸಲು ಬಿಟ್ಟವರು ಯಾರು ಎಂಬ ಪ್ರಶ್ನೆಗೆ ಉತ್ತರವೆ ದೊರೆಯದು ; ಇದನ್ನು ಮೂಲಭಾಗದಿಂದ ಬೇರ್ಪಡಿಸಿದರೆ. ಕೆರೆಕಟ್ಟಿಸಿದವರಿಗೆ–ರಾಜಮಹಾರಾಜರಿಗೆ–ಸಲ್ಲಬೇಕಾದ ಕರ–ದಶಬಂಧ[8]ವನ್ನು ಭಟ್ಟರ್ಗೆ ಅನುಭೋಗಿಸಲು ಕೊಟ್ಟ ಕರ್ತೃವಿನ (Subject) ಬಗ್ಗೆ ಇವರೇ ಎಂದು ಹೇಳಲು ಬರುವುದಿಲ್ಲ. ಲಿಪಿಯ ದೃಷ್ಟಿಯಿಂದ ಆಗಲಿ, ಅರ್ಥದ ದೃಷ್ಟಿಯಿಂದ ಆಗಲಿ, ಈ 16 ಪಂಕ್ತಿಗಳು ಒಂದೇ ಶಾಸನದ, ಒಂದೇ ಕಾಲಕ್ಕೆ ಬರೆಯಲ್ಪಟ್ಟ ಒಂದು ಘಟಕ (Unit) ಎಂದರೆ ತಪ್ಪಾಗುವುದಿಲ್ಲ[9]. ಆಗ ಮೊದಲಿನಿಂದ ಕೊನೆಯವರೆಗೆ ಅರ್ಥವನ್ನು ಹೇಳಲು ಸಾಧ್ಯ.

ಈ ಶಾಸನದ ಭಾಷೆ, ಸಾಕಷ್ಟು ಬೆಳೆದ ಸಮ್ಮಿಶ್ರಿತ ಭಾಷೆ. ಗ್ರಾಂಥಿಕಕ್ಕಿಂತ ಇದು ಹೆಚ್ಚು ಆಡುನುಡಿಗೆ ಹತ್ತಿರವಾಗಿದೆ; ಹಳ್ಳಿಯ ಜನರಿಗೆ ಸಹ ಅರ್ಥವಾಗಬೇಕೆಂಬ ಉದ್ದೇಶದ ಸಾಧನೆಗೆ ಬರೆಯಲ್ಪಟ್ಟಿದೆ. ಸಂಸ್ಕೃತ—ಕನ್ನಡ—ಎಂಬ ಭೇದಭಾವವಿಲ್ಲದೆ ಶಾಸ್ತ್ರನಿಯಮಕ್ಕೆ ಒಗ್ಗಲಿ ಬಿಡಲಿ ಎರಡೂ ಭಾಷೆಗಳ ಶಬ್ದಗಳ ಹೊಂದಾಣಿಕೆ ಇಲ್ಲಿ ಆಗಿರುವುದು ಕಂಡುಬರುತ್ತದೆ. 'ವಿಜ ಅರಸಜ್³ಗ' ಎಂದು ಬಿಡಿಸಿ ಬರೆದ ಶಾಸನಕಾರ 'ವಿಜಾರಸರುಂ' ಎಂಬಲ್ಲಿ ಸವರ್ಣದೀರ್ಘಸಂಧಿಯನ್ನು ಸಾಧಿಸಿದ್ದು ವಿಲಕ್ಷಣವಾಗಿದೆ[10]. ಹೀಗೆಯೇ 'ಪೊಗಟಿ³ಪ್ಪೊಟ್ಟಣ' ಎಂಬುದು ಕೂಡ ವಿಲಕ್ಷಣ ಪ್ರಯೋಗವಾಗಿದೆ. 'ಪಟ್ಟಣ| ಪತ್ತನ' 'ಪೊಟ್ಟಣ' ಆಗಿರುವುದೂ ಆಶ್ಚರ್ಯ. ಪತ್ತನ| ಪಟ್ಟನ| ಪಟ್ಟಣ—ಶಬ್ದ, ಮಹಾಭಾರತದ ಕಾಲದಿಂದಲೂ ಪ್ರಚಲಿತವಾದುದು, 'ಪೊಟ್ಟಣ' ಆಗಿರುವುದು ವಿಚಾರಣೀಯ. ಕನ್ನಡದಲ್ಲಿ 'ಪಟ್ಟಣ' ಎಂಬ ಪ್ರಯೋಗವೇ ಪಂಪಾದಿಗಳಲ್ಲಿ ದೊರೆಯುತ್ತದೆ."[11] ವಡ್ಡಾರಾಧನೆಯಲ್ಲಿ 'ಪತ್ತನ' ಎಂದಿದೆ[12]. 'ಪೊಗಟಿ³ಪ್ಪೊಟ್ಟಣ' ಶಬ್ದದ ಪರಿಶೀಲನೆಯಲ್ಲಿ ಈ ಶಬ್ದದಲ್ಲಿಯ 'ಪ್ಪೊಟ್ಟಣ' ಎಂಬಲ್ಲಿಯ 'ಪ್ಪೊ' ಅಕ್ಷರದ ತಲೆಕಟ್ಟು 'ಪೊಗಟಿ³' ಎಂಬಲ್ಲಿಯ 'ಪೊ' ಅಕ್ಷರದಂತೆ ಇಲ್ಲ. ಈ ಶಬ್ದವನ್ನು 'ಪೊಗಟಿ³ ಪ್ಪಟ್ಟಣ' ಎಂದೇ ಓದಬಹುದು. ಆದುದರಿಂದ 'ಪೊಟ್ಟಣ' ಎಂಬ ಶಬ್ದರೂಪ, ಕನ್ನಡ ಭಾಷೆಯಲ್ಲಿ

---

[6] MAR, 1936, p. 77

[7] ಪೂರ್ವೋಕ್ತ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ', ಪು. 6

[8] (a) ಎ.ಕ. ಸಂ. 6 (1979) ಶ್ರೀರಂಗಪಟ್ಟಣ—85, ಪು. 410
(b) Epigraphical Glossary (D. C. Sircar), p. 84
(c) ಸಿಂಗಾರ (ಅಭಿನಂದನಗ್ರಂಥ ಸಂ.ಹ.ಕ. ರಾಜೇಗೌಡ), ಪು, 166

[9] ಡಾ॥ ಎಂ. ಎಚ್. ಕೃಷ್ಣ, ಡಾ॥ ರಂ. ಶ್ರೀ. ಮುಗಳಿ ಮತ್ತು ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ ಮೊದಲಾದ ವಿದ್ವಾಂಸರು ಒಂದೇ ಘಟಕ ಎಂದು ಗ್ರಹಿಸಿದ್ದಾರೆ. MAR. 1936 ; ಪೂರ್ವೋಕ್ತ ಪ್ರ. ಕ. ಪು. 31–40 ; ಕನ್ನಡ ಸಾಹಿತ್ಯ ಚರಿತ್ರೆ, ಪು. 9–10 (1971) ಮತ್ತು ಶಬ್ದಾರ್ಥವಿಹಾರ ಪು. 1–11.

[10] ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪು. 6

[11] ಕನ್ನಡ ನಿಘಂಟು, ಸಂಪುಟ–5 (ಕಸಾಪ), ಪು. 5116, 5191

[12] ವಡ್ಡಾರಾಧನೆ (ಸಂ. ಪ್ರೊ: ಡಿ. ಎಲ್. ನರಸಿಂಹಾಚಾರ್), ಪು. 7 (1970)

ಇತ್ತೀಚಿಗೆ ಹುಟ್ಟಿಕೊಂಡ ಅಬದ್ಧರೂಪ. ಒಂಬತ್ತನೆಯ ಪಂಕ್ತಿಯಲ್ಲಿ ಬರುವ ‘ಪ್ರೇಮಾಲಯ’ ಎಂಬ ಶಬ್ದದಲ್ಲಿ ‘ಲ’ ಕಾರವನ್ನು ಕಂಡರಿಸುವಲ್ಲಿ ‘ಲ’ ಅಕ್ಷರವನ್ನು ಪಂಕ್ತಿಯ ಕೆಳಗೆ ಅನಂತರದಲ್ಲಿ ಸೇರಿಸಿದೆ[13]. ಅರ್ಥಾತ್ ‘ಪ್ರೇಮಾಯ’ ಎಂದೇ ಮೊದಲು ಕಂಡರಿಸಿದ್ದಾರೆ! ‘ಸಬ್ಬಜ್ಗದರ್’ ಎಂಬಲ್ಲಿ ‘ರ್’ ಅಕ್ಷರವನ್ನು ಅನಂತರದಲ್ಲಿ ಬರೆದಿದೆ. ಅಂತೆಯೇ ಈ ಶಾಸನದ ಪುನರಾವಲೋಕನದಲ್ಲಿ ‘ದಕ್ಷಿಣಾಪಥ ಬಹುಶತಹವನಾಹವದುಳ್’ ಎಂಬ ಭಾಗವನ್ನು ಪುನಃ ಪರಿಶೀಲಿಸಿದರೆ ‘ಬಹುಶತಹವನ’ ಎಂಬುದು ಸರಿಯಲ್ಲವೆಂದು ಸ್ಪಷ್ಟವಾಗುತ್ತದೆ. ‘ಬಹುಶತವಹನ’ ಎಂದಿರಬೇಕಾದುದು ಶಾಸನದ ಬರಹಗಾರನ ಕೈಯಲ್ಲಿ ‘ವ’ ಹಾಗೂ ‘ಹ’ ಅಕ್ಷರಗಳು ಪಲ್ಲಟವಾಗಿ ‘ಹವನ’ ಎಂಬ ಶಬ್ದಕ್ಕೆ ಕಾರಣವಾಗಿವೆ. ಅಳಪಗಣಪಶುಪತಿಯು ಯಾರೊಂದಿಗೆ ಯುದ್ಧ ಮಾಡಿದ ಎಂಬ ಪ್ರಶ್ನೆಗೆ ಉತ್ತರ ಸದ್ಯದ ಶಾಸನ ಓದಿರುವ ಪದ್ಧತಿಯಲ್ಲಿ ಕಾಣದೊರೆಯದು. ಇನ್ನು ‘ಶತಹವನ’ ಎಂದರೆ ಇಂದ್ರ; ಮತ್ತು ಈ ಶಬ್ದ ಬಹುವಚನ ಶಬ್ದವಾಗಿದೆ, ಕಾರಣ ‘ಬಹುಶತಹವನ’ ಎಂದರೆ ಎಷ್ಟು ನೂರು ಯಜ್ಞಗಳು? ‘ಆಹವದುಳ್’ ಎಂಬ ಒಂದೇ ಯುದ್ಧವನ್ನು ಮನದಂದಾಗ ‘ಬಹುಶತಹವನ’ ಎಂಬುದು ವಿರೋಧಾಭಾಸದಿಂದ ಕೂಡಿದ ಉಕ್ತಿ ಆಗುತ್ತದೆ. ವರ್ಣಪಲ್ಲಟಗೊಂಡಿದೆ ಎಂದು ಒಪ್ಪಿಕೊಂಡರೆ ‘ಬಹುಶತವಹನ’ ಎಂಬ ಶಬ್ದವು ರೂಪಗೊಂಡು ಬಹಳಮಂದಿ ಶಾತವಾಹನ (ಸಾತವಾಹನ)ರು ಕಲೆತು ಎದುರಿಸಿದ ಯುದ್ಧದಲ್ಲಿ ಮೃಗೇಶ ಹಾಗೂ ನಾಗ ಎಂಬ ಅಳಪಗಣಪಶುಪತಿಯ ಅಧಿಕಾರಿಗಳು “ನೃಸಿಂಹ ಅಥವಾ ಮೃಗರಾಜನಾದ ಸಿಂಹವನ್ನೂ ನಾಗರಾಜನಾದ ವಾಸುಕಿ (ಅಥವಾ ಮಹೋಗ್ರಸರ್ಪ)ಯನ್ನೂ”[14] ನೆನಪಿಗೆ ತರುವ ಹಾಗೆ ಯುದ್ಧ ಮಾಡಿದರು ಎಂದಾಗುತ್ತದೆ. ಒಂದು ವಂಶದಲ್ಲಿ ಹಲವು ಶಾಖೆಗಳಾಗುವುದು, ಅವರು ಒಂದಾಗುವುದು–ಒಂದಾಗಿ ವೈರಿಗಳನ್ನು ಎದುರಿಸುವುದು—ಇತಿಹಾಸದಲ್ಲಿ ಹೊಸ ಸಂಗತಿಯಲ್ಲ. ವಿಜಯನಗರದ ಪತನ ಇಂತಹ ಒಂದು ಒಕ್ಕೂಟವನ್ನು (confederacy) ನೆನಪಿಗೆ ತಂದು ಕೊಟ್ಟರೆ ಚೋಳರ ದಂಡನಾಯಕನಾದ ಅಪ್ರಮೇಯ ಬಿರುದಿನ ಎಳಗನು ಅನೇಕ ಹೊಯ್ಸಳ ದೊರೆಗಳನ್ನು ತನ್ನೊಂದೆ ಜಾತ್ಯಶ್ವವನ್ನು ಏರಿ ಎದುರಿಸಿ ಗೆದ್ದನು ಎಂಬುದು ಇನ್ನೊಂದು ನಿದರ್ಶನ. ಈ ಪದ್ಯ ನೋಡಿ :

> ಎಳಗಂ ಪೊಯ್ಸಳರೆಂಬನನ್ತ ಬಳರಂ ತನ್ನೊಂದೆ ಜಾತ್ಯಶ್ವದಿಂ
> ಕಲಪೂರಲ್ಪೊಣರ್ದ್ದಟ್ಟಿ ಕಾದಿ ಪಲರಂ ಕೊನ್ದೀ ಜಯಸ್ತಂಬದೊ
> ಳ್ಕುಲಮಾಣಿಕ್ಯನುಮಪ್ರಮೇಯನುಮೆನಿಪ್ಪತ್ಯುಗ್ರನಾಮಂಗಳೀ
> ನೆಲನುಂ ಚಂದ್ರನುಮುಳ್ಳಿನಂ ನಿಱಿಸಿದಂ ತಾನೀ ಮಹಾಸ್ಥಾನದೊಳ್ ||[15]

ಇದೇ ರೀತಿಯಲ್ಲಿ ಇಮ್ಮಡಿ ಪುಲಿಕೇಶಿಯ ಕಾಲದ ಐಹೊಳೆಯ ಶಾಸನದ ‘ಕದಂಬ-ಕದಂಬಕ’ ಎಂಬ ನಿದರ್ಶನವನ್ನೂ ನೆನೆಯಬಹುದು. ಬಹಳಮಂದಿ ಶಾತವಾಹನರಾಜರು ಒಂದಾಗಿ ಕಾಕುಸ್ಥವರ್ಮ ಕದಂಬದೊರೆಯ ಮಾಂಡಲಿಕ ಅಳಪಗಣ ಪಶುಪತಿಯನ್ನು ದಕ್ಷಿಣಾಪಥದಲ್ಲಿ ಜರುಗಿದ ಯುದ್ಧದಲ್ಲಿ ಎದುರಿಸಿದರು. ‘ಆಹವದುಳ್’ ಎಂಬ ಶಬ್ದವನ್ನು ಪರೀಕ್ಷಿಸಿದರೆ ಅದರ ಜೊತೆಗೆ ಒಬ್ಬ ರಾಜನೊ ಅಥವಾ ರಾಜವಂಶವೊ ಬರಲೇ ಬೇಕಾಗುತ್ತದೆ. ‘ಸತ್ಯಾಶ್ರಯನಾಹವದುಳ್’ ಇತ್ಯಾದಿಗಳನ್ನು ಇಲ್ಲಿ ಜ್ಞಾಪಕಕ್ಕೆ ತಂದುಕೊಂಡರೆ ಸಾಕು. ‘ಬಹುಶತವಹನಾಹವದುಳ್’ ಎಂಬುದು ಸಾಧುವೆಂಬುದು ಸಿದ್ಧವಾಗಿ ಅರ್ಥ ಸ್ಪಷ್ಟವಾಗುತ್ತದೆ. ಕರ್ತೃ, ಕರ್ಮ, ಎಲ್ಲವುಗಳ ಅರ್ಥವಿವರಣೆಯು ಸ್ಫಟಿಕಶಲಾಕೆಯಂತೆ ಪಾರದರ್ಶಕವಾಗಿ ನಿಲ್ಲುತ್ತದೆ. ‘ಆಹವದುಳ್’ ಎಂಬ ಏಕವಚನವನ್ನೂ ಇನಿತು ಗಮನಿಸಬೇಕು. ‘ಯುದ್ಧಗಳು’ ಎಂಬ ಬಹುವಚನಕ್ಕೆ ಇಲ್ಲಿ ಆಸ್ಪದವಿಲ್ಲ. ಆದುದರಿಂದ “hundreds of sacrifices which are *battles*”[16] ಎಂಬ ಅನುವಾದ-ಅರ್ಥವಿವರಣೆ-ಸರಿಯಲ್ಲ. “Battles” ಎಂದು ಹೇಳಬೇಕಾದರೆ ಶಾಸನಪಾಠದಲ್ಲಿ “ಆಹವಂಗಳ್” ಎಂದಿರಬೇಕಾಗಿತ್ತು. ‘ಆಹವದುಳ್’ ಎಂಬ ಏಕವಚನ ಪ್ರಯೋಗ ಇರುವುದರಿಂದ “Battles” ಎಂಬ ವಿವರಣೆಯನ್ನು ಕೈಬಿಡಬೇಕಾಗುತ್ತದೆ. ಇಲ್ಲದ್ದನ್ನು ಹೇಳಬಾರದಲ್ಲವೆ? ಇನ್ನು ಶಾತವಾಹನರ ಅನೇಕ ಶಾಖೆಗಳು ಇದ್ದುವೆ ಎಂದು ಪ್ರಶ್ನಿಸಿಕೊಂಡರೆ, ಇದ್ದುವೆಂದೇ ಉತ್ತರ ದೊರೆಯುತ್ತದೆ. ಚಾರಿತ್ರಿಕ ಅಂಶಗಳನ್ನು ಮನದಂದಾಗ ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರ ಎಂಬ ಈಗಿನ ವಿಸ್ತಾರ

---

[13] ಲಿಪಿಯ ದೋಷಗಳನ್ನು ಶಾಸನದ ಫೋಟೋದಲ್ಲಿ ‘X’ ಈ ಚಿಹ್ನೆಯ ಮೂಲಕ ತೋರಿಸಿದೆ. ಪರಿಶೀಲಿಸುವವರು ಫೋಟೋವನ್ನು ನೋಡಿರಿ. ಇಂತಹ ದೋಷಗಳು ಸಾಧಾರಣವಾಗಿ ನಡೆಯುತ್ತವೆ. ಇದನ್ನು ಅಕ್ಷರಗಳ ಸ್ಥಾನವ್ಯತ್ಯಯ ಅಥವಾ ವರ್ಣಪಲ್ಲಟ (Metathesis) ಎಂದು ಹೇಳುತ್ತಾರೆ—ಕನ್ನಡ ಗ್ರಂಥಸಂಪಾದನೆ (ಪ್ರೊ. ಡಿ.ಎಲ್.ಎನ್.), ಪು. 121–122.

[14] ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ, ‘ಶಬ್ದಾರ್ಥವಿಹಾರ’ ಪು. 3–4

[15] ಎ.ಕ. ಸಂ. V(1976), ತಿನ. 220, ಪು. 603

[16] MAR 1936, p. 74

ವಾದ ಪ್ರದೇಶದಲ್ಲಿ, ಶಾತವಾಹನರು ದಕ್ಷಿಣಾಪಥೇಶ್ವರರಾಗಿ ರಾಜ್ಯವನ್ನಾಳಿದರು. ‘ಪೈಠಣ’ ‘ನಾಸಿಕ’ ‘ಸನ್ನತಿ’ ‘ವೈಜಯಂತಿ’ (ಬನವಾಸಿ) ಹಾಗೂ ‘ಧಾನ್ಯಕಟಕ’ ನಗರಗಳು ಅವರಿಗೆ ರಾಜಧಾನಿಗಳಾಗಿದ್ದವು. ಶಾತವಾಹನರ ಹಲವು ಶಾಖೆಗಳಿದ್ದವೆಂಬುದನ್ನು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.[17]

ಈ ಶಾಸನದಲ್ಲಿಯ ಚಾರಿತ್ರಿಕ ಅಂಶಗಳನ್ನು ಪರಿಶೀಲನೆಗೆ ಎತ್ತಿಕೊಂಡರೆ, (1) ಕದಂಬರಾಜ ಕಾಕುಸ್ಥವರ್ಮನ ಉಲ್ಲೇಖ (2) ಬಟಾರಿಕುಲದ ಆಳಪಗಣಪಶುಪತಿಯ ಉಲ್ಲೇಖ (3) ದಕ್ಷಿಣಾಪಥದ ಶಾತವಾಹನರ ಉಲ್ಲೇಖ (4) ಸೇಂದ್ರಕರ ಉಲ್ಲೇಖ (5) ಬಾಣರ ಉಲ್ಲೇಖ ಹಾಗೂ (6) ಪಲ್ಲವರ ಉಲ್ಲೇಖ ಇತ್ಯಾದಿಗಳು ಚರಿತ್ರೆಯನ್ನು ಬರೆಯುವಲ್ಲಿ ಒಂದು ಮಹತ್ವದ ಸಾಧನವಾಗಿವೆ. ನರಿದಾವಿಳೆನಾಡಿಗೆ ಬಟಾರಿಕುಲದವರು ಅಧಿಪತಿಗಳು ಮತ್ತು ಕದಂಬರು ಅವರ ಮೇಲಿನ ಅಧಿರಾಜರು ಎಂಬುದು ಸ್ಪಷ್ಟವಿದೆ. ಶಾಸನದ ಮುಖ್ಯ ವಿಷಯವೆಂದರೆ ಇಬ್ಬರೂ ಸಟ್ಬಿಂಗದ ಅಧಿಕಾರಿಗಳು (ಮೃಗೇಶ ಹಾಗೂ ನಾಗ) ಮತ್ತು ವಿಜ ಅರಸ, ಒಟ್ಟು ಮೂವರೂ, ಹಲ್ಮಿಡಿಗೆ ‘ಕುಱುಂಬಿಡಿ’ ಬಿಡುವುದು ಮತ್ತು ಅಲ್ಲಿನ ಭಟ್ಟರಿಗೆ ‘ಗಟ್ದಿ ಒಡ್ಡಲಿಆ ಪತ್ತೊನ್ದಿ’ ಬಿಡುವುದು. ಈ ಮೂವರು ಅಧಿಕಾರಿಗಳು ಹಲ್ಮಿಡಿಗೆ ಹೇಗೆ ಹೇಗೆ ಸಂಬಂಧಿಸಿದ್ದರೆಂಬುದು ಶಾಸನದಲ್ಲಿ ಸ್ಪಷ್ಟವಿದೆ. ಇಬ್ಬರು ಅಲ್ಲಿ ಬರುವ ‘ಸಟ್ಬಿಂಗ’ (<ಷಟ್ + ಷಂಗ = ೧/೬)ವನ್ನು ಅನುಭೋಗಿಸುತ್ತಿದ್ದರು ಮತ್ತು ವಿಜಅರಸನು ಹಲ್ಮಿಡಿ ಹಾಗೂ ಮೂಱಿವಳ್ಳಿ ಎರಡು ಗ್ರಾಮಗಳನ್ನು ‘ಬಾಳ್ಗೞ್ಚು’ ಎಂಬ ಉಂಬಳಿಯನ್ನಾಗಿ ಪಡೆದಿದ್ದನು. ಈ ಮೂವರು ಸೇರಿ ಹಲ್ಮಿಡಿಗೆ ಸಂಬಂಧಿಸಿದ—ಆ ಗ್ರಾಮದವರು ಮತ್ತು ಭಟ್ಟರೂ ಕೊಡಬೇಕಾಗಿದ್ದ—‘ಸಟ್ಬಿಂಗ’ ಹಾಗೂ ‘ಪತ್ತೊನ್ದಿ’ ಎಂಬ ಕರಗಳನ್ನು ಬಿಟ್ಟುಕೊಟ್ಟರು. ಹಲ್ಮಿಡಿ ಅಥವಾ ‘ಪಲ್ಮಡಿ’ ಈ ಅಧಿಕಾರಿಗಳಿಗೆ ಹೇಗೆ ದೊರಕಿತು ಎಂಬುದರ ನಿರೂಪಣೆಯನ್ನು ಇಲ್ಲಿ ಶಾಸನ ಹಾಕಿಸಿದ ಅಧಿಕಾರಿಗಳು ಕೊಟ್ಟಿದ್ದಾರೆ. ದಕ್ಷಿಣಾಪಥದ ಯುದ್ಧದಲ್ಲಿ ಮೃಗೇಶ ಹಾಗೂ ನಾಗ ಭಯಂಕರ ಭಟರಾಗಿ ಮೆರೆದರು; ತನ್ನಿಮಿತ್ತ ನರಿದಾವಿಳೆನಾಡಿನ ಸಟ್ಬಿಂಗದ ಅನುಭೋಗಿಗಳಾದರು. ವಿಜಅರಸನು ಕೇಕಯಪಲ್ಲವರ ಯುದ್ಧದಲ್ಲಿ ಒಡೆಯನಾದ ಬಟರಿಕುಲದ ಆಳಪಗಣಪಶುಪತಿಗೆ ಆಸರವನ್ನಿತ್ತು ವಿಜಯವನ್ನು ತಂದುಕೊಟ್ಟ; ತನ್ನಿಮಿತ್ತ ‘ಬಾಳ್ಗೞ್ಚು’ ಎಂಬ ಮಾನ್ಯವನ್ನು ಪಡೆದ. ಆಳಪಗಣಪಶುಪತಿ ದಾನಕೊಡುವುದರಲ್ಲಿ ‘ಪಶುಪತಿ’ (ಈಶ್ವರನ) ಹಾಗೆಯೆ ವ್ಯಕ್ತಿತ್ವವನ್ನು ಮೆರೆದ. ಆ ಕಾಲದ ಚರಿತ್ರೆಯನ್ನು ಅವಲೋಕಿಸಿದರೆ ‘ಆಳಕದಂಬ’ ಎಂಬ ದೊರೆ ಇದ್ದುದಕ್ಕೆ ಆಧಾರವಿಲ್ಲ. ವಾಸ್ತವವಾಗಿ ಇಲ್ಲಿರುವುದು ‘ಆಳ್ವಕದಂಬ’ ಎಂಬ ಉಕ್ತಿ. ವಿಜಅರಸನಿಗೆ ಉಂಬಳಿಕೊಟ್ಟ ಬಟರಿಕುಲದ ಅರಸುಗಳಾಗಲಿ ಅಧಿರಾಜರಾದ ಕದಂಬಕುಲದ ಅರಸರಾಗಲಿ ಕೊಟ್ಟ ಕೊಡುಗೆಯನ್ನು ಕಿತ್ತುಕೊಂಡರೆ ಪಂಚಮಹಾಪಾತಕಕ್ಕೆ ಹೋಗುತ್ತಾರೆಂಬುದು ಶಾಪಾಶಯವಾಕ್ಯದ ಉದ್ದೇಶವಾಗಿದೆ. ಅಂತೆಯೆ ‘ಆಳಕದಂಬ’ ಎಂಬ ಒಬ್ಬ ರಾಜನಿದ್ದನೆಂದು ಡಾ॥ ಎಂ. ಎಚ್. ಕೃಷ್ಣರು ನಿರೂಪಿಸಿರುವುದು[18] ‘ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ‘ಳ್ವ’ ಇದರಲ್ಲಿನ ‘ವ’ ಒತ್ತಕ್ಷರ ‘ಸ್ವಸ್ತಿ’ ಇತ್ಯಾದಿಗಳಲ್ಲಿನ ‘ಸ್ವ’ ದಲ್ಲಿಯ ‘ವ’ ಒತ್ತಕ್ಷರವನ್ನೂ ಇನಿತು ತೋಲನಕ್ಕಿಟ್ಟು ನೋಡಬಹುದು. ಆಗ ಸತ್ಯ ಹೊರಬೀಳುತ್ತದೆ. ‘ಆಳಕದಂಬ’ ಎಂದು ಸ್ವೀಕರಿಸಿದರೆ ‘ಕಳ್ದೋನ್’ ಎಂಬ ಮಾತಿಗೆ ಅರ್ಥವೇ ಇಲ್ಲದಂತಾಗುತ್ತದೆ. ಯಾವನು ಕಳೆಯುತ್ತಾನೊ ಅವನು ಎಂದಾಗ ಏಕವಚನ ಸ್ಪಷ್ಟವೇ ಇದೆ. ಅಷ್ಟೇ ಅಲ್ಲ ‘ಅನೇಕರು’ ಎಂಬ ಸೂಚನೆಯೂ ಇದೆ. ಇಡೀ ಶಾಸನದಲ್ಲಿ ಇನ್ನೆಲ್ಲಿಯೂ ಬರದ ‘ಆಳಕದಂಬ’ ಎಂಬ ವ್ಯಕ್ತಿಗೆ ಒಮ್ಮಿಂದೊಮ್ಮೆಗೆ ಕೊಟ್ಟಕೊಡಗಿಯನ್ನು ಕಿತ್ತುಕೊಳ್ಳುವ ಪ್ರಸಂಗ ಬಂದಿರುವುದು ಆಶ್ಚರ್ಯ. ಹೀಗೆ ಈತನನ್ನು ಒಬ್ಬವ್ಯಕ್ತಿ ಎಂದು ಸ್ವೀಕರಿಸಿದರೆ ಪೂರ್ವಾಪರ ಸಂಬಂಧವಿಲ್ಲದ ಅರ್ಥವನ್ನು ಹೇಳಿದಂತಾಗುತ್ತದೆ! ವಿದ್ವಾಂಸರು ಇನಿತು ಗಮನಿಸಬೇಕು. ಕಾಕುಸ್ಥವರ್ಮನ ಕಾಲವನ್ನು ದಿವಂಗತ ಎನ್. ಲಕ್ಷ್ಮೀನಾರಾಯಣರಾವ್ ಹಾಗೂ ದಿವಂಗತ ಆರ್. ಎಸ್. ಪಂಚಮುಖಿ[19] ಮತ್ತು ಡಾ॥ ದಿನೇಶಚಂದ್ರ ಸರ್ಕಾರ್ ಇವರುಗಳು ಕ್ರಿ. ಶ. 405-435 ಎಂದು[20] ತೀರ್ಮಾನಿಸಿರುವುದರಿಂದ ಹಲ್ಮಿಡಿಯ ಶಾಸನದ ಕಾಲವನ್ನು ಸು. ಕ್ರಿ.ಶ. 450 ಎಂದು ಹೇಳುವುದು ಇನ್ನು ವಿಹಿತವಲ್ಲ.

ಈ ವಂಶವು ಒಂದನೆಯ ಕೃಷ್ಣವರ್ಮನ ಕಾಲದಲ್ಲಿ ಒಡೆದು ಎರಡು ಶಾಖೆಯಾಯಿತು. ಈತನ ವಂಶದ ಇಮ್ಮಡಿ ಕೃಷ್ಣವರ್ಮನ ಎರಡು ಶಾಸನಗಳು ಈ ಸಂಪುಟದಲ್ಲಿವೆ (ಬೇ. 231 ಹಾಗೂ ಬೇ. 386). ಅವು ಕೂಡ ಮಹತ್ವದ ದಾಖಲೆ

---

[17] (a) Dr. D.C. Sircar, The Successors of the Sātavāhanas, p. 218
(b) Early History of The Deccan (Ed. Yazdani), p. 91f.

[18] MAR 1936, p. 74

[19] ಕರ್ನಾಟಕದ ಅರಸುಮನೆತನಗಳು (ಎಸ್. ಎಲ್. ರಾವ್ ಮತ್ತು ಆರ್. ಎಸ್. ಪಂಚಮುಖಿ), ಪು. 19

[20] Successors of the Sātavāhanas, p. 392

ಗಳಾಗಿವೆ. ಇಮ್ಮಡಿ ಕೃಷ್ಣವರ್ಮನು ‘ವೈಜಯನ್ತಿ’ ನಗರದ ಮೇಲೆ ವಿಜಯಯಾತ್ರೆಯ ಪ್ರಸ್ಥಾನ ಮಾಡಿದ ಸಂಗತಿಯನ್ನು, ತತ್ಸಮಯದಲ್ಲಿ ಮಾಡಿದ ದತ್ತಿಯನ್ನು, ದಾಖಲಿಸುತ್ತದೆ—ಬೇ. 231. ಇದರಲ್ಲಿ ಕೃಷ್ಣವರ್ಮನನ್ನು “ಕದಂಬಾನಾಂ ಷಷ್ಠಾನೋ ಲೋಕಪಾಲಃ” ಎಂದು ಬರೆದಿರುವುದರಿಂದ ಇವನಿಂದ ಹಿಂದಕ್ಕೆ ನಾವು ಐದುಜನ ರಾಜರನ್ನು ಗಣಿಸಬೇಕು. ಕೃಷ್ಣವರ್ಮ(II), ಈತನ ತಂದೆ ಸಿಂಹವರ್ಮ, ಸಿಂಹವರ್ಮನ ತಂದೆ ವಿಷ್ಣುದಾಸ ಅಥವಾ ವಿಷ್ಣುವರ್ಮ; ಈ ವಿಷ್ಣುವರ್ಮನ ಅಜ್ಜನು ಕೃಷ್ಣವರ್ಮ (I), ದೇವಗಿರಿ (ಧಾರವಾಡಜಿಲ್ಲೆ) ತಾಮ್ರಶಾಸನದಿಂದ ಈ ಒಂದನೆಯ ಕೃಷ್ಣವರ್ಮನಿಗೆ ಯುವರಾಜ ದೇವವರ್ಮನೆಂಬ ಒಬ್ಬ ಮಗನಿದ್ದುದು ಸ್ಪಷ್ಟವಿದೆ.[21] ಈ ದೇವವರ್ಮನ ಮಗನೇ ಒಂದನೆಯ ಕೃಷ್ಣವರ್ಮನ ಮೊಮ್ಮಗನಾದ ವಿಷ್ಣುವರ್ಮನಾಗಿರಬಹುದು. ಇಮ್ಮಡಿ ಕೃಷ್ಣವರ್ಮನು ತನ್ನನ್ನು ಐದನೆಯ ಅರಸು ಎಂದು ಹೇಳಿಕೊಂಡಿರುವುದರಿಂದ ಈ ಶಾಖೆಯ ವಂಶವೃಕ್ಷವನ್ನು ಕೆಳಗಿನಂತೆ ಪುನಾರಚಿಸಿಕೊಳ್ಳಬೇಕು. ಬೇ. 386ನೆಯ ಶಾಸನದಲ್ಲಿ ಈ ಕೃಷ್ಣವರ್ಮನನ್ನು ಅನೇಕ ಯುದ್ಧಗಳನ್ನು ಮಾಡಿದವನೆಂದೂ ‘ಅನೇಕ ವಿದ್ಯಾವಿಶಾರದ’ನೆಂದೂ ವರ್ಣಿಸಿದೆಯಲ್ಲದೆ ಇವನ ತಂದೆ ಸಿಂಹವರ್ಮನನ್ನು ‘ಗಂಧರ್ವ ಹಸ್ತಿ ಶಿಕ್ಷಾಧನುರ್ವೇದ’ ವಿದ್ಯೆಗಳಲ್ಲಿ ಆತ ವತ್ಸರಾಜ ಹಾಗೂ ಅರ್ಜುನ ಇವರಿಗೆ ಸಮವೆಂದು ವಿವರಿಸಿದೆ. ಬೇ. 536, ಈ ಕೃಷ್ಣವರ್ಮ (II) ದೊರೆಯ ಮೊಮ್ಮಗನಾದ ಭೋಗಿವರ್ಮನಿಗೆ ಸಂಬಂಧಿಸಿದೆ. ಭೋಗಿವರ್ಮ ತನ್ನ ಪುತ್ರ ವಿಷ್ಣುವರ್ಮನ ವಿಜ್ಞಾಪನೆಯ ಮೇರೆಗೆ ತಗರೆ ವಿಷಯದಲ್ಲಿ ಕಿಱುಕೂಡಲೂರು ಗ್ರಾಮವನ್ನು ಭೂತಶರ್ಮನಿಗೆ ದತ್ತಿಕೊಟ್ಟನು. ಈ ಮೂರು ಶಾಸನಗಳಿಂದ ಕದಂಬ ವಂಶದ ಈ ಶಾಖೆಯ ವಂಶವೃಕ್ಷವನ್ನು ಹೀಗೆ ನಿರೂಪಿಸಬಹುದು :



ಇಮ್ಮಡಿ ಕೃಷ್ಣವರ್ಮನಿಗೆ ‘ಇಜ್ಜಣಗ್ರಾಮ’ ಎಂಬುದೇ ರಾಜಧಾನಿಯಾಗಿರಬಹುದು; ಏಕೆಂದರೆ ಆತ ಅಲ್ಲಿನ ದೊಡ್ಡದೇವಸ್ಥಾನದಲ್ಲಿಯ ಮಹಾದೇವರ ಮುಂದೆ ವಿಜಯಯಾತ್ರೆಯ ಸಂದರ್ಭದಲ್ಲಿ ದಾನಕೊಟ್ಟನು; ದಾನಪಡೆದ ವ್ಯಕ್ತಿಯ ಆಶೀರ್ವಚನವನ್ನು ಗಮನಿಸಿ.

ಕದಂಬ–ಉತ್ತರ: ಕಾಲಗತಿಯಲ್ಲಿ ಕದಂಬ–ವಂಶವೃಕ್ಷ ಹಲವು ಶಾಖೆಗಳಲ್ಲೊಡೆದು ಕರ್ನಾಟಕದ ತುಂಬ ಬೆಳೆದಿತು. ಸವಿವರ ದಾಖಲೆಗಳು ದೊರಕದೆ ಮೂಲ ಮನೆತನದ ಸಂಬಂಧಗಳನ್ನು ಶೃಂಖಲಾಬದ್ಧವಾಗಿ ತೋರಿಸುವುದು ಅಸಾಧ್ಯದ ಸಂಗತಿ; ಅದರಲ್ಲೂ 400–500 ವರ್ಷಗಳ ಅನಂತರದ ಸಂಗತಿಗಳನ್ನು ಹೊಂದಿಸುವುದು ಕಷ್ಟಕರವಷ್ಟೆ ಅಲ್ಲ ಸಾಧಾರಪೂರ್ವಕ ಹೊಂದಾಣಿಕೆ ಮಾಡುವುದು ಹೇಗೆ? ಅಂತೆಯೆ ಸು.ಕ್ರಿ.ಶ. 10ನೆಯ ಶತಮಾನದ ಅನಂತರ ದೊರಕಿದ ಶಾಸನಗಳನ್ನು ಬೇರ್ಪಡಿಸಿ ನೋಡಬೇಕಾಗಿದೆ.

---

21. (a) E.I. Vol. VI, p. 17
    (b) Corpus of Kadamba Inscriptions (Ed. B.R. Gopal), p. 136;
    ಶಾಸನದ ಈ ವಾಕ್ಯಗಳನ್ನು ಗಮನಿಸಿ :...ಉದಿತ ಶಶಿಸದೃಶೈಕಾತಪತ್ರಸ್ಯ ಧರ್ಮಮಹಾರಾಜಸ್ಯ ಶ್ರೀ ಕೃಷ್ಣವರ್ಮ್ಮಣಃ ಪ್ರಿಯತನಯೋ ದೇವವರ್ಮ್ಮ ಯುವರಾಜಃ . . . .
22. ಬೇ. 231 ರಲ್ಲಿನ ‘ಕೃಷ್ಣವರ್ಮ್ಮಣಃ ಪೌತ್ರಃ ಶ್ರೀ ವಿಷ್ಣುದಾಸಸ್ಯ’ ಎಂಬ ಉಕ್ತಿಯನ್ನು ಗಮನಿಸಿ.

ಸಕಲೇಶಪುರ ಶಾ.ಸಂಖ್ಯೆ 14ರಲ್ಲಿ ಕದಂಬರಸನೊಬ್ಬನು ದತ್ತಿಕೊಟ್ಟ ಸಂಗತಿ ಬಂದಿದೆ. ಶಾಸನದಲ್ಲಿ ತೇದಿ ಇಲ್ಲ, ಆದರೆ ಲಿಪಿಶಾಸ್ತ್ರದ ಆಧಾರದ ಮೇಲೆ ರೈಸ್ ಅವರು ಇದರ ಕಾಲವನ್ನು ಸು.ಕ್ರಿ.ಶ. 1000 ಎಂದಿದ್ದಾರೆ[23]. ಶಾಸನದಲ್ಲಿ ‘ದೇವದೇವ ಮಹಾರಜ’ ಎಂದು ಅರಸನ ಹೆಸರಿದ್ದು ಈತನೇ ದತ್ತಿಯನ್ನು ಕೊಟ್ಟ ‘ಕದಂಬರಸ’ ಆಗಿರಲು ಸಾಧ್ಯ. ‘ದೇವದೇವಮಹಾರಾಜ’ ಎಂಬ ಹೆಸರು ಗಮನಾರ್ಹ; ‘ದೇವವರ್ಮ’ ಎಂಬುದಕ್ಕೆ ತುಂಬ ಹತ್ತಿರವಾಗಿದೆ. ಆಲೂರು ತಾಲ್ಲೂಕಿನ ಎರಡು ಶಾಸನಗಳು ಅಶ್ವಮೇಧ ಯಜ್ಞಗಳನ್ನು ಮಾಡಿದ ಮಧುಕೇಶ್ವರ ದೇವರ ಭಕ್ತರಾದ ಕದಂಬರಾಜರನ್ನು ಕುರಿತದ್ದಾಗಿದೆ. ರಾಜರ ಹೆಸರು ಅಳಿಸಿ ಹೋಗಿರುವುದರಿಂದ ಸರಿಯಾದ ಸಂಬಂಧಗಳನ್ನು ಗುರುತಿಸಲು ಸಾಧ್ಯವಿಲ್ಲ[24]. ಇವರು ‘ಮಹಾರಾಜ’ ಎಂಬ ಬಿರುದನ್ನೂ ಮತ್ತು ‘ಬನವಸೆ’ ಎಂಬ ರಾಜಧಾನಿಯನ್ನೂ ಹೊಂದಿರುವುದು ಗಮನಾರ್ಹ. ಹಾಸನ ಜಿಲ್ಲೆಯಲ್ಲೂ ಒಂದು ಬನವಸೆ ಇದೆ[25].

ಸಕಲೇಶಪುರ 45ನೆಯ ಶಾಸನವು ಒಂದು ಕದಂಬ ಮನೆತನವನ್ನು ದಾಖಲಿಸುತ್ತದೆ. ಈ ಶಾಸನ ಹಳೇಬೇಲೂರು ಎಂಬ ಊರಲ್ಲಿ ಕೇಶವ ದೇವಸ್ಥಾನದಲ್ಲಿದೆ. ಇದರ ಕಾಲ ಕ್ರಿ.ಶ. 1095. ದಯಸಿಂಹ ನೃಪ ಹಾಗೂ ಆತನ ತಾಯಿ ಅರಸಿ ಮೇಚಲದೇವಿ, ಇವರು ಹಾರುವ ಬೇಲುಹೂರಲ್ಲಿ ‘ವಾಸುದೇವ’ ದೇವನಿಗೆ ದೇವಾಲಯವನ್ನು ಕಟ್ಟಿಸಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯದಲ್ಲಿ ಶ್ರೀಕಾರ್ಯಕ್ಕೆಂದು ದತ್ತಿಯನ್ನು ಬಿಟ್ಟರು. ಮೇಚಲದೇವಿ ತಮ್ಮ ತಾಯಿ ಅರಸಿಯಬ್ಬೆಗೆ ಪುಣ್ಯವಾಗಲಿಯೆಂದು ಕುಂಬಾರನಹಳ್ಳಿಗೆ ‘ಅರಸಿಯಪುರ’ ಎಂದು ಹೆಸರಿಟ್ಟು ಐವರು ಸುಬ್ರಾಹ್ಮಣರಿಗೆ ಸರ್ವಬಾಧಾಪರಿಹಾರವಾಗಿ ದಾನಕೊಟ್ಟಳು. ಈ ಶಾಸನ ಈಗಿನ ಪ್ರಸಿದ್ಧವಾದ ಬೇಲೂರ ಚೆನ್ನಕೇಶವ ದೇವಾಲಯದ ನಿರ್ಮಾಣಕ್ಕೂ ಅಲ್ಲಿ ವಿಷ್ಣುವರ್ಧನ ಹಾಗೂ ಶಾಂತಲಾದೇವಿಯರು ಹಾಕಿಸಿದ ಶಾಸನಕ್ಕೂ ಒಂದು ಮಾದರಿಯಾಗಿದೆ[26]. ಎರಡೂ ಶಾಸನಗಳ ಆರಂಭದ ಪದ್ಯ ಒಂದೇ ಆಗಿದೆ:

> ಶ್ರೀಮತ್ತ್ರೈಲೋಕ್ಯಪೂಜ್ಯಾಯ ಸರ್ವ್ವಕರ್ಮ್ಮಸುಸಾಕ್ಷಿಣೇ
> ಫಳದಾಯ ನಮೋ ನಿತ್ಯಂ ಕೇಶವಾಯ ಶಿವಾ[ಯ]ಚ|| (ಬೇಲೂರು)
> ಶ್ರೀಮತ್ತ್ರೈಲೋಕ್ಯನಾಥಾಯ ಸರ್ವ್ವಕರ್ಮ್ಮಸುಸಾಕ್ಷಿಣೇ
> ಫಳದಾಯ ನಮೋನಿತ್ಯಂ ಕೇಶವಾಯ ಶಿವಾ[ಯ]ಚ ॥ (ಹಳೇಬೇಲೂರು)

ಹಳೇಬೇಲೂರಿನ ಶಾಸನದ ಮಾತು ‘ನಾಥಾಯ’ ಬೇಲೂರ ಶಾಸನದಲ್ಲಿ ‘ಪೂಜ್ಯಾಯ’ ಎಂದಾಗಿದೆ ಅಷ್ಟೇ. ದಯಸಿಂಹನ ಬಿರುದಾವಳಿಗಳನ್ನು ವಿಷ್ಣುವರ್ಧನನ ಬಿರುದಾವಳಿಗಳ ಜೊತೆಗೆ ಹೋಲಿಸಬೇಕು; ವಿಷ್ಣುವರ್ಧನನ ಶಾಸನಕಾರನು ದಯಸಿಂಹನ ಶಾಸನವನ್ನು ಅನುಕರಿಸಿದ ಹಾಗೆ ತೋರುತ್ತದೆ. ಈ ಇಬ್ಬರು ಮಾಂಡಲಿಕರೂ ತಮ್ಮ ಅಧಿರಾಜನಾದ 6ನೆಯ ವಿಕ್ರಮಾದಿತ್ಯನ ಶಾಸನಗಳನ್ನು ಅನುಕರಿಸಿರಬಹುದು. ವಿಕ್ರಮಾದಿತ್ಯನ ರಾಣಿಯರಾದ ಚಂದಲದೇವಿ, ಜಾಕಲದೇವಿ, ಮಲಹುಣಿದೇವಿ ಮತ್ತು ಮೈಳಲದೇವಿ ಮುಂತಾದವರು ತಳೆದಿರುವ ಬಿರುದಾವಳಿಗಳನ್ನು ಶಾಂತಲೆಯೂ ಧರಿಸಿದ್ದಾಳೆ[27]; ಇದು ಗಮನಾರ್ಹವಾದ ಸಂಗತಿ. ಈ ಇಬ್ಬರು ಮಾಂಡಲಿಕರೂ 6ನೆಯ ವಿಕ್ರಮಾದಿತ್ಯನ ‘ತ್ರಿಭುವನಮಲ್ಲ’ ಎಂಬ ಬಿರುದನ್ನು ಧರಿಸಿರುವುದೂ ಗಮನಾರ್ಹ. ಈ ಶಾಸನದ ಪದ್ಯ—

> ಸ್ತುತಿವಚನಂಗಳಲ್ದು ರಿಪುಕೋಟಿಗಭೀರ ಪರಾಕ್ರಮಂ ದಯಾ
> ಸತಿ ಸತಿಯಪ್ಪಕಾರಣದೆ ತಾನೆ ಕೃಪಂ ಮನಮೊಲ್ದುಬಂದವ
> ರ್ಗ್ಗತಿಶಯವಾಗಲಿತ್ತು ವಿಷ....ಕೀರ್ತ್ತಿಯೆನಲ್ಕೆ ಬೇರೆ ಭಾ
> ರತಕಥೆಯೆಂಬುದೇಕೆ ದಯಸಿಂಹನೃಪಾಳಚರಿತ್ರ ಸಾಲದೇ ॥

ಇದು ವಿಷ್ಣುವರ್ಧನನ ಸ್ತುತಿರೂಪವಾಗಿದೆ ಒಂದು ಶಾಸನದಲ್ಲಿ:

---

23. ಎ.ಕ. ಸಂ. 5 (ಬಿ. ಎಲ್. ರೈಸ್) ಮಂಬಾ. 28, ಪು. 268
24. ಎ.ಕ. ಸಂ. 8 (1984) ಆಲೂರು ಶಾ. ಸಂ. 8 ಹಾಗೂ 23, ಪು. 438, 549
25. ಅದೇ ಸಂ. ಗ್ರಾಮಗಳ ಅಕಾರಾದಿ, ಪು. XIX
26. ವಿಷ್ಣುವರ್ಧನ ಹಾಗೂ ಶಾಂತಲಾದೇವಿಯವರು ಕೇಶವದೇವಾಲಯವನ್ನು ಕಟ್ಟಿಸಿ ಶಾಸನ ಬರೆಸಿದುದು ಕ್ರಿ.ಶ. 1117ರಲ್ಲಿ; ನೋಡಿ ಈ ಸಂಪುಟದ ಶಾಸನಸಂಖ್ಯೆ ಬೇ. 16, ಪು. 11
27. (a) Jainism in South India and Some Jaina Epigraphs (Dr. P.B. Desai), pp. 236–37, 252–53.
    (b) ಮೈಳಲದೇವಿಯ ಶಾಸನ ‘ಭತ್ತಗ್ರಾಮಕುಣೆಲಂಗೆಜಿ[3]’ ಊರಲ್ಲಿದೆ. ಇದರ ಪ್ರತಿ (ನಕಲು) ನನ್ನ ಬಳಿಯಲ್ಲಿದೆ.

ಸ್ತುತಿವಚನಂಗಳಲ್ತು ರಿಪುಕೋಟಿಗೆ ಭೀಮಪರಾಕ್ರಮಂ ದಯಾ
ಸತಿ ಸತಿಯಪ್ಪಕಾರಣದೆ ತಾನೆ ಕೃಪಂ ಮನಮೊಲ್ದು ಬೇಳ್ಪವ
ರ್ಗ್ಗತಿಶಯವಾಗಲಿತ್ತು ವಿಪುಳಾರ್ಜ್ಜುನ ಕೀರ್ತಿಯೆನಲುಕೆ ಬೇಱೆ ಭಾ
ರತಕಥೆಯೆಂಬುದೇಕೆ ಸಲೆ ವಿಷ್ಣುನೃಪಾಳಚರಿತ್ರಂ ಸಾಲದೇ ॥[28]

ಹೀಗೆ ಪ್ರಸಿದ್ಧನಾದ ಈ ದಯಸಿಂಹನೃಪಾಲನ ವಂಶದ ವಿವರ ಶಾಸನದಲ್ಲಿ ಹೀಗಿದೆ:



ಇಲ್ಲಿನ ಚಾಗಿಮಹಾರಾಜ (I) ಮತ್ತು ದಿನಾಂಕವಿಲ್ಲದ ಹೆಗ್ಗಡದೇವನಕೋಟೆಯ ಶಾಸನ ಸಂ. 110ರಲ್ಲಿ ಬಂದಿರುವ ಚಾಗಿಮಹಾರಾಜ[29] ಇಬ್ಬರೂ ಒಂದೇ ಆಗಿರಲು ಸಾಧ್ಯವಿದೆ. ಬಯಲ್ನಾಡು—ಐದುಮೂನೂರು ಪ್ರದೇಶವನ್ನು ಕದಂಬದೊರೆಗಳಾದ ಕ್ರಿ.ಶ. 998--99ರಲ್ಲಿದ್ದ ರವಿವರ್ಮ್ಮ[30], ಕ್ರಿ.ಶ. 1079 ರಲ್ಲಿ ಇರುವ ರವಿವರ್ಮ್ಮ[31], ಕ್ರಿ.ಶ. 1107 ರಲ್ಲಿಯ ರವಿಚಲ್ಲಮ್ಮ[32] ಮತ್ತು ಕ್ರಿ.ಶ. 1137ರಲ್ಲಿದ್ದ ಮುಕಣ್ಣ ಕಡಂಬ[33] ಮುಂತಾದ ರಾಜರು ಆಳುತ್ತಿದ್ದರೆಂಬುದು ಸುಸ್ಪಷ್ಟ. ಇಬ್ಬರು ರವಿವರ್ಮರ ಮಧ್ಯದಲ್ಲಿ ಎಂದರೆ ಸು.ಕ್ರಿ.ಶ. 1030ರ ಎಡಬಲದಲ್ಲಿ ದಯಸಿಂಹನ ಅಜ್ಜ ಚಾಗಿಮಹಾರಾಜನು ಇದ್ದನೆಂದರೆ ತಪ್ಪಾಗದು. ಕ್ರಿ.ಶ. 1095 ರಲ್ಲಿದ್ದ ದಯಸಿಂಹನ ಅಜ್ಜ ಅವನಿಗಿಂತ ಮುಂಚೆ ಸು. 60 ವರುಷ ಹಿಂದಕ್ಕೆ ಇದ್ದನೆಂದು ಹೇಳಬಹುದು. ಇನ್ನು ಈ ಶಾಸನಕ್ಕೆ ಕಾರಣಕರ್ತೆಯಾದ ಮೇಚಲದೇವಿಯ ತಂದೆಯ ಹೆಸರು 'ಬಂಕಿಬಳರಿಶಮಹಿಪ' ಎಂದಿದೆ. ಈ ವ್ಯಕ್ತಿ 'ಬಂಕಿ ಅರಸ' ನೇ ಆದರೆ ಈತನನ್ನು ಹೆಗ್ಗಡದೇವನಕೋಟೆಯ ಸೋಗಳ್ಳಿಯ ಶಾಸನದಲ್ಲಿ[34] ಬಂದಿರುವ ಬಂಕಿಯರಸನೊಂದಿಗೆ ಸಮೀಕರಿಸಬಹುದು.

ಬೇಲೂರು 513ನೆಯ ಶಾಸನವು ಇನ್ನೊಂದು ಕದಂಬವಂಶದ ವಿವರಗಳನ್ನು ದಾಖಲಿಸುತ್ತದೆ. ಕ್ರಿ.ಶ. 1096 ರಲ್ಲಿ ಎಱೆಯಂಗದೇವ ಹಾಗೂ ಆತನ ಅರಸಿ ಅಸವಬ್ಬರಸಿ ಇವರು ಬಸದಿಯನ್ನು ಕಟ್ಟಿಸಿದರು ಮತ್ತು ಆ ಬಸದಿಗೆ ದತ್ತಿಯನ್ನು ಬಿಟ್ಟರು. ಇದರಲ್ಲಿ ಎಱೆಯಂಗದೇವನ ವಂಶಾವಳಿಯ ವಿವರಗಳು ಹೀಗಿವೆ:

(ಮುಂದುವರಿದಿದೆ)

---

[28] ಎ.ಕ. ಸಂ. 8 (1984) ಹಾಸನ–116, ಪು. 332-33

* ಇದು ಪಾರ್ತ್ಥಿಗ<ಪಾರ್ತ್ಥ=ಅರ್ಜುನ ಇರಬಹುದು.

[29] ಎ.ಕ. ಸಂ. 3 (1974) ಹೆ.ಕೋ. 110, ಪು. 507

[30] ಅದೇ ಹೆ.ಕೋ. 142, ಪು. 523

[31] ಅದೇ ಹೆ.ಕೋ. 123, ಪು. 515

[32] ಅದೇ ಹೆ.ಕೋ. 135, ಪು. 520

[33] ಅದೇ ಹೆ.ಕೋ. 117, ಪು. 511

[34] ಅದೇ ಹೆ.ಕೋ. 135, ಪು. 520

ಜಯವರ್ಮ (ಕದಂಬಾಮ್ನಾಯ)
|
ರಣಕಿಕ್ಷಿತಿಪ
|
ಹೃದುವನೃಪ
ಹೆಂ. ಪೋಚಾಯಿ
|
ಬೂತ
|
ಚಿಣ್ಣ (I)
ಹೆಂ. ಸುಗ್ಗಿಯಬ್ಬರಸಿ
|
ಎಱೆಯಂಗ (I)
ಹೆಂ. ಏಚಾಂಬಿಕೆ
|
ಚಿಣ್ಣ (II)
|
ಎಱೆಯಂಗ (II)
ಹೆಂ. ಅಸವಬ್ಬರಸಿ

ಈ ಶಾಸನದ ಬೆಳಕಿನಲ್ಲಿ ಬೇಲೂರು 467ನೆಯ ಶಾಸನದಲ್ಲಿ ಬರುವ ಎಱೆಯಮರಸ ಹಾಗೂ ಏಚಲದೇವಿ ದಂಪತಿಗಳನ್ನು ಇದೇ ವಂಶದವರೆಂದು ಗುರುತಿಸಬಹುದು. ಅವರು ಚವುಂಡರಾಯ ಎನ್ನುವ ವ್ಯಕ್ತಿಯು ಮಾಡಿಸಿದ ವಡುಗ (ಅಡುಗೂರು) ನಾರಾಯಣದೇವರಿಗೆ ಧರ್ಮದತ್ತಿಯನ್ನು ಬಿಟ್ಟಿದ್ದಾರೆ.

ದಿವಂಗತ ಬಿ.ಎಲ್. ರೈಸ್ ಅವರು "We next have a series of seven inscriptions in Manjarabad taluq connected with a Kadamba king named Nītimahārāja—"[35] ಎಂದು ನೀತಿಮಹಾರಾಜನೊಬ್ಬನನ್ನು ಕದಂಬ ದೊರೆ ಎಂದು ಗುರುತಿಸಿದ್ದಾರೆ. ಆರು ದಾಖಲೆಗಳು ನೀತಿಮಹಾರಾಜನಿಗೆ ಸಂಬಂಧಿಸಿವೆ : ಸಪು. 28, 29, 30, 32, 33 ಮತ್ತು 55. ಸಪು. 29ನೆಯ ಶಾಸನದಲ್ಲಿ ಬಂದಿರುವ ಸಂಗತಿಯನ್ನು ಪರಿಶೀಲಿಸಿದರೆ ಈ ನೀತಿಮಹಾರಾಜನು ಕದಂಬ ವಂಶಕ್ಕೆ ಸಂಬಂಧಪಟ್ಟಿಲ್ಲವೆಂದು ವ್ಯಕ್ತವಾಗುತ್ತದೆ:

1. .ಸಿ ಸತ್ತಂ ಬಿಟ್ಟ ಪಣವೊನ್ದು ಕದಂಬರಾಜ್ಯವು
2. .ನ ಅವರ ಪೆಣ್ಣಂಗಳಿಗಂ ಸಲ್ಗು ನೀತಿಮಾ
3. ಹಾರಾಜ ಬಿಟ್ಟ ಇದಕ್ಕೆ ಸಾಕ್ಷಿ ಪೆರ್ಗ್ಗಡೆ ಬಿ
4. ಯ್ಯನ ವಪ್ಪ ಒಬ್ಬರು ಅಪ್ಪನೆಗೆಯೆ
5. ನಿದಿಗೋಮನುಂ

ಕದಂಬರಾಜ್ಯವು ಈ ವೀರಗಲ್ಲಿನ ಪ್ರಕಾರ ಸತ್ತವೀರನ ಸತಿಯರಿಗೆ ಸಲ್ಲುತ್ತದೆ; ಅದನ್ನು ಬಿಟ್ಟುಕೊಟ್ಟ ವ್ಯಕ್ತಿ ನೀತಿಮಾರ್ಗ ಆದುದರಿಂದ ಈತ ಕದಂಬ ವಂಶದ ವ್ಯಕ್ತಿಯಾಗದೆ ಬೇರೆ ಇನ್ನೊಂದು ವಂಶಕ್ಕೆ ಸಂಬಂಧಪಟ್ಟಿದ್ದಾನೆ. ಪ್ರಾಯಃ ಗಂಗವಂಶದ ದೊರೆಯಾಗಿರಬಹುದು. ಏಕೆಂದರೆ 'ಸತ್ಯವಾಕ್ಯ' ಮತ್ತು 'ನೀತಿಮಾರ್ಗ' ಇವು ಆ ಮನೆಯ ರಾಜರು ಒಬ್ಬರಾದ ಮೇಲೆ ಒಬ್ಬರು ತಮಗೆ ಹೀಗೆ ಬಿರುದನ್ನು ಇಟ್ಟುಕೊಳ್ಳುತ್ತಿದ್ದರು. 'ನೀತಿಮಾರ್ಗ ಮಹಾರಾಜ' ಇದರ ಸಂಕ್ಷಿಪ್ತರೂಪವೇ 'ನೀತಿ ಮಹಾರಾಜ' ಆಗಿರಲು ಸಾಧ್ಯ.

ಸಪು. 36ನೆಯ ಶಾಸನವು ಲಿಪಿಯ ಆಧಾರದಿಂದ ಕ್ರಿ.ಶ. 10-11ನೆಯ ಶತಮಾನದ್ದೆಂದು ಪರಿಗಣಿಸಲಾಗಿದೆ. ಈ ಶಾಸನದಲ್ಲಿ 'ಕಾದಂಬರಾಜ್ಯ'ದ ಉಲ್ಲೇಖವಿದೆ; ವಾಮಶಿವದೇವನ ಪುತ್ರನೆಂದೂ 'ಕಾದಂಬರಾಜ್ಯ ಮೂಳಸ್ತಂಭ' ಎಂದೂ ತನ್ನ ಬಗ್ಗೆ ಚಾವು/ಚಾವ/ಚಾವನೆಗ್ಗಡೆ ಎಂಬ ವ್ಯಕ್ತಿ ಹೇಳಿಕೊಂಡಿದ್ದಾನೆ. ಈ ಕದಂಬ ದೊರೆ ಯಾರೆಂಬುದು ಶಾಸನದಿಂದ ತಿಳಿದುಬರುವುದಿಲ್ಲ.

---

35. E.C. Vol. V (BLR), Introduction, p. iv (1902)

ಗಂಗರು

ಈ ಸಂಪುಟದಲ್ಲಿ ಗಂಗವಂಶದ ಚರಿತ್ರೆಗೆ ಸಂಬಂಧಿಸಿದಂತೆ 11 ಶಾಸನಗಳಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನ ಶಾಸನವೆಂದರೆ ತಗರೆ ಗ್ರಾಮದಲ್ಲಿ ದೊರೆತ ಬೇ. 537. ಇದು ಗಂಗದೊರೆ ಪೊಲವೀರನೆಂಬ ಕೊಙ್ಗಣಿಮಹಾರಾಜನಿಗೆ ಸಂಬಂಧಿಸಿದೆ. ಪೊಲವೀರ ತನ್ನ ಯಶೋವೃದ್ಧ್ಯರ್ಥವಾಗಿ ಸೇಂದ್ರಕ ವಿಷಯದಲ್ಲಿಯ 'ಪಲಚ್ಚೊಗೆ' ಎಂಬ ಗ್ರಾಮವನ್ನು ಸರ್ವಪರಿಹಾರವಾಗಿ ಕೌಶಿಕಗೋತ್ರದ ನಾಗಶರ್ಮ ಎಂಬ ಬ್ರಾಹ್ಮಣನಿಗೆ ದತ್ತಿಯಾಗಿ ಕೊಟ್ಟನು. ಈ ಪಲಚ್ಚೊಗೆ ಗ್ರಾಮವು ವಳಾವಿದೇಶದಲ್ಲಿತ್ತು. ರಾಜಕೀಯ ಚರಿತ್ರೆಯನ್ನು ಗಮನಿಸಿದರೆ ಅಣ್ಣನು ಮಹಾರಾಜನಾಗಿದ್ದಾಗ ತಮ್ಮನೂ ಮಹಾರಾಜನಾಗಿದ್ದು ಸಿಂಹಾಸನದ ಮೇಲೆ ಕೂಡುವಂತಿಲ್ಲ. ತಮ್ಮನೂ ಮಹಾರಾಜನಾಗಿರಬೇಕಾದರೆ ಅಣ್ಣನಿಗೆ ಮಕ್ಕಳಿರುವಂತಿಲ್ಲ. ಅಣ್ಣನಿಗೆ ಮಕ್ಕಳಿದ್ದು ಅವರೇ ಸಿಂಹಾಸನಕ್ಕೆ ಬಾಧ್ಯಸ್ಥರಾಗಿರುವುದು, ಗಂಗರ ಶಾಸನಗಳಿಂದ ತಿಳಿದುಬಂದಿರುವುದರಿಂದ, ಮುಷ್ಕರನ ತಮ್ಮ ಪೊಲವೀರನು ಮಹಾರಾಜನ ಪದವಿಯನ್ನು ಅಲಂಕರಿಸಿದುದು ಏಕೆ ಹೇಗೆ? ಎಂಬುದು ಅರ್ಥವಾಗುತ್ತಿಲ್ಲ.

"ದುರ್ವಿನೀತನ ಮಕ್ಕಳಾದ ಮುಷ್ಕರ ಪೊಲವೀರರಲ್ಲಿ ಯಾರು ಹಿರಿಯರೆಂಬುದು ತಿಳಿದಿಲ್ಲ. ಮುಷ್ಕರನ ಸಂತತಿಯ ರಾಜರೇ ಕೊಂಗುಣಿಪಟ್ಟವನ್ನು ವಹಿಸಿದುದರಿಂದ ಅವರು ಹಿರಿಯ ಮನೆತನಕ್ಕೆ ಸೇರಿದವರಿರಬಹುದೆಂದು ತಿಳಿದು ಮುಷ್ಕರನೇ ದೊಡ್ಡವನೆಂದು ವಂಶಾವಳಿಯಲ್ಲಿ ತಾತ್ಪೂರ್ತಿಕವಾಗಿ ಹಿಡಿದಿದ್ದೇವೆ."—ಎಂದು ವಿದ್ವಾಂಸರು ಬರೆದಿದ್ದಾರೆ.[36] ಈ ಶಾಸನದಲ್ಲಿ ಮುಷ್ಕರನ ಉಲ್ಲೇಖವೇ ಇಲ್ಲ. ಪೊಲವೀರನು ತನ್ನ ವಂಶಾವಳಿಯ ಬಗೆಗೆ ಹೀಗೆ ಬರೆಸಿದ್ದಾನೆ:

ಗಂಗಾನ್ವಯ ಮಹಾರ್ಣವದಲ್ಲಿ—ಮಾಧವವರ್ಮ್ಮ
(ಹೆಂಡತಿ ಕದಂಬ ಕೃಷ್ಣವರ್ಮ ಮಹಾರಾಜನ ತಂಗಿ)
|
ಅವಿನೀತ
|
ನಿರ್ವ್ವಿನೀತ (ದುರ್ವ್ವಿನೀತ)
ಕೊಙ್ಗಣಿ ಮಹಾರಾಜ
|
ಪೊಲವೀರ ಕೊಙ್ಗಣಿ ಮಹಾರಾಜ

ಆತ ವಿದ್ಯಾವಿನಯ ಸಂಪನ್ನನಾಗಿದ್ದನು, ಶುಭ್ರಕೀರ್ತಿವಂತನಾಗಿದ್ದನು ಮತ್ತು 'ಕಾನ್ತಾವಿನೀತ' ಎಂಬ ಬಿರುದನ್ನು ಹೊಂದಿದ್ದನು. ಪೊಲವೀರನೇ ಹಿರಿಯನಾಗಿದ್ದು ತಂದೆಯ ಅನಂತರ ಮಹಾರಾಜನಾಗಿರಲು ಸಾಧ್ಯವಿದೆ. ಆತ ತಾನು ಮಹಾರಾಜನಾಗಿದ್ದಾಗ ಈ ಶಾಸನವನ್ನು ಬರೆಯಿಸಿದ್ದಾನೆ. ಅವನು ತಳೆದ "ಕೊಙ್ಗಣಿ ಮಹಾರಾಜ" ಎಂಬ ಬಿರುದು ಗಮನಾರ್ಹ.

ಬೇ. 472ನೆಯ ಶಾಸನವು ಗಂಗದೊರೆ ಶ್ರೀಪುರುಷನ ಆಳ್ವಿಕೆಗೆ ಸಂಬಂಧಿಸಿದೆ. ಶ್ರೀಪುರುಷನು ರಾಜ್ಯವಾಳುತ್ತಿರಲು 'ಲೋಕಗಾಳ್ಳ' ಎಂಬ ವ್ಯಕ್ತಿ 'ಪೊಸವುರ' ಎಂಬ ಗ್ರಾಮವನ್ನು ಬ್ರಾಹ್ಮಣರಿಗೆ 'ಬ್ರಹ್ಮದೇಯ' ಕೊಟ್ಟು ಅಲ್ಲಿನ ದೇವರಿಗೆ ಮೂಗಂಡುಗ ಬೆದೆ ಮಣ್ಣನ್ನು (ಖುಷ್ಕಿ ಜಮೀನನ್ನು) ದತ್ತಿಯಾಗಿ ಕೊಟ್ಟನು. 'ಲೋಕಗಾಳ್ಳರ್' ಎಂಬಲ್ಲಿ ಬಹುವಚನ ಪ್ರಯೋಗವಿದ್ದುದು ಅದು ಅನಂತರದ ಗಂಗದೊರೆ ಶಿವಮಾರನ 'ಲೋಕಧೂರ್ತ' ಎಂಬ ಬಿರುದನ್ನೂ, ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ 'ಗುಣಗಳ್ಳ' ಎಂಬ ಬಿರುದನ್ನೂ ಮತ್ತು ಬೋಧನದ ಚಾಳುಕ್ಯ ಇಮ್ಮಡಿ ಅರಿಕೇಸರಿ ಎಂದರೆ ಪಂಪನ ಆಶ್ರಯದಾತನು ತನಗೆ 'ಪ್ರಿಯಗಳ್ಳ' ಎಂಬ ಬಿರುದನ್ನು ಹೊಂದಿರುವುದನ್ನೂ ಜ್ಞಾಪಕಕ್ಕೆ ತಂದುಕೊಡುತ್ತದೆ. ಈ 'ಲೋಕಗಾಳ್ಳ' ವ್ಯಕ್ತಿಯೂ ಯಾವುದೊ ಅರಸು ಮನೆತನಕ್ಕೆ ಸಂಬಂಧಿಸಿದ್ದಾನೆಂದು ತೋರುತ್ತದೆ.

ಬೇ. 388ನೆಯ ಶಾಸನವು ಗಂಗದೊರೆ ಇಮ್ಮಡಿ ಬೂತುಗನಿಗೆ ಸಂಬಂಧಿಸಿದೆ. ಇದರ ಕಾಲ ಕ್ರಿ ಶ. 954 ಅಕ್ಟೋಬರ್ 14. ರಾಜನು 'ನನ್ನಿಯಗಂಗ' ಹಾಗೂ 'ಜಯದುತ್ತರಂಗ' ಎಂಬ ಬಿರುದುಗಳನ್ನು ಧರಿಸಿದ್ದನೆಂದು ಇದು ತಿಳಿಸುತ್ತದೆ. ಇದು ಕೊಣ್ಡಕುಂದಾನ್ವಯದ ಯತಿಗಳ ಪರಂಪರೆಯಲ್ಲಿ ಬಂದ ಮೋನಿಭಟಾರರಿಗೆ ಪರೋಕ್ಷವಿನಯ ನಿಮಿತ್ತ ಅಭಯನನ್ದಿ ಪಂಡಿತರ ಶಿಷ್ಯ ಕಿಱಿಯ ಮೋನಿಭಟಾರರು ನಿಲ್ಲಿಸಿದ ನಿಸಿಧಿಶಾಸನ. ಶಾಸನದಲ್ಲಿ 'ಗುಣದಕಣಿ' ಮೋನಿಭಟಾರರ ವ್ಯಕ್ತಿತ್ವದ ಸುಂದರ ನಿರೂಪಣೆಯಿದೆ.

---

[36] 'ಕರ್ನಾಟಕದ ಅರಸು ಮನೆತನಗಳು', ಪು. 146–47

ಬೇ. 551 ಮತ್ತು ಸಪು. 31 ಗಂಗದೊರೆ ಇಮ್ಮಡಿ ಮಾರಸಿಂಹನಿಗೆ ಸಂಬಂಧಿಸಿದೆ. ಕರಗಡಗ್ರಾಮದ ಬೇ. 551ನೆಯ ಶಾಸನವು ಮಾರಸಿಂಹನು ಉಚ್ಚಂಗಿಯ ಕೋಟೆಯನ್ನು ತೆಗೆದುಕೊಳ್ಳಲು, ರಾಜಾದಿತ್ಯನ ಮೇಲೆ ಯುದ್ಧ ಮಾಡಲು, ತನ್ನ ಅಧಿಕಾರಿ ಬಾಸಗಾವುಣ್ಡಗೆ ಆಜ್ಞೆ ಮಾಡಿರುತ್ತಾನೆ. ಆತನು ಆ ಯುದ್ಧದಲ್ಲಿ ಮಡಿಯಲು ಅವನಿಗೆ 5 ಖಂಡುಗ ಮಣ್ಣನ್ನು ಕೊಡುಗೆಯಾಗಿ ಕೊಟ್ಟನೆಂಬುದನ್ನು ದಾಖಲಿಸುತ್ತದೆ[37]. ಸಪು. 31ನೆಯ ಶಾಸನದಲ್ಲಿ ‘ನೊಳಂಬಾನ್ತಕ’ ಎಂಬ ಬಿರುದನ್ನು ತಳೆದ ಮಾರಸಿಂಹನ ಬಿರುದನ್ನು ಆತನ ಅಕ್ಕ ಕುನ್ದಣಸೋಮಿದೇವಿಯು ಮಾಡಿಸಿಕೊಟ್ಟ ಜಿನಬಿಂಬದ ಹಿಂಬದಿಯಲ್ಲಿ ಒಂದೇ ಪಂಕ್ತಿಯಲ್ಲಿ ಬರೆಯಲ್ಪಟ್ಟಿದೆ. ಇದೊಂದು ಸುಂದರ ಪಂಚಲೋಹದ ಜಿನಮೂರ್ತಿ. ಈ ಜಿನಮೂರ್ತಿಯು ಯಾವ ತೀರ್ಥಂಕರನದು ಎಂಬುದು ಪ್ರಶ್ನೆ. ಏಕೆಂದರೆ ಇದರಲ್ಲಿ ಗುರುತಿಸಲು ಸದ್ಯ ಲಾಂಛನವು ಕಾಣುತ್ತಿಲ್ಲ; ಕೆತ್ತಿದ್ದರೆಂದು ಹೇಳಲು ಬರುವಂತಿಲ್ಲ. ಆದರೆ ದೇವ ನೀನೆ ಲಕ್ಷ್ಮಿ (ಸಂಪತ್ತು), ಕಾಮಧೇನು, ಸುಧೆ, ಮಾಣಿಕ್ಯ, ಚಂದ್ರ ಹಾಗೂ ವಿಷ ಅರ್ಥಾತ್ ಜಲ (ತ್ವಂ ಲಕ್ಷ್ಮೀ ಸ್ಸುರಭಿಸ್ಸುಧಾಚಭುವನೇ ಮಾಣಿಕ್ಯಮಿನ್ದುರ್ವಿಷಂ ದೇವ) ಎಂಬ ಪದ್ಯಬಂಧದಲ್ಲಿಯ ‘ಮಾಣಿಕ್ಯ’ ಎಂಬ ಮಾತು ಇದು ಯಾವ ತೀರ್ಥಂಕರನೆಂಬುದನ್ನು ಸೂಚಿಸುತ್ತದೆ. ಆದಿತೀರ್ಥಂಕರನಿಗೆ ‘ಮಾಣಿಕ್ಯ’ ‘ಮಾಣಿಕ್ಯಸ್ವಾಮಿ’ ಎಂದು ಸಂಬೋಧಿಸುವುದು ರೂಢಿ; ಪಂಪನು ‘ಆದಿಪುರಾಣ’ ಗ್ರಂಥದಲ್ಲಿ ಒಂದು ಅಷ್ಟಕವನ್ನೇ ರಚಿಸಿದ್ದಾನೆ[38]. ಅವುಗಳಲ್ಲಿ ಒಂದನ್ನು ಇಲ್ಲಿ ಉಲ್ಲೇಖಿಸುವೆ :

ಪರಿಪೂರ್ಣೋಜ್ಜ್ವಲಚಂದ್ರಬಿಂಬರುಚಿಯಿಂ ಚಂದ್ರಪ್ರಭಾಪುಷ್ಪದಂ
ತರೆನಲ್ ಗಾರುಡನೀಲಶೋಣಮಣಿಹೇಮಾಚ್ಛಾಯೆಯಿಂದಿರ್ಪತಿ
ರ್ಬರೆನಲ್ ಸಂದೊಡಮೇಕರೂಪಮೆ ಜಗಕ್ಕಾಶ್ಚರ್ಯಮಂ ಪುಟ್ಟಿಸು
ತ್ತಿರೆ ಮಾಣಿಕ್ಯಜಿನೇಂದ್ರ ಬಿಂಬಮೆ ಜಯಂ ಭದ್ರಂ ಶುಭಂ ಮಂಗಳಂ॥

ಇಂಗಳಗಿ ಶಾಸನದಲ್ಲಿ ‘ಮಹು ಮಾಣಿಕ್ಯದೇವ’ ಎಂದು ಒಂದು ಸುಂದರ ಜಿನಬಿಂಬವನ್ನು ವಿವರಿಸಲಾಗಿದೆ. ಇದರ ಕಾಲ ಕ್ರಿ.ಶ. 1094, ಫೆಬ್ರವರಿ 27 (ಚಾಳುಕ್ಯ ವಿಕ್ರಮವರ್ಷ 18, ಶ್ರೀಮುಖಸಂವತ್ಸರ ಫಾಲ್ಗುಣ ಶು. 10 ಸೋಮವಾರ). 6ನೆಯ ವಿಕ್ರಮಾದಿತ್ಯನ ರಾಣಿ ಜಾಕಲದೇವಿ, ಇಂಗಳಗಿಯಲ್ಲಿ, ಈ ಜಿನಬಿಂಬದ ಪ್ರತಿಷ್ಠಾಪನೆ ಮಾಡಿಸಿದಳು.[39] ನಾಗವ(ಣ?) ಎಂಬ ಕವಿಯು ‘ಮಾಣಿಕಸ್ವಾಮಿಚರಿತ್ರೆ’ ಎಂಬ ಒಂದು ಷಟ್ಪದೀ ಗ್ರಂಥವನ್ನೇ ಬರೆದಿದ್ದಾನೆ. ಆದಿದೇವನನ್ನು ‘ಮಾಣಿಕ್ಯಜಿನ ಎಂದೇ ಸ್ತುತಿಸಿದ್ದಾನೆ[40] ; ಈ ಉದಾಹರಣೆಯನ್ನು ನೋಡಿ :

ಶ್ರೀಮೋಕ್ಷಪದವೀವುದಾರನು
ಸಾಮಜಾರಿಯ ಪೀಠದಿಂ ಮೇಲ್
ತಾಮರಸ ಷಡುದಲದಿ ಚತುರಂಗುಲವ ಬಿಟ್ಟಿರ್ಪ।
ಪ್ರೇಮದಿಂ ತ್ರೈವರ್ಣಮಾಗಿಯೆ
ಶ್ರೀಮುಖದಿ ಶಾರದೆಯನುದಯಿಪ
ಕಾಮದರ್ಪವಿದಾರ ಮಾಣಿಕಜಿನನೆ ರಕ್ಷಿಪುದು॥

ಕಾರಣ ಕುಂದಣಸೋಮಿದೇವಿಯು ಮಾಡಿಸಿದ ಈ ಜಿನಬಿಂಬ ಆದಿನಾಥ ತೀರ್ಥಂಕರನದು[41]. ಈ ಮೂರ್ತಿಯು, ಗಂಗಮನೆತನದ ಕಲಾಕುಶಲತೆಯನ್ನು ಮೆರೆಯುವ ಕೆಲವೇ ಅವಶೇಷಗಳಲ್ಲಿ ಒಂದು ಉತ್ತಮ ದಾಖಲೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ[42].

ಬೇ. 524, ಸಪು. 28, 29, 30, 32, 33 ಮತ್ತು 55ನೆಯ ಸಂಖ್ಯೆಯ ಏಳು ಶಾಸನಗಳು ಗಂಗ ದೊರೆ ನೀತಿಮಹಾರಾಜ ಎಂಬ ವ್ಯಕ್ತಿಗೆ ಸಂಬಂಧಿಸಿವೆ. ಈ ನೀತಿಮಹಾರಾಜನು ಯಾರು ಎಂಬುದು ಇನ್ನೂ ಪ್ರಶ್ನೆಯಾಗಿದೆ.

---

37. ಇದೇ ರೀತಿಯ ಇನ್ನೊಂದು ಶಾಸನ ಚೆನ್ನರಾಯಪಟ್ಟಣದಲ್ಲಿದೆ; ಅದು ಇನ್ನೊಬ್ಬ ವೀರನಿಗೆ (ದೇವಯ್ಯನ ಅಳಿಯ ಎಚಿಗಾರಿಗೆ) ಕೊಟ್ಟ ಕೊಡುಗೆಯನ್ನು ದಾಖಲಿಸುತ್ತದೆ, ಚೆನ್ನರಾಯಪಟ್ಟಣ–262 (E.C. Vol. V, BLR), ಪು. 528
38. ಆದಿಪುರಾಣ (ಸಂ. ಎಸ್. ಜಿ. ನರಸಿಂಹಾಚಾರ್) ಆ. 16, ಪು. 404–05
39. Jainism in South India and Some Jaina Epigraphs (Dr. P. B. Desai), p. 237
40. ಮಾಣಿಕಸ್ವಾಮಿ ಚರಿತ್ರೆ (ಸಂ. ಜಿ. ಜಿ. ಮಂಜುನಾಥನ್) ಪು. 1 ಹಾಗೂ 73
41. ಮೂರ್ತಿಯನ್ನು ಪರಿಶೀಲಿಸಿ ಅದರ ಮೇಲೆ ಯಾವ ಲಾಂಛನವೂ ಇಲ್ಲವೆಂದು ತಿಳಿಸಿದವರು ದಿವಂಗತ ಎಸ್. ಪಿ. ಪದ್ಮಣ್ಣ ಜೋಯಿಸರು, ಶ್ರವಣಬೆಳಗೊಳ
42. (a) Karnataka Through the Ages, p. 196
    (b) History of the Western Gangas (Ed. Dr. B. Sheik Ali), p. 147

ಈ ದಿಶೆಯಲ್ಲಿ ಶಿವಮೊಗ್ಗ ಜಿಲ್ಲೆಯ ನಗರ ತಾಲ್ಲೂಕಿನ–35ನೆಯ ಶಾಸನವು ಇನಿತು ಬೆಳಕನ್ನು ಚೆಲ್ಲುತ್ತದೆ. ಇಮ್ಮಡಿ ಮಾರಸಿಂಹನ (ಕ್ರಿ.ಶ. 963–974) ಅನಂತರದ ಗಂಗರ ಇತಿಹಾಸ ಕರ್ನಾಟಕದ ಚರಿತ್ರೆಯ ಪುಸ್ತಕಗಳಲ್ಲಿ ಅಷ್ಟು ವಿವರ ವಿವರವಾಗಿ ಬಂದಿಲ್ಲ. ಈ ದಿಶೆಯಲ್ಲಿ ನಗರ 35ನೆಯ ಶಾಸನವನ್ನು ಇನಿತು ಪರಾಮರ್ಶಿಸಬೇಕು. ಅದರಲ್ಲಿ ಇಮ್ಮಡಿ ಬೂತುಗನ ಮತ್ತು ಆತನ ವಂಶಜರ ಇತಿಹಾಸವು ಹೆಚ್ಚು ವಿವರಗಳಿಂದ ಕೂಡಿದೆ. ಆದರ ಪ್ರಕಾರ ಬೂತುಗನ ಅನಂತರದ ವಂಶವೃಕ್ಷ ಹೀಗಿದೆ[43] :


ಬೂತುಗ II
ಹೆಂ. ರೇವಕನಿಮ್ಮಡಿ
ಮರುಳ
(ಅರುಮೊೞಿದೇವ)
ಹೆಂ. ರಾಷ್ಟ್ರಕೂಟ
ಚಕ್ರವರ್ತಿ ಮುಮ್ಮಡಿ
ಕೃಷ್ಣನ ಮಗಳು
ಮಾರಸಿಂಹ
ರಾಜಮಲ್ಲ
ನೀತಿಮಾರ್ಗ
ಗೋವಿಂದರ
ವಾಸವ
ಹೆಂ. ಕಂಚಲದೇವಿ
ಗೋವಿನ್ದರದೇವ
(ಸತ್ಯವಾಕ್ಯ,
ರಕ್ಕಸಗಂಗ,
ಗಂಗನಾರಾಯಣ,
ಗಂಗಚೂಡಾಮಣಿ, ಮತ್ತು
ವೀರಮಾರ್ತ್ತಣ್ಡದೇವ)
ಅರುಮುಳಿದೇವ (II)
(ಕೊಮರಂಕಭೀಮ, ನೀತಿಜ್ಞ)
ಹೆಂ. ಗಾವಬ್ಬರಸಿ
ಚಟ್ಟಲೆ
ಕಂಚಲೆ
ರಾಜವಿದ್ಯಾಧರ

ಮಾರಸಿಂಹನ ಅನಂತರ ಸತ್ಯವಾಕ್ಯ ರಾಚಮಲ್ಲ, ನೀತಿಮಾರ್ಗ ಗೋವಿಂದರ ಮತ್ತು ಸತ್ಯವಾಕ್ಯ ಗೋವಿಂದರ ಪಟ್ಟಕ್ಕೆ ಬಂದರು. ಸತ್ಯವಾಕ್ಯ ಗೋವಿಂದರನಿಗೆ ಮಕ್ಕಳಿಲ್ಲದಿರಲು ತನ್ನ ತಮ್ಮನ ಮಗನನ್ನು ಎಂದರೆ ರಾಜ್ಯವಿದ್ಯಾಧರನನ್ನು ಅರಮನೆಗೆ ಕರೆತಂದು ಸಿಂಹಾಸನದ ಮುಂದಿನ ಅಧಿಪತಿಯೆಂದು ಸಂತೋಷಪಟ್ಟಿದ್ದಾನೆ. ಇಲ್ಲಿ ವಸ್ತುಸ್ಥಿತಿಯನ್ನು ಇನಿತು ವಿಶ್ಲೇಷಿಸಬೇಕು. ರಾಜವಿದ್ಯಾಧರನು ಹುಟ್ಟಿದಾಗ ಅವನ ತಂದೆ ಇಮ್ಮಡಿ ಅರುಮುಳಿದೇವನು ಬದುಕಿದ್ದನು. ಹಾಗಾದರೆ ಇವನ ಸ್ಥಾನಮಾನಗಳು ಅರಮನೆಯಲ್ಲಿ ಏನಾಗಿದ್ದವು ? ಅವನ ಮಗನೇ ಮುಂದಿನ ಅಧಿಕಾರವಂತ ಎಂದಾಗ ಅಣ್ಣತಮ್ಮಂದಿರಲ್ಲಿ ಪ್ರೀತ್ಯಾದರಗಳಿದ್ದಾಗ ತಮ್ಮನನ್ನು ಅಣ್ಣನಾದವನು, ರಾಜ್ಯದ ಪ್ರಜೆ, ಎಲ್ಲರೂ ಮಹಾರಾಜನ ಅತ್ಯಂತ ಆತ್ಮೀಯನ ಹಾಗೆ–ಯುವರಾಜನ ಹಾಗೆ ನೋಡಿಕೊಳ್ಳುವುದು ಲೋಕರೂಢಿ. ಅದೇ ಕಾಲದ, ಸಮಕಾಲೀನ ದೊರೆಗಳಾದ, ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯ ಇಱಿವಬೆಡಂಗ ಮತ್ತು ಆತನ ತಮ್ಮ ದಶವರ್ಮ ಇವರ ಸಂಬಂಧಗಳನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕು. ದಶವರ್ಮನೂ ಚಕ್ರವರ್ತಿ ಸತ್ಯಾಶ್ರಯನ ಬಿರುದಾವಳಿಗಳನ್ನೇ ತಳೆದು ‘ಆಸಮುದ್ರಂಬರೆಗಂ’ ರಾಜ್ಯವನ್ನಾಳುತ್ತಿದ್ದನೆಂದು ಕಲ್ಲೂರ ಶಾಸನದಿಂದ ತಿಳಿದುಬಂದಿದೆ[44]. ಅದೇ ರೀತಿಯಲ್ಲಿ ಸತ್ಯವಾಕ್ಯ ಗೋವಿಂದರ ದೊರೆಯ ಅನಂತರ ಅವನ ತಮ್ಮ ‘ನೀತಿಜ್ಞ ಅರುಮುಳಿದೇವ’ ‘ನೀತಿಮಹಾರಾಜ’ ಎಂಬ ಹೆಸರಿನಲ್ಲಿ ರಾಜ್ಯವಾಳುತ್ತಿದ್ದ ಎಂದು ಹೇಳಬಹುದು. ‘ಸತ್ಯವಾಕ್ಯ ಗೋವಿಂದರ’ ಗಂಗರಾಜ್ಯಕ್ಕೆ ಒಡೆಯನಾಗಿದ್ದನೆಂಬುದು ಹಳೇಬೂದನೂರಿನ ಕ್ರಿ.ಶ. 1024ನೇ ವರ್ಷದ ಶಾಸನದಿಂದ ಸ್ಪಷ್ಟವಿದೆ[45]. ಅಂತೆಯೆ ಕ್ರಿ.ಶ. 1026ರಲ್ಲಿ ಹಾಗೂ ಅನಂತರದ ಕಾಲದಲ್ಲಿ ಬದುಕಿದ್ದ, ಸಕಲೇಶಪುರದ ಶಾಸನಗಳ ನೀತಿಮಹಾರಾಜ ಮತ್ತು ನಗರ–35ರ ಅರುಮುಳಿದೇವ ಅಥವಾ ನೀತಿಜ್ಞ ಒಬ್ಬನೇ ವ್ಯಕ್ತಿಯೆಂದು ತೋರುತ್ತದೆ. ನೀತಿಜ್ಞ ‘ನೀತಿಮಾರ್ಗ’ ಎಂಬುದರ

---

[43] ಎ.ಕ. ಸಂ. 8 (BLR) ನಗರ-35, ಪು. 360-61 ; ಈಗ ಈ ನಗರ ತಾಲ್ಲೂಕನ್ನು ‘ಹೊಸನಗರ ತಾಲೂಕು’ ಎಂದು ಕರೆಯುತ್ತಾರೆ.

[44] ಕಲ್ಲೂರ ಶಾಸನ ‘ಮಾನವಿಕ ಕರ್ಣಾಟಕ’ ಸಂಪುಟ–15, ಸಂಚಿಕೆ–3, ಪು. 83–86

[45] (ಎ) ಎ.ಕ. ಸಂಪುಟ 7 (1979) ಮಂ. 53 ಹಾಗೂ 54, ಪು. 234 ಮತ್ತು 236. ಒಂದೇ ಕಲ್ಲಿನಲ್ಲಿ ಕೆತ್ತಿದ ಈ ಎರಡು ಶಾಸನಗಳು ಒಂದೇ ಶಾಸನವೆಂಬುದು ಅದನ್ನು ನೋಡಿದವರಿಗೆ ಖಚಿತವಾಗುತ್ತದೆ.
(ಬಿ) ಸಿಂಗಾರ (ಸಂ.ಹ.ಕ. ರಾಜೇಗೌಡ), ಪು. 175

ಇನ್ನೊಂದು ರೂಪ ಎಂದು ಹೇಳಬಹುದು. ‘ಸತ್ಯವಾಕ್ಯ’ ಎಂಬ ವ್ಯಕ್ತಿಯ ಅನಂತರ ‘ನೀತಿಮಾರ್ಗ’ ನೇ ಪಟ್ಟಕ್ಕೆ ಗಂಗ ಮನೆತನದಲ್ಲಿ ಬರುವುದರಿಂದ ಇವುಗಳಲ್ಲಿನ ‘ನೀತಿಮಹಾರಾಜ’ ಗಂಗದೊರೆ ಎಂಬುದು ಸುಸ್ಪಷ್ಟ. ಈ ಏಳು ಶಾಸನಗಳಲ್ಲಿ 28, 29, 32 ಮತ್ತು 33ನೆಯ ಶಾಸನಗಳು ವೀರಗಲ್ಲುಗಳಾಗಿವೆ; 55ನೆಯ ಶಾಸನದ ಭಾಷೆ ವಿಷಯವನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಆದರೆ ಇದೇ ಮಾತನ್ನು ಸಪು. 30ರ ಬಗೆಗೆ ಹೇಳುವಂತಿಲ್ಲ. ಅದು ನೀತಿಮಹಾರಾಜನು ಸನ್ಯಸನ ವಿಧಿಯಿಂದ ಮರಣ ಹೊಂದಿದುದನ್ನು ದಾಖಲಿಸಿದೆ; ಅದರ ತ್ರುಟಿತಾವಸ್ಥೆಗೆ ವಿಷಾದಿಸಬೇಕಾಗಿದೆ.

ಚೋಳರು

ಈ ಸಂಪುಟದಲ್ಲಿ ಚೋಳರ ಆಳ್ವಿಕೆಗೆ ಸಂಬಂಧಿಸಿದಂತೆ ಒಂದೇ ಒಂದು ದಾಖಲೆ ಇದೆ: ಸಪು. 34. ಇದನ್ನು ಕೂಡ ‘ರಾಜೇನ್ದ್ರಚೋಳ’ ಎಂಬ ನಾಮ ಸಾದೃಶ್ಯದಿಂದ ಇದುವರೆಗೆ ಕೊಂಗಾಳ್ವರ ದಾಖಲೆಗಳೊಂದಿಗೆ ಸೇರಿಸಿ ಆ ಮನೆತನದ ಇತಿಹಾಸವನ್ನು ಬರೆಯುವಲ್ಲಿ ಬಳಸಲಾಗಿದೆ. ಆದರೆ ಇಲ್ಲಿ ಈ ಶಾಸನವನ್ನು ಪುನಃ ಪರಿಶೀಲಿಸಬೇಕಾಗಿದೆ; ಏಕೆಂದರೆ ಈ ಶಾಸನದಲ್ಲಿ ಇದನ್ನು ಕೊಂಗಾಳ್ವರ ಶಾಸನವೆಂದು ಹೇಳಲು ಆಂತರಿಕ ಸಾಕ್ಷಿಯಿಲ್ಲ; ಅಷ್ಟೇ ಅಲ್ಲ, ಇದು ಮಾಂಡಲಿಕರ ಮೇಲಿನ ಅಧಿರಾಜರಿಗೆ ಸಂಬಂಧಿಸಿದೆ ಎನ್ನುವುದಕ್ಕೆ ‘ಪೃಥುವೀ ಮಹಾರಾಜ’ ಎಂಬ ಬಿರುದನ್ನು ಇದರಲ್ಲಿ ಬಳಸಿರುವುದು ಬಹಳ ಮುಖ್ಯವಾಗಿದೆ. ಮತ್ತೆ ಕೊಂಗಾಳ್ವರು ತಮ್ಮನ್ನು ‘ಪ್ರಥುವೀಮಹಾರಾಜ’ ಎಂದು ಕರೆದುಕೊಂಡಿರುವುದಕ್ಕೆ ಎಲ್ಲಿಯೂ ಇನ್ನೊಂದು ದಾಖಲೆ ಈ ಕಾಲದಲ್ಲಿ ಇಲ್ಲ. ಮಾಂಡಲಿಕರು ತಮ್ಮ ಮೇಲಿನ ಅಧಿರಾಜರ ಬಿರುದುಗಳಲ್ಲಿ ಆಡಳಿತ ಸೂಚಕಗಳಾದ “ಮಹಾರಾಜ” “ಮಹಾರಾಜಾಧಿರಾಜ” ಮತ್ತು “ಪರಮಭಟ್ಟಾರಕ” ಎಂಬವುಗಳನ್ನು ತಾವೂ ಧರಿಸುತ್ತಿದ್ದಿಲ್ಲ. ಶಾಸನದಲ್ಲಿ “ರಾಜೇನ್ದ್ರ ಚೋಳಪೃಥುವೀಮಹಾರಾಜಂ” ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಇದು ಒಂದನೆಯ ರಾಜೇಂದ್ರಚೋಳ ದೊರೆಗೆ (ಕ್ರಿ.ಶ. 1012–1044)[46] ಸಂಬಂಧಿಸಿದೆ. ಈ ಶಾಸನದಲ್ಲಿ ರಾಜೇನ್ದ್ರ ಚೋಳದೊರೆಯ ಎದುರಾಳಿಯಾದ ನೃಪಕಾಮ ಪೊಯ್ಸಳ ದೊರೆಗೆ ಯಾವುದಾದರೂ ಬಿರುದೇ ಇಲ್ಲದಿರುವುದೂ ಆಶ್ಚರ್ಯ. ಕ್ರಿ.ಶ. 1022–23ರಲ್ಲಿ ಚೋಳರ ಹಾಗೂ ಹೊಯ್ಸಳರ ಮಧ್ಯೆ ಜರುಗಿದ ಯುದ್ಧವೊಂದನ್ನು ದಾಖಲಿಸಿ ಈ ವೀರಗಲ್ಲ ಶಾಸನವು ತನ್ನಷ್ಟಕ್ಕೆ ಒಂದು ಮಹತ್ವದ ದಾಖಲೆಯಾಗಿದೆ. ಮುಂದೆ ಕ್ರಿ.ಶ. 1027ರಲ್ಲಿ ಬರೆಯಲಾದ ಸಪು. 35, ನೃಪಕಾಮನಿಗೆ ‘ಮಹಾರಾಜ’ ಎಂಬ ಬಿರುದಿರುವುದನ್ನು ಸೂಚಿಸುತ್ತದೆ. ಹೊಯ್ಸಳದೊರೆ ಹೆಚ್ಚುಶಕ್ತಿಯುತನಾಗಿರುವುದರ ಕುರುಹು ಇಲ್ಲಿ ಕಂಡುಬಂದಿದೆ. 4–5 ವರ್ಷಗಳ ಅವಧಿಯಲ್ಲಿ ಇದು ಅಸಾಧ್ಯದ ಸಂಗತಿಯೇನಲ್ಲ.

ಕಲ್ಯಾಣದ ಚಾಲುಕ್ಯರು

ಬೇ. 341ನೆಯ ಶಾಸನವು ಕ್ರಿ.ಶ. 1097–98ರಲ್ಲಿ ಬರೆಯಲಾಗಿದ್ದರೂ ಚಾಳುಕ್ಯ ವಿಕ್ರಮಾಂಕನ ಆಳ್ವಿಕೆಯಲ್ಲಿ ಆರಂಭಿಸಿದ ಚಾ. ವಿ. ವರ್ಷವನ್ನು ನಮೂದಿಸಿದರೂ ಅವರನ್ನು ಇದರಲ್ಲಿ ಅಧಿರಾಜರು ಎಂದು ಹೇಳಿಲ್ಲ. ಆದುದರಿಂದ ಅವರ ಅಧಿರಾಜತ್ವವನ್ನು ಸಂಪೂರ್ಣ ಬಿರುದಾವಳಿಗಳೊಂದಿಗೆ ಸೂಚಿಸುವ ಅತ್ಯಂತ ಪ್ರಾಚೀನ ಶಾಸನವೆಂದರೆ ಬೇ. 191. ಇದು ಹಾಗೂ ಬೇ. 190, 245, 249 ಮತ್ತು 408 ಶಾಸನಗಳು ಚಾಳುಕ್ಯಚಕ್ರವರ್ತಿ 6ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿವೆ. ಹೊಯ್ಸಳ ದೊರೆ 1ನೆಯ ಬಲ್ಲಾಳನು ಬಿಟ್ಟ ದತ್ತಿಗಳನ್ನು ಈ ಶಾಸನಗಳಲ್ಲಿ ವಿವರಿಸಲಾಗಿದೆ. ಕ್ರಿ.ಶ. 1099ರಲ್ಲಿ ಹೊಯ್ಸಳದೊರೆ ಎಱೆಯಂಗನು ರಾಜನಾಗಿದ್ದ. ಬೇ. 190 ಹಾಗೂ 191 ಎರಡರಲ್ಲೂ ಬಂದಿರುವ ಬಿರುದಾವಳಿಯನ್ನು ಗಮನಿಸಿದರೆ 1ನೆಯ ಬಲ್ಲಾಳ ತಂದೆಯೊಂದಿಗೆ ಸಹಜೋಡಿಯಾಗಿ ರಾಜ್ಯವಾಳುತ್ತಿದ್ದನೆಂದು ಕಂಡುಬರುತ್ತದೆ. ತಂದೆ ಮಕ್ಕಳಿಬ್ಬರೂ ಆಡಳಿತವನ್ನು ನೋಡಿಕೊಳ್ಳುತ್ತಿದ್ದರೆಂಬುದು ಶಾಸನಗಳಿಂದ ಸ್ಪಷ್ಟವಿದೆ. ಇವರು ಚಾಳುಕ್ಯರನ್ನು ಅಧಿರಾಜರೆಂದು ಒಪ್ಪಿಕೊಂಡಿರುವುದು ಅಷ್ಟೇ ಸ್ಪಷ್ಟವಿದೆ.

ಬೇ. 245 ಹಾಗೂ 249 ಇದೇ 6ನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸಂಬಂಧಪಟ್ಟಿದ್ದು ‘ತ್ರಿಭುವನಮಲ್ಲ ಪೊಯ್ಸಳ’ ದೊರೆಯ ಜೊತೆಜೊತೆಗೆ ಅವನ ಪಾದಪದ್ಮೋಪಜೀವಿಯಾಗಿದ್ದ ‘ಸಮಧಿಗತ ಪಂಚಮಹಾಶಬ್ದ’ ‘ಮಹಾಸಾಮಂತ’ ‘ಗಂಗಕುಳಕಮಳಮಾರ್ತ್ತಾಂಡ’ ‘ಪರಮ ಮಹೇಸ್ವರ’ ಮುಂತಾಗಿ ಹಲವು ಬಹಳ ಪ್ರಮುಖ ಬಿರುದುಗಳನ್ನು ಧರಿಸಿದ ಕಾಳೆಯಮ್ಮನ ವಂಶಸ್ಥ ‘ಚಿಣ್ಣಗೌಡ’ ಎಂಬ ಗಂಗವಂಶದ ಮಾಂಡಲಿಕನ ಉಲ್ಲೇಖವು ವಿಶೇಷ ಗಮನಾರ್ಹವಾಗಿದೆ. ಇವನ ವಂಶಾವಳಿಯ ವಿವರಗಳು ಹೀಗಿವೆ:

---

[46] A History of South India (Prof. K.A.N. Sastri) p. 209 (1976)

ಕಾಳಿಯಂಮಗವುಂಡ
|
ಚವುಡಗೌಂಡ
|
ಪೊಯ್ಸಳಗೌಂಡ
ಹೆಂ. ಕಾಳಬ್ಬೆ
|
ಚಿಂಣ್ಣಗೌಂಡ

ಈ ಚಿಂಣ್ಣಗೌಂಡ ಹಾಗೂ ಇನ್ನೊಬ್ಬ ಸಾಮನ್ತನಾದ 'ಕರಿಕ ಸಾಮಂತ' ಎಂಬುವನ ಪುತ್ರ ಅಹಿತರಂಕುಶಸೆಟ್ಟಿ, ಈ ಇಬ್ಬರೂ ಸೇರಿ ದೇವಾಲಯವನ್ನು, ಕೆರೆಯನ್ನು ಕಟ್ಟಿಸಿದರು ಮತ್ತು ಕೊಂಡಿ/ಕೊಂಡಲಿ/ಕೋಡಿಯ ಮೂಲಸ್ತಂಭರಾದ ಚಂದ್ರಭೂಷಣ ಪಂಡಿತರಿಗೆ—ಸ್ಥಾನಿಕ ಪದವಿಯಲ್ಲಿ ವಿರಾಜಮಾನರಾದವರಿಗೆ–ದತ್ತಿಯನ್ನು ಕೊಟ್ಟರು. ಈ ಎರಡು ಶಾಸನಗಳ ವಸ್ತು ಒಂದೇ ಆಗಿದೆ; ಆದರೆ ತೇದಿ ವಿವರಗಳು ಮಾತ್ರ ಬೇರೆಬೇರೆ ಆಗಿವೆ:

(1) ಸಕವರ್ಶ 1024 ವಿಕ್ರಮ ಸಂವತ್ಸರ (ಬೇ. 245)
(2) ಸಕವರ್ಷ ··14 ವಿಕ್ರಮ ಸಂವತ್ಸರ ? (ಬೇ. 249)

ಇದು ಗಮನಾರ್ಹ. ಈ ಎರಡೂ ಉಕ್ತವರ್ಷಗಳಲ್ಲಿ ವಿಕ್ರಮನಾಮ ಸಂವತ್ಸರವು ಬಂದಿದ್ದಿಲ್ಲ.

ಬೇ. 327ನೆಯ ಶಾಸನವು 6ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಅವನ ಮಾಂಡಲಿಕನಾದ ವಿಷ್ಣುವರ್ಧನ ವೀರಗಂಗ ಹೊಯ್ಸಳದೇವನು ದತ್ತಿ ಬಿಟ್ಟ ಸಂಗತಿಯನ್ನು ದಾಖಲಿಸಿದೆ. ಅವನು 6ನೆಯ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿದ್ದನೆಂಬುದನ್ನು ಶಾಸನದಲ್ಲಿ ಬರೆದಿದೆ.

ಬೇ. 558ನೆಯ ಶಾಸನವನ್ನು ಕ್ರಿ.ಶ. 1211 ನವಂಬರ್ 28 ಸೋಮವಾರದಂದು ಬರೆಯಲ್ಪಟ್ಟದೆ. ಚಿಕ್ಕ ತಮ್ಮಣ್ಣ ಎಂಬ ವ್ಯಕ್ತಿ ತಮ್ಮ ತಂದೆ, ಕೊಲೆಯ ತಂಮರಯನು "ಸೋಯಿದೇವರಾಯತ್ಥಾಪನಾಚಾರ್ಯ" ಎಂಬ ಬಿರುದನ್ನು ಧರಿಸಿದುದಾಗಿ ತಿಳಿಸಿದ್ದಾನೆ. ಈ ಸೋಯಿದೇವ ನಾಲ್ಕನೆಯ ಸೋಮೇಶ್ವರ ಎಂಬ ಚಾಳುಕ್ಯ ದೊರೆಯಾಗಿರಬಹುದು. ಯಾವುದೇ ರಾಜಮನೆತನದ ಬಿರುದನ್ನು ಸೋಮೇಶ್ವರನಿಗೆ ಅನ್ವಯಿಸಿ ಹೇಳಿಲ್ಲವಾದುದರಿಂದ ಈ ಸೋಮೇಶ್ವರ ಯಾರೆಂಬುದು ಸಂಶೋಧನೆಯಲ್ಲಿ ಹೊರಬೀಳಬೇಕಾಗಿರುವ ಸಂಗತಿ.

ಬೇ. 250 ಕ್ರಿ.ಶ. 1220ರ ಕೊಂಡಿಯ ಶಾಸನ 'ಚಾಳುಕ್ಯ' ಅನ್ವಯವನ್ನೂ ಮತ್ತು ಪೆರ್ಮ್ಮಾಡಿದೇವ (ಪೆರ್ಮ್ಮಾರ್ಡಿ) ಎಂಬ ರಾಜನನ್ನೂ ಉಲ್ಲೇಖಿಸುತ್ತದೆ; ಇಷ್ಟಲ್ಲದೆ ಹೆಚ್ಚಿನ ವಿವರಗಳಿಲ್ಲ.

ಬೇ. 523ನೆಯ ಶಾಸನವು, ಇದುವರೆಗೆ ಬೆಳಕಿಗೆ ಬಾರದ ಒಂದು ಚಳುಕ್ಯ ಅನ್ವಯವನ್ನು ಬೆಳಕಿಗೆ ತರುತ್ತದೆ. ಕೋಗೋಡಿನ ಸಕಲಗಾವುಂಡಗಳೂ ಮತ್ತು ಚಳುಕ್ಯ ಮತಿವರ್ಮನೂ ಸೇರಿ ಸೀಮೆಯ ಮೇಲೆ ಹರಿದುಬಂದ ರಾಜರಾಜನನ್ನೂ ಆತನ ಸೈನ್ಯದಲ್ಲಿಯ ಹರಿಯಲ್ಗಂಡರಸನೆಂಬವನ ತಮ್ಮ ಅಯ್ಯನನ್ನೂ ಎದುರಿಸುತ್ತಾರೆ. ಈ ಚಳುಕ್ಯ ಮತಿವರ್ಮನು ಯಾರೆಂದು ತಿಳಿಯದು. ಈ ಶಾಸನದ ಅಕ್ಷರಗಳು ಹಳೆಯ ಕನ್ನಡದ ಅಕ್ಷರಗಳೆಂದು ತಿಳಿದು ಬರುವುದರಿಂದ[47] ಇಲ್ಲಿನ 'ರಾಜ ರಾಜ' ಪ್ರಾಯಃ ಚೋಳ ದೊರೆಯಾಗಿರಬಹುದು. ಈ ಊಹೆ ಸರಿಯಾದರೆ, ಈ ಶಾಸನದ ಕಾಲ ಕ್ರಿ.ಶ. 985–1016 ಎಂದರೆ ರಾಜರಾಜನ ಆಳ್ವಿಕೆಯ ಕಾಲದ್ದಾಗುತ್ತದೆ ಮತ್ತು ಇದು ಚೋಳರ ಹಾಗೂ ಚಳುಕ್ಯರ ಒಂದು ಯುದ್ಧವನ್ನು ದಾಖಲಿಸುತ್ತದೆ.

ಹೊಯ್ಸಳರು

ಈ ಸಂಪುಟದಲ್ಲಿಯ ಶಾಸನಗಳ ಸುಮಾರು $\frac{1}{3}$ ಭಾಗ ಸಂಖ್ಯೆಯ ಶಾಸನಗಳು (209) ಹೊಯ್ಸಳರ ಮನೆತನದ ಇತಿಹಾಸಕ್ಕೆ ಸಂಬಂಧಿಸಿವೆ. ಹೊಯ್ಸಳ ಮಾರೆಯನ ಶಾಸನವೇ ಮೊದಲನೆಯದು (ಬೇ. 540 ಪರಿಷ್ಕೃತ). ಈ ಶಾಸನದಲ್ಲಿ ಶಕವರ್ಷವನ್ನು ಹೇಳಿಲ್ಲ; ಮತ್ತು 'ಚಂಗನಾಡಗೋವಂ' ಎಂಬ ಬಿರುದನ್ನು ಬಿಟ್ಟರೆ ಇನ್ನೇನು ವಿಶೇಷವಿಲ್ಲ. ಇಲ್ಲಿ ಉಕ್ತವಾದ ಸಂವತ್ಸರ 'ಅಂಗಿರಸ' ಲಿಪಿಶಾಸ್ತ್ರದ ದೃಷ್ಟಿಯಿಂದ ಕ್ರಿ.ಶ. 972ರಲ್ಲಿ ಬಂದ ಅಂಗಿರಸ ಸಂವತ್ಸರವಾಗಿರಬಹುದು.

---

[47] ೦ 1924, ಪುಟ–30

ನೃಪಕಾಮ ಮಹಾರಾಜನ ಆಳ್ವಿಕೆಗೆ ಸಂಬಂಧಿಸಿದ ಒಂದು ಶಾಸನ (ಸಪು. 35) ಮತ್ತು ಕೇವಲ 'ನೃಪಕಾಮ ಪೊಯ್ಸಳ' ಎಂಬ ಹೆಸರಿನ ಉಲ್ಲೇಖವುಳ್ಳ ಒಂದು ಶಾಸನ (ಸಪು. 34) ಹೀಗೆ ಎರಡು ಶಾಸನಗಳು ಪ್ರಸ್ತುತ ಸಂಪುಟದಲ್ಲಿ ನೃಪಕಾಮನಿಗೆ ಸಂಬಂಧಪಟ್ಟಿವೆ. ಸಪು. 34ರ ವಿವರಣೆಯು, ಮೇಲೆ ಚೋಳರ ಚರಿತ್ರೆಯಲ್ಲಿ ಬಂದಿದೆ. "ಪೊಯ್ಸಳನಾರನಂ" ಎಂಬ ಉಲ್ಲೇಖವೂ ಆ ಶಾಸನದಲ್ಲಿದ್ದು ಗಮನಾರ್ಹವಾಗಿದೆ. 'ಪೊಯ್ಸಳ ಮಾರ' ಎಂದು ಅದು ಇದ್ದಿರಬಹುದು. ಪೊಯ್ಸಳರ ಚರಿತ್ರೆ, ಅವರು ಸಾಮಂತರಾಗಿ ಆಳುತ್ತಿದ್ದ ವಿಷಯ, ಈಗ ನಮಗೆ ಸು.ಕ್ರಿ.ಶ. 900ರ ಎಡಬಲದಿಂದ ಎಂಬುದು ತಿಳಿದುಬಂದ ಸಂಗತಿ; ತತ್ಪೂರ್ವದಲ್ಲಿಯೂ ಇದ್ದಿರಬಹುದು[48]. ಕ್ರಿ.ಶ. 978ರಲ್ಲಿ ಸಮಾಪ್ತಿಗೊಂಡ 'ಚಾವುಂಡರಾಯಪುರಾಣ' ಗ್ರಂಥದಲ್ಲಿ ಚಾವುಂಡರಾಯನು ಸೋಲಿಸಿದ ವ್ಯಕ್ತಿಗಳಲ್ಲಿ ಒಬ್ಬ ಹೊಯ್ಸಳ ದೊರೆಯೂ ಇದ್ದಾನೆ[49]. ಕ್ರಿ.ಶ. 10ನೆಯ ಶತಮಾನದಲ್ಲಿ ಅವರು ಸೊಸವೂರಿನಿಂದ ಆಳುತ್ತಿದ್ದರು. ಕಲ್ಯಾಣದ ಚಾಳುಕ್ಯರ ಸಂಬಂಧ ಬರುವುದಕ್ಕಿಂತ ಮುಂಚೆಯೆ ಸೊಸವೂರು ಇದ್ದುದು ಗಮನಾರ್ಹವಾದ ಸಂಗತಿ.

ಬೇ. 338 ಮತ್ತು ಬೇ. 542, ಈ ಎರಡೂ ಶಾಸನಗಳು ಕ್ರಿ.ಶ. 1062–63ಕ್ಕೆ ಸರಿಹೋಗುವ 'ಶುಭಕೃತ್' ಸಂವತ್ಸರದಲ್ಲಿ ಬರೆಯಲ್ಪಟ್ಟಿದ್ದು ವಿನಯಾದಿತ್ಯನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿವೆ. ಬೇ. 338 ದೋರಸಮುದ್ರದಿಂದ ಆಳುತ್ತಿದ್ದ ವಿನಯಾದಿತ್ಯನನ್ನು "ನೃಪಕಾಮಪೊಯ್ಸಳನ ನನ್ದನಂ" ಎಂದು ವಿವರಿಸಿ ತಂದೆ ಮಕ್ಕಳ ಸಂಬಂಧವನ್ನು ತಿಳಿಸುವ ಮಹತ್ವದ ದಾಖಲೆಯಾಗಿದೆ. ಇವಲ್ಲದೆ ಇನ್ನೂ ಮೂರು ಶಾಸನಗಳು ವಿನಯಾದಿತ್ಯನ ಆಳ್ವಿಕೆಗೆ ಸಂಬಂಧಿಸಿದ್ದು ಅವರ ಶೌರ್ಯೌದಾರ್ಯಗಳನ್ನು ವಿವರಿಸಿವೆ. ಆತನ ಪುತ್ರ ಎಱೆಯಂಗನ ಉಲ್ಲೇಖ ಅನೇಕ ಶಾಸನಗಳಲ್ಲಿ ಬರುತ್ತದೆ. ಆದರೆ ಆತನ ಆಳ್ವಿಕೆಗೆ ಸಂಬಂಧಿಸಿದಂತೆ ಒಂದೇ ಶಾಸನ ಈ ಸಂಪುಟದಲ್ಲಿದೆ—ಬೇ. 473. 1ನೆಯ ಬಲ್ಲಾಳನಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ ಎರಡು ಶಾಸನಗಳು ಇವೆ—ಬೇ. 135 ಹಾಗೂ ಬೇ. 118. ಈ ಶಾಸನ, ಎಱೆಯಂಗ ಹಾಗೂ ಆತನ ಪುತ್ರ ಬಲ್ಲಾಳನು ಮಾಡಿದ ಯುದ್ಧಗಳನ್ನು ವರ್ಣಿಸುತ್ತ 'ವಲ್ಲೂರು' ಹಾಗೂ 'ಬಳಯಪಟ್ಟಣ'ಗಳನ್ನು ತೆಗೆದುಕೊಂಡ ಸಂಗತಿಯನ್ನೂ ಮತ್ತು ಜಗದ್ದೇವನನ್ನು ಓಡಿಸಿದ ಸಂಗತಿಯನ್ನೂ ವಿವರಿಸಿದೆ. ಈ ಜಗದ್ದೇವ 6ನೆಯ ವಿಕ್ರಮಾದಿತ್ಯನ ಮಾಂಡಲಿಕ. ಬಲ್ಲಾಳ ಪೊಯ್ಸಳನು "ಬಲ್ಲಹನಂ ಕಣ್ಡು ಕಟಕ" ರಕ್ಷಿಸಿದ ಗೆಲುವಿನ ಸಂಗತಿ ಬೇ. 118ರಲ್ಲಿ ಬರೆದಿದೆ.

ಹೊಯ್ಸಳ ದೊರೆ ವಿಷ್ಣುವರ್ಧನನಿಗೆ ಸಂಬಂಧಿಸಿದಂತೆ ಪ್ರಸ್ತುತ ಸಂಪುಟದಲ್ಲಿ 23 ಶಾಸನಗಳಿವೆ. ಬೇ. 16 ವಿಷ್ಣುವರ್ಧನನ ವಿಜಯಗಳನ್ನು ವಿವರ ವಿವರವಾಗಿ ತಿಳಿಸುವ ಮೊದಲ ಶಾಸನ. ಆತನ ಕಾಂಭೋಜಕುದುರೆದಂಡು ನೆಲವನ್ನು ತೊತ್ತಳದುಳಿಯಿತು; "ಕಾಂಭೋಜವಾಜಿರಾಜಿಸಂಚರಣತರಳಧರಣೀವಳಯ" ಎನ್ನಿಸಿಕೊಂಡ. ಆತ ಕಾವೇರಿಯಿಂದ ಪೆರ್ದೊರೆ (ಕೃಷ್ಣಾನದಿ)ಯವರೆಗೆ ವ್ಯಾಪಿಸಿದ ಭೂಭಾಗಕ್ಕೆ ಪತಿಯಾಗಿ ಮಹಾಮಂಡಳೇಶ್ವರನಾಗಿದ್ದ:

1) ಮಲೆಯಂ ಸಾಧಿಸಿ ಕೊಂಗಚಂಗಿವಿಷಯಕ್ಷೋಣೀಶರಂ ಗೆಲ್ದು ದೋ
ರ್ವ್ವಳದಿಂ ಕಪ್ಪಮನೆಯ್ದೆ ಕೊಂಡದಿಗನಂ ಬೆಂಕೊಂಡು ಗಂಗೋರ್ವ್ವಿಗಂ
ಚಲದಿಂ ಕೂಡೆ ನೊಣಂಬವಾಡಿ ಮಹಿಗಂ ಶ್ರೀ ಕೃಷ್ಣವೇಣೀನದೀ
ಜಲದಿಂ ದಕ್ಷಿಣ ಭೂಮಿಗಂ ಪತಿಯೆನಲು ಶ್ರೀ ವಿಷ್ಣು ಕಣ್ಗೊಪ್ಪಿದಂ॥[50]

2) ಪಡುವಲ್ಪಶ್ಚಿಮವಾರ್ದ್ಧಿ ಮೂಡ ನೆಗಳ್ದಾ ಕಾಂಚೀಪುರಂ ತೆಂಕನೋ
ಳ್ಪಡೆ ಸಚ್ಚಂದನಮಂದಮಾರುತಚಳಶ್ರೀಖಂಡಷಂಡಾಚಳಂ
ಬಡಗಲ್ಪೆರ್ದ್ದೊಱೆ ಮೇಱೆಯಾಗೆ ನೆಲನಂ ವಿಕ್ರಾಂತದಿಂದಾಳ್ದನೆಂ
ದಡೆ ಪೋಲ್ವಂನನದಾವನೀ ಭುಜಬಳ ಭ್ರಾಜಿಷ್ಣುವಂ ವಿಷ್ಣುವಂ॥[51]

ಈ ಶಾಸನದಲ್ಲಿ ಮತ್ತು ಬೇ. 16ರಲ್ಲಿ ವಿಷ್ಣುವರ್ಧನ ಹಾಗೂ ಶಾಂತಲದೇವಿಯರ ವ್ಯಕ್ತಿಚಿತ್ರ ತುಂಬ ಸೊಗಸಾಗಿ ಮೂಡಿ ನಿಂತಿವೆ. ಈ ಸಂಬಂಧದಲ್ಲಿ ಅವರ ಬಿರುದಾವಳಿಗಳನ್ನು ಗಮನಿಸಬೇಕು. ವಿಷ್ಣುವರ್ಧನನು ಗೆದ್ದ ಸ್ಥಳಗಳ, ಸೈನ್ಯದ

---

48. 'ಹರತಿಸಿರಿ' (ಸಂ. ಲಕ್ಷ್ಮಣ ತೆಲಗಾವಿ), ಪು. 353–64
49. (ಎ) 'ಚಾವುಂಡರಾಯ ಪುರಾಣಂ' (ಸಂ. ಡಾ.ಬಿ.ಎಸ್. ಕುಲಕರ್ಣಿ) ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಣೆ;
    (ಬಿ) 'ಚಾವುಂಡರಾಯ ಪುರಾಣಂ' (ಸಂ. ಶ್ರೀಮತಿ ಕಮಲಾ ಹಂಪನಾ ಹಾಗೂ ಶ್ರೀ ಕೆ.ಆರ್. ಶೇಷಗಿರಿ) ಮತ್ತು
    (ಸಿ) 'ಚಾವುಂಡರಾಯ ಪುರಾಣಂ' (ಸಂ.ಎಂ.ಸಿ. ಪದ್ಮನಾಭಶರ್ಮ)–ಈ ಮೂರು ಆವೃತ್ತಿಗಳಲ್ಲೂ ಪೋಸಳನ ಉಲ್ಲೇಖವಿದೆ.
50. ಬೇ. 268, ಪು. 259
51. ಬೇ. 410, ಪು. 378

KAN·F5487
EPI.9

ಚಟುವಟಿಕೆಗಳ, ಸುಂದರ ವರ್ಣನೆಗಳು ಇದರಲ್ಲಿ ತುಂಬಿದ್ದು ಇದೊಂದು ಒಳ್ಳೆಯ ಕಾವ್ಯವಾಗಿದೆ. ಬೇ. 16ರ ಉದ್ದೇಶ 'ವಿಜಯನಾರಾಯಣದೇವ' 'ಚೆಂನಕೇಶವದೇವ' ಮತ್ತು 'ಲಕ್ಷ್ಮೀನಾರಾಯಣದೇವ' ಎಂಬ ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಆಯಾ ದೇವತೆಗಳ 'ನಿತ್ಯನೈಮಿತ್ತಿಕ' ಶ್ರೀಕಾರ್ಯಗಳಿಗಾಗಿ ದತ್ತಿಯನ್ನು ಬಿಡುವುದು[52]. ಈಗ ನಮಗೆ 'ವಿಜಯನಾರಾಯಣ' ಹಾಗೂ 'ಚೆನ್ನಕೇಶವ' ದೇವರ ಮೂರ್ತಿಗಳು ಉಪಲಬ್ಧವಿವೆ; ಅವು ಆಗಿನ ಆ ದಿವಸದಂದು ಪ್ರತಿಷ್ಠಾಪಿತ ಮೂಲ ವಿಗ್ರಹ (=ಮೂಲಬೇರ)ಗಳೆಂದು ಈಗಲೂ ದೇವರ ಪೀಠದಲ್ಲಿರುವ ಶಾಸನಗಳ ಮೂಲಕ ಸತ್ಯವನ್ನು ಸಾರುತ್ತಿವೆ:

1) ಜಿಷ್ಣುರ್ವಿಷ್ಣುಮಹೀಪಾಳಃ ಪಾಳಿತಾಖಿಳಭೂತಳಃ
ದೇವದೇವೇಶ ವಿಜಯನಾರಾಯಣಮಚೀಕರತ್ ॥[53]

2) ಶಾಂತಿಕೃತ್ಸರ್ವ್ವಭೂತಾನಂ ಪ್ರತಿಷ್ಠಾ ವಿಷ್ಣುಕಾಂತಯಾ
ಚೆಂನಕೇಶವದೇವಸ್ಯ ಶಾಂತಿದೇವ್ಯಾ ಕೃತೋತ್ತಮಾ ॥[54]

ಆದರೆ ವಿಷ್ಣುವರ್ಧನನು ಪ್ರತಿಷ್ಠಾಪಿಸಿದ 'ಲಕ್ಷ್ಮೀನಾರಾಯಣ' ದೇವರ ಮೂರ್ತಿ, ಸದ್ಯ ಉಪಲಬ್ಧವಿಲ್ಲ. ಪ್ರಾಯಃ ಆ ಮೂರ್ತಿಯಿದ್ದ ದೇವಾಲಯ ನೆಲಸಮವಾಗಿ ಹೋಗಿದೆಯೊ ಏನೊ (?) ವಿಷ್ಣುವರ್ಧನನು ಮೂರು ದೇವತೆಗಳಿಗೆ ದತ್ತಿಯನ್ನು ಕೊಟ್ಟಿದು ಅತ್ಯಂತ ಸ್ಪಷ್ಟವಿರುವುದರಿಂದ ಪರಂಪರೆಯಲ್ಲಿ ಸತ್ಯಸಂಗತಿಗಳು ಎಂದರೆ ವಿಜಯನಾರಾಯಣ ದೇವಾಲಯವೆಂದರೆ ಈಗ ಜನರು ನಂಬಿರುವ ಕೇಶವನದೆಂದು ತೋರಿಸುವ ದೇವಾಲಯ; ಚೆನ್ನಕೇಶವ ದೇವಾಲಯವೆಂದರೆ ಕಪ್ಪೆಚೆನ್ನಿಗರಾಯನ ದೇವಾಲಯ ಮತ್ತು 'ವೀರನಾರಾಯಣ ದೇವಸ್ಥಾನವು' ಪ್ರಾಯಃ 'ಲಕ್ಷ್ಮೀನಾರಾಯಣ' ದೇವಸ್ಥಾನ ಆಗಿದ್ದಿರಬಹುದು? ಸದ್ಯ ಈ ಬಗ್ಗೆ ಇದಮಿತ್ಥಂ ಎಂದು ಹೇಳಲು ಬರುವುದಿಲ್ಲ. ವಿಜಯನಾರಾಯಣನನ್ನು ಚೆನ್ನಕೇಶವ ಎಂದು ಈಗ ಗುರುತಿಸುತ್ತಿದ್ದಾರೆ! ಕ್ರಿ.ಶ. 1310ರಲ್ಲಿ ಜರುಗಿದ ಮಹಮ್ಮದೀಯರ ದಾಳಿಯಲ್ಲಿ ಈ ದೇವಾಲಯಸಂಕೀರ್ಣವು ಹಾನಿಗೊಳಗಾಯಿತು ಮತ್ತು ವಿಜಯನಗರದ ದೊರೆ ಇಮ್ಮಡಿ ಹರಿಹರನ (ಕ್ರಿ.ಶ. 1377-1404) ಕಾಲದವರೆಗೆ ಮುಚ್ಚಲ್ಪಟ್ಟಿತ್ತು ಎಂದೂ ತಿಳಿದು ಬರುವುದರಿಂದ[55] ಅರ್ಥಾತ್ ಜನಬಳಕೆ ತಪ್ಪಿದ ಈ ಕಾಲದಲ್ಲಿ ದೇವಾಲಯಗಳ ಹೆಸರುಗಳು ಅದಲುಬದಲಿಯಾದವೆಂದು ಕಂಡು ಬರುತ್ತದೆ. ಕಲಬುರ್ಗಿಯ ಗಂಗಸಾಲಾರ್ (ಹಸನಗಂಗು ಬಹಮನೀ ದೊರೆಯ ಸೇನಾಧಿಪತಿಯು) ಕೂಡ ದೇವಸ್ಥಾನವನ್ನು ಹಾಳುಮಾಡಿದ; ಅವನು ಕೆಡವಿದ ಗೋಪುರವು ಕ್ರಿ.ಶ. 1397ರಲ್ಲಿ ಇಮ್ಮಡಿ ಹರಿಹರನ ಮಂತ್ರಿಯಾದ ಗುಂಡದಂಡಾಧಿಪನಿಂದ ಪುನಃ ಏಳು ಅಂತಸ್ತುಗಳಲ್ಲಿ ಆಕಾಶಚುಂಬಿಸುವ ರೀತಿಯಲ್ಲಿ ಕಟ್ಟಲ್ಪಟ್ಟಿತು[56]. ವಿಷ್ಣುವರ್ಧನನು ಕಟ್ಟಿಸಿದ ಈ ದೇವಾಲಯಗಳ ಸಂಕೀರ್ಣ, ಹೊಯ್ಸಳ ವಾಸ್ತುಶಿಲ್ಪದ ಒಂದು ಸುಂದರ ನಿದರ್ಶನ: The Kēśava temple at Bēlūr, is one of the most exquisite specimens of the Hoysala style of architecture. According to Fergusson it combines constructive propriety with exuberant decoration to an extent not often surpassed in any part of the world[57] (ಎ) (ಬೇಲೂರಿನಲ್ಲಿರುವ ಕೇಶವದೇವಾಲಯವು ಹೊಯ್ಸಳ ಶೈಲಿಯ ದೇವಾಲಯ ಪದ್ಧತಿಯ ವಾಸ್ತುಶಿಲ್ಪಕ್ಕೆ ಒಂದು ಅತ್ಯಂತ ಸುಂದರ ನಿದರ್ಶನ. ಫಗ್ರ್ಯುಸನ್ ಅವರ ಪ್ರಕಾರ ಅದು ವಾಸ್ತುಶಾಸ್ತ್ರದ ನಿರ್ಮಾಣ ಪದ್ಧತಿಯ ಔಚಿತ್ಯತೆಯ ಜೊತೆಜೊತೆಗೆ ಸಮೃದ್ಧವಾಗಿ ಅಲಂಕೃತಗೊಂಡಿದ್ದು ಪ್ರಪಂಚದ ಯಾವುದೇ ಕಟ್ಟಡಕ್ಕೂ ಹೊಯ್ಕುಯ್ಯಾಗಿದ್ದು ಸಮದಂಡಿಯಾಗಿ ಮೀರಲಸದಳವಾಗಿ ನಿಂತಿದೆ). ಇದುವೆ ಹೊಯ್ಸಳ ವಾಸ್ತುಶಿಲ್ಪದ ಪ್ರಕಾರಕ್ಕೆ ಮೊದಲ ಸ್ಥಳ[57](ಬಿ).

---

52. ಬೇಲೂರ ಚನ್ನಕೇಶವ ದೇವಾಲಯದಲ್ಲಿರುವ ತಾಮ್ರಶಾಸನದಲ್ಲೂ (ಬೇ. 168) ಈ ವಿಷಯಗಳ ವಿವರಣೆ ಬಂದಿದೆ; ಪು. 128

53. ಬೇ. 1, ಪು. 3

54. ಬೇ. 94 ಪು. 50

55. R. Narasimhachar 'The Kēśava Temple at Bēlūr' (Architecture and Sculpture in Mysore, No. II, 1919), p. 16.

56. ಬೇ. 144 ಪು. 101-(2

57. (ಎ) ಆರ್. ನರಸಿಂಹಾಚಾರ್, ಪೂರ್ವೋಕ್ತ, ಪು, 1
(ಬಿ) ದೊಡ್ಡಗದ್ದವಳ್ಳಿಯ ದೇವಸ್ಥಾನವನ್ನು ಹೊಯ್ಸಳ ವಾಸ್ತುಶಿಲ್ಪದ ಮೊದಲ ಮಾದರಿಯೆಂದು ಕೆಲವು ವಿದ್ವಾಂಸರು ಬರೆದಿದ್ದಾರೆ. ಆದರೆ ಆ ದೇವಸ್ಥಾನವನ್ನು ಕ್ರಿ.ಶ. 1113ರಲ್ಲಿ ಕಟ್ಟಲಿಲ್ಲ. ಕ್ರಿ.ಶ. 1113ರಲ್ಲಿ ವಿಷ್ಣುವರ್ಧನನು "ಬನವಸೆ" ಮತ್ತು ಹಾನುಂಗಲ್ಲುಗಳನ್ನು ಗೆದ್ದಿದ್ದಿಲ್ಲ; ಕ್ರಿ.ಶ. 1117ರ ಅನಂತರ ಸು. 1120ರಲ್ಲಿ ಈ ಸ್ಥಳಗಳನ್ನು ಆತ ಗೆದ್ದನು; ಆದುದರಿಂದ ಆ ಶಾಸನ ಎಂದರೆ ಹಾ. 36ನ್ನು (ಎ.ಕ.ಸಂ. 8, 1984) ಕ್ರಿ.ಶ. 1173 ಮಾರ್ಚ್ ತಿಂಗಳಿನಲ್ಲಿ, ವಿಜಯ ಸಂವತ್ಸರದಲ್ಲಿ ಬರೆಯಲಾಗಿದೆ. ಇಲ್ಲಿನ ವಿಷ್ಣುವರ್ಧನ ಒಂದನೆಯ ನರಸಿಂಹ; ಆತನಿಗೂ ಈ ಹೆಸರು ಇದ್ದಿತು.

ವಿಷ್ಣುವರ್ಧನನ ಆಳ್ವಿಕೆಯ ಕಾಲದ ಕ್ರಿ.ಶ. 1120ರ ಘಟ್ಟದಹಳ್ಳಿ ಶಾಸನವು (ಬೇ. 261) ಕೇತಮಲ್ಲ ಎಂಬ ವ್ಯಕ್ತಿ ತನ್ನೊಡೆಯ ವಿಷ್ಣುವರ್ಧನನ ಮೇಲಿನ ಭಕ್ತಿಯಿಂದ ದೋರಸಮುದ್ರದಲ್ಲಿ 'ಶಿವನ ಮಹಾಭವನ' ಒಂದನ್ನು ಮಾಡಿಸಿ ಅದಕ್ಕೆ 'ವಿಷ್ಣುವರ್ದ್ಧನ ಪೊಯ್ಸಳೇಶ್ವರಂ' ಎಂಬ ಹೆಸರಿಟ್ಟುದನ್ನು ದಾಖಲಿಸಿದೆ. ಇದೇ ಈಗಿನ ಹಳೇಬೀಡಿನ 'ಹೊಯ್ಸಳೇಶ್ವರ' ದೇವಾಲಯ.

ಬೇ. 389, ಕ್ರಿ.ಶ. 1133ರಲ್ಲಿ ಬರೆಯಲ್ಪಟ್ಟ ಬಸ್ತಿಹಳ್ಳಿಯ ಶಾಸನ, ವಿಷ್ಣುವರ್ಧನನ ಜೀವನ ಚರಿತ್ರೆಯಲ್ಲಿ ಒಂದು ಮಹತ್ವದ ಶಾಸನ. ವಿಷ್ಣುವರ್ಧನನು ಬಂಕಾಪುರದಲ್ಲಿ ಬೀಡು ಬಿಟ್ಟಿದ್ದ; ಆಗ ಹಳೆಯಬೀಡಿನಿಂದ ಅದೇ ಹೊಚ್ಚಹೊಸದಾಗಿ ಕಟ್ಟಿಸಿದ ದ್ರೋಹಘರಟ್ಟಜಿನಾಲಯದ ಅರ್ಚಕರು (ಇಂದ್ರರು) ಜಿನಬಿಂಬವನ್ನು ಪ್ರತಿಷ್ಠಾಪಿಸಿದ ಶುಭದಾಯಕವಾದ ಸಂದರ್ಭದ ಪ್ರಸಾದವನ್ನು ತಲುಪಿಸಲು ಬಂಕಾಪುರಕ್ಕೆ ಹೋದರು. ಇಂದ್ರರು ಪ್ರಸಾದದೊಂದಿಗೆ ತಲುಪಿದ ಸಮಯದಲ್ಲಿ ಸಂತೋಷದ ಎರಡು ಶುಭವಾರ್ತೆಗಳು ರಾಜನಿಗೆ ಬಂದವು. ವಿಷ್ಣುವರ್ಧನನ ಸೈನಿಕರು ಮಸಣ ಎಂಬ ವ್ಯಕ್ತಿಯೊಂದಿಗಿದ್ದ ಅಸಾಮಾನ್ಯ ಬೃಹತ್‌ಸೇನೆಯನ್ನು ಸೋಲಿಸಿ ಆ ಮಸಣನನ್ನು ಕೊಂದು ವಿಜಯವನ್ನು ಸಂಪಾದಿಸಿದ್ದರು, ಮತ್ತು ವಿಷ್ಣುವರ್ಧನನ ಪಟ್ಟದರಾಣಿ ಲಕ್ಷ್ಮಿದೇವಿ ಕುಮಾರನಿಗೆ ಜನ್ಮವಿತ್ತಿದ್ದಳು. ವಿಜಯದ ನೆನಪಿಗಾಗಿ ವಿಷ್ಣುವರ್ಧನ 'ದ್ರೋಹಘರಟ್ಟಜಿನಾಲಯ'ದಲ್ಲಿ ಪ್ರತಿಷ್ಠಾಪಿತಗೊಂಡ ಮೂರ್ತಿಗೆ 'ವಿಜಯಪಾರ್ಶ್ವದೇವ' ಎಂದೂ ಮತ್ತು ತನ್ನ ಕುಮಾರನಿಗೆ 'ವಿಜಯನಾರಸಿಂಹ' ಎಂದೂ ಹೆಸರನ್ನು ಇಡಿಸಿದನು. ಆತ ಕುಮಾರನ ಅಭ್ಯುದಯಕ್ಕೋಸ್ಕರ ಸಕಳ ಶಾಂತಿವಿಧಾನಗಳನ್ನು ಆಚರಿಸಲು ಮತ್ತು ವಿಜಯಪಾರ್ಶ್ವನಾಥನ ಹಾಗೂ ಚತುರ್ವಿಂಶತಿ ತೀರ್ಥಂಕರರ ಪೂಜೆಗೆಂದು, ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು, ಹಾಗೂ ತಪೋಧನರ ಆಹಾರದಾನಕ್ಕೆಂದು, ಆಸಂದಿನಾಡ ಜಾವಗಲ್ಲು ಎಂಬ ಗ್ರಾಮವನ್ನೂ ದೋರಸಮುದ್ರದಲ್ಲಿಯ ಕೇರಿಗಳನ್ನೂ ಅಂಗಡಿಗಳನ್ನೂ ದತ್ತಿಯಾಗಿ ಧಾರೆಯೆರೆದುಕೊಟ್ಟನು.

ಈ ಶಾಸನ, ಇನ್ನೊಂದು ದೃಷ್ಟಿಯಿಂದಲೂ ಬಹಳ ಮಹತ್ವದ್ದಾಗಿದೆ. ಏಕೆಂದರೆ ಇದು ವಿಷ್ಣುವರ್ಧನ ದೊರೆಯ ದಂಡನಾಯಕನಾದ ಗಂಗರಾಜನ ವಂಶವಿವರಗಳನ್ನೂ ಕೀರ್ತಿಪತಾಕೆಯನ್ನೂ ಚಾರಿತ್ರ್ಯವನ್ನೂ ನಿರೂಪಿಸುವ ಅಪೂರ್ವದಾಖಲೆಯಾಗಿದೆ. ಗಂಗರಾಜನ ಪೂರ್ವಿಕರು ಕೌಂಡಿಣ್ಯಗೋತ್ರದ ಕರ್ನಾಟಕದ ಬ್ರಾಹ್ಮಣರು. ಅವರು ಜೈನಧರ್ಮವನ್ನು ಸ್ವೀಕರಿಸಿದ್ದರೆಂದು ಅಥವಾ ಅವರನ್ನು ಜೈನ ಬ್ರಾಹ್ಮಣರಾಗಿದ್ದರೆಂದು ಹೇಳಬಹುದು. "ಕರ್ಣ್ಣಾಟಧರಾಮರೋತ್ತಂಸಂ" ಎಂಬುದನ್ನು ಗಮನಿಸಬೇಕು. ವಂಶ ವಿವರ ಹೀಗಿದೆ:

ಏಚಿರಾಜ
ಹೆಂ. ಪೋಚಾಂಬಿಕೆ
|
ಗಂಗರಾಜ
ಹೆಂ. ನಾಗಲದೇವಿ
|
ಬೊಪ್ಪಚಮೂಪ

ಗಂಗರಾಜನ ವಂಶವೃಕ್ಷ ಹಾಗೂ ಇನ್ನಷ್ಟು ವಿವರಗಳನ್ನು ಎ.ಕ. ಸಂಪುಟ–2 (1973) ರಿಂದ ನಾವು ಸಂಗ್ರಹಿಸಬಹುದಾಗಿದೆ.[58] ಗಂಗರಾಜನ ಈ ಎಲ್ಲ ಬಿರುದಾವಳಿಗಳನ್ನು ಅಲ್ಲಿನ ಶಾಸನಗಳಿಂದಲೂ ಸಂಗ್ರಹಿಸಲು ಸಾಧ್ಯ[59]. ಪ್ರಸ್ತುತ ಶಾಸನ ಗಂಗರಾಜನ ಪರೋಕ್ಷವಿನಯಕ್ಕೆ ಸಂಬಂಧಿಸಿದ ದಾಖಲೆಯಾಗಿರುವುದರಿಂದ ಇತರ ಕಡೆಯ ಶಾಸನಗಳಲ್ಲಿ ಬಂದ ಅನೇಕ ಸಂಗತಿಗಳು ಇಲ್ಲಿ ಆತನ ಚರಿತ್ರೆಯನ್ನು ನಿರೂಪಿಸುವಲ್ಲಿ ಆವರ್ತನಗೊಂಡಿವೆ. ಅರ್ಥಾತ್ ಅಲ್ಲಲ್ಲಿ ಬಂದ ಬಿರುದಾವಳಿಗಳು ಮತ್ತು ಒಂದು ಪದ್ಯ ಯಥಾವತ್ತಾಗಿ ಮೂಡಿ ನಿಂತಿವೆ :

ಮತ್ತಿನಮಾತವನ್ತಿರಲಿ ಜೀರ್ಣ್ಣಜಿನಾಲಯಕೋಟಿಯಂ ಕ್ರಮಂ
ಬೆತ್ತಿರೆ ಮುಂನಿನಂತೆ ಪಲಮಾರ್ಗ[ದೊ]ಳಂ ನೆಱೆಮಾಡಿಸುತ್ತವ–
ತ್ತ್ಯುತ್ತಮ ಪಾತ್ರದಾನದೊದವಂ ಮೆಱೆವುತ್ತಿರೆ ಗಂಗವಾಡಿತೊಂ
ಬತ್ತಱುಸಾಸಿರಂ ಕೊಪಣವಾದುದು ಗಂಗಣದಂಡನಾಥನಿಂ॥

ಇದನ್ನು ಶ್ರವಣಬೆಳಗೊಳದ ಶಾಸನವೊಂದರಲ್ಲಿ ಕಿಂಚಿತ್ ಪಾಠಭೇದಗಳಿಂದ ಕಾಣಬಹುದಾಗಿದೆ.[60]

---

[58] ಎ.ಕ. ಸಂ. 2 (1973) ಪೀಠಿಕೆ, ಪು. Lvii

[59] ಅದೇ. ಶಾಸನ ಸಂಖ್ಯೆ : 532, 503, 157, 81 ಮತ್ತು 82 ಇತ್ಯಾದಿ

[60] ಎ.ಕ, ಸಂ. 2 (1973) ಶಾ.ಸಂ—156, ಪು. 98

ಬೇ. 193, ಕ್ರಿ.ಶ. 1138ರಲ್ಲಿ ಬರೆಯಲಾಗಿರುವ ದಬ್ಬೆ ಅಗ್ರಹಾರದ ವೀರಗಲ್ಲು. ಈ ಶಾಸನದ ಪ್ರಕಾರ ವಿಷ್ಣುವರ್ಧನನು ದಿಗ್ವಿಜಯ ನಿಮಿತ್ತ ತುಂಗಭದ್ರಾನದಿಯನ್ನು ದಾಟಿ ಹಾನುಂಗಲ್ಲ ಕೋಟೆಯನ್ನು ಮುತ್ತಿ ಕಾದುವ ಸಂದರ್ಭದಲ್ಲಿ ಆತನ ಪಡೆಯಲ್ಲಿಯ ದಬ್ಬೆಯ ಕಲಿರಾಯ ಉರ್ಫ್ ಲೆಂಕರಾಯ ಎಂಬ ವ್ಯಕ್ತಿಯು ಎದುರಾಳಿಗಳ ಆನೆ, ಕುದುರೆ ಮತ್ತು ಕಾಲಾಳು ಎಲ್ಲವನ್ನು ಎದುರಿಸಿ ವೈರಿಗಳನ್ನು ತರಿತರಿದು ಹೆಣದ ಬಣಬೆಯನ್ನು ಒಟ್ಟಿ 'ರಣರಂಗಶೂದ್ರಕ' ಎಂಬ ಬಿರುದನ್ನು ಪಡೆದನು. ಆ ಯುದ್ಧವನ್ನು ವಿಷ್ಣುವರ್ಧನ ಸ್ವತಃ ಆನೆಯನ್ನು ಏರಿ ವೀಕ್ಷಿಸುತ್ತಿದ್ದನು.

ಬೇ. 340, ಕ್ರಿ.ಶ. 1140ರಲ್ಲಿ ಬರೆಯಲಾಗಿರುವ ಹಳೇಬೀಡಿನ ಶಾಸನ, ಬೇಂಟೆಯ ತಿಪ್ಪೆಯನಾಯಕ ಎಂಬವನು ದೋರಸಮುದ್ರದಲ್ಲಿ ಹಿರಿಯಕೆರೆಯಬಳಿಯಲ್ಲಿ ಉತ್ತುಂಗ ದೇವಾಲಯವನ್ನು ಕಟ್ಟಿಸಿದ ಸಂಗತಿಯನ್ನು ತಿಳಿಸುತ್ತ ವಿಷ್ಣುವರ್ಧನನು ಬನವಸೆನಾಡಿನ ವರದಾಸಂಗಮದ ಬಳಿಯಲ್ಲಿ ಹುಲ್ಲುಣಿಯ ದಿವ್ಯತೀರ್ಥದಲ್ಲಿ 'ತುಲಾಪುರುಷ' ಎಂಬ ಕ್ರತುವನ್ನು ಆಚರಿಸಿಕೊಂಡ ಸಂಗತಿಯನ್ನೂ ತಿಳಿಸಿದೆ. ವಿಷ್ಣುವರ್ಧನನು ಬಂಕಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಸಂಗತಿ ಮತ್ತು 'ತುಲಾಪುರುಷ' ಕ್ರತುವನ್ನು ಆಚರಿಸಿ ದಾನ ಮಾಡಿದ ಸಂಗತಿ ಶಾ.ಶ. 1059 (ಕ್ರಿ.ಶ. 1137) ನಳಸಂವತ್ಸರದಲ್ಲಿ ಬರೆಯಲಾದ ಅರಸೀಕೆರೆ ತಾಲೂಕಿನ ಗೋವಿಂದಪುರ ಶಾಸನದಲ್ಲಿಯೂ ಬಂದಿದೆ.[61] ವಿಷ್ಣುವರ್ಧನ 2-3 ಸಲ ತುಲಾಪುರುಷ ಕ್ರತುವನ್ನು ಆಚರಿಸಿಕೊಂಡಿರಬಹುದು.

ಬೇ. 458, ಕ್ರಿ.ಶ. 1145-46ರಲ್ಲಿ ಬರೆಯಲಾದ ಪಂಡಿತನಹಳ್ಳಿಯ ಶಾಸನ "ವಿಷ್ಣುವರ್ಧನನ ಕಟ್ಟಿದಲಗು" ಎಂದು ಪ್ರಸಿದ್ಧಿಯನ್ನು ಹಾಗೂ ಅವನ 'ಗರುಡ' ಎಂದು ಪ್ರಸಿದ್ಧನಾದ ಹಡವಳ ಬೋಕಿ ಮತ್ತು ಬಲ್ಲ ಎಂಬ ವೀರ ಇವರು ಚಂಗಾಳ್ವನ ಕುದುರೆದಳ ಹಾಗೂ ಚಂಗಾಳ್ವನ ಆನೆಯೊಂದಿಗೆ ಹೋರಾಡಿದ ಸಂಗತಿಯನ್ನು ವಿವರಿಸಿ, ಬಲ್ಲನು ರಣರಂಗದಲ್ಲಿ ಮಡಿದುದನ್ನು ವಿವರಿಸಿದೆ. ಯುದ್ಧದಲ್ಲಿ ಜಯವು ಹೊಯ್ಸಳರದಾಯಿತೆಂದು ತೋರುತ್ತದೆ.

ಬೇ. 96 ಇದು ಬೇ. 16ರಂತೆಯೆ ಇದೆ. ಆ ಶಾಸನದಲ್ಲಿ ಬಂದಿರುವ ಎಲ್ಲ ಬಿರುದಾವಳಿಗಳು ಇದರಲ್ಲಿಯೂ ಸ್ಥಾನವನ್ನು ಪಡೆದಿವೆ. ಆದರೆ ದತ್ತಿವಿಭಾಗದ ವಿವರಗಳು, ತೇದಿ ವಿವರಗಳು, ಒಂದೂ ಇಲ್ಲ. ಶಾಸನವು ಸಂಪೂರ್ಣ ಬರೆಯಲ್ಪಟ್ಟಿಲ್ಲ. ಬೇ. 186 ವಿಷ್ಣುವರ್ಧನನ ಹಡವಳ ಚಿಕ್ಕಬಿಟ್ಟಿದೇವನ ಕಾಳಗವೊಂದನ್ನು ಕುರಿತಿದೆ. ಬೇ. 348 ರ ಪ್ರಕಾರ ವಿಷ್ಣುವರ್ಧನನು ತಗರ್ತಿಕೋಟೆಯಲ್ಲಿ 'ಮುದ' ಎಂಬವನು ಹೆಣ್ಣುಮಕ್ಕಳೊಂದಿಗೆ ಹೋರಾಟ ಮಾಡುತ್ತಿರಲು ಕಂಡು ತನ್ನ ಸೇವಕ ಚಾಯ ನಾಯಕನಿಗೆ ಅವನನ್ನು ದಂಡಿಸಲು ಆಜ್ಞೆಯಿತ್ತು ಅವನನ್ನು ಶಿಕ್ಷಿಸಿದನು. ಬೇ. 398 ಒಂದು ಅಪೂರ್ಣ ಶಾಸನ. ಇದು ವಿಷ್ಣುವರ್ಧನನ್ನು 'ಚೋಳನ ಜೂಬು' 'ಮಾಳವನಗೋಣ್ಮುರಿ' 'ಚೇರನನದ್ದಿತಿಂಬಮಾಕಾಳಿ' 'ಕರಾಳನಂ ತುಳಿವಗಂಧಗಜ' 'ಖಸನಳ್ಳೈಯಂಬು' ಮತ್ತು 'ನೇಪಾಳನ ಬೆಂನಚಮ್ಮಟಿಗೆ' ಎಂದು ವರ್ಣಿಸಿದೆ.

ಬೇ. 120 ನೆಯ ಶಾಸನವು ಒಂದನೆಯ ನರಸಿಂಹನ ಮಂತ್ರಿ ಮಾಚಚಮೂಪನು ತನ್ನ ವ್ರತಗುರುಗಳೂ ಶ್ರುತ ಗುರುಗಳೂ ಆದ 'ಪರವಾದಿಮಲ್ಲ' 'ವಾದೀಭಸಿಂಹ' ಮತ್ತು 'ಮಹಾಮಂಡಳಾಚಾರ್ಯ' ಎಂದು ಪ್ರಸಿದ್ಧಿಯನ್ನು ಹೊಂದಿದ ಶ್ರೀಪಾಳ ತ್ರೈವಿದ್ಯದೇವರು ಕಟ್ಟಿಸಿದ ಆದೀಶ್ವರ ಬಸದಿಗೆ ದತ್ತಿಯನ್ನು ನೀಡಿದುದನ್ನು ದಾಖಲಿಸಿದೆ. ಜೈನಯತಿಗಳಾದ ಶ್ರೀಪಾಳರ ವ್ಯಕ್ತಿಚಿತ್ರ ಇದರಲ್ಲಿದೆ. ಬೇ. 434 ಈ ನರಸಿಂಹನ ಕಾಲದ್ದೆಂದು, ನರಸಿಂಹನನ್ನು ವಿಷ್ಣುವರ್ಧನನ ಮಗನೆಂದು ಬರೆದಿರುವುದರಿಂದ ಸ್ಪಷ್ಟವಿದೆ. ಆದರೆ ಶಕವರ್ಷ 1135 ಎಂದು ಓದಿದ್ದಾರೆ. ಅರ್ಥಾತ್ ಇದು ನರಸಿಂಹನ ಕಾಲಕ್ಕೆ ಹೊಂದುವುದಿಲ್ಲ. ಶಕವರ್ಷವನ್ನು ಶಾಸನಗಳ ನಕಲು ತಂದು ಪರಿಶೀಲಿಸಲು ಆಡಳಿತೆಯ ಅನಾನುಕೂಲಗಳಿಂದ ಆಗಲಿಲ್ಲವಾದುದರಿಂದ ಅದರ ಬಗ್ಗೆ ಖಚಿತ ಹೇಳಲು ಬರುವುದಿಲ್ಲ. ಆದರೆ ಶಕವರ್ಷವನ್ನು ಬಿಟ್ಟರೆ ಮಿಕ್ಕ ವಿವರಗಳು ಎಂದರೆ 'ಭಾವ' ಸಂವತ್ಸರ ಪುಷ್ಯ ಶುದ್ಧ 14 ಸೋಮವಾರ ಇವು ಕ್ರಿ.ಶ. 1154ರ ಡಿಸೆಂಬರ್ 20ಕ್ಕೆ ಸಂಪೂರ್ಣ ಸರಿಹೋಗುತ್ತವೆ. ಈ ಶಾಸನದಲ್ಲಿ ಬಂದಿರುವ ನರಸಿಂಹನ ವರ್ಣನೆಯು ಒಂದು ಪದ್ಯ ಶಬ್ದಮಣಿದರ್ಪಣ ಗ್ರಂಥದಲ್ಲಿ ಉದ್ಧೃತಗೊಂಡಿದೆ[62] ಆ ಪದ್ಯವಿಂತಿದೆ :

ಪಡೆಮಾತೇಂ ಬಂದು ಕಂಡಂಗಮೃತಜಳಧಿ ತಾಂ ಗರ್ಬ್ಬದಿಂ ಗಣ್ಡವಾತಂ
ನುಡಿವಂನಂಗೇನನೆಂಬೈ ಪ್ರಳಯಸಮಯದೊಳು ಮೇರೆಯಂ ಮೀಱಿ ಬಪ್ಪಾ
ಕಡಲಂನಂ ಕಾಳನಂನಂ ಮುಳಿದ ಕುಳಿಕನಂನಂ ಯುಗಾನ್ತಾಗ್ನಿಯಂನಂ
ಸಿಡಿಲಂನಂ ಸಿಂಗದಂನಂ ಪುರಹರನುರಿಗಣ್ಣಂನನೀ ನಾರಸಿಂಹಂ ॥[63]

---

61. ಎ.ಕ. ಸಂ. 5 (ಬಿ.ಎಲ್. ರೈಸ್) ಶಾ.ಸಂ. 144. ಈ ಶಾಸನದ ಪ್ರಕಾರ ವಿಷ್ಣುವರ್ಧನನ ರಾಜಧಾನಿಗಳು ಮೂರು: ದೋರಸಮುದ್ರ, ಬಂಕಾಪುರ, ಮತ್ತು ತಲವನಪುರ.
62. ಶಬ್ದಮಣಿದರ್ಪಣಂ (ಸಂ. ಪ್ರೊ. ಡಿ. ಎಲ್. ನರಸಿಂಹಾಚಾರ್) ಸೂ. 171-1 ಪು. 177 (ಮೂರನೆಯ ಆವೃತ್ತಿ)
63. ಬೇ. 108 ರಲ್ಲಿಯೂ ಈ ಪದ್ಯ ಬಂದಿದ್ದು ಆ ಶಾಸನದ ಕಾಲವು ಕ್ರಿ.ಶ. 1174; ಕ್ರಿ ಶ. 1174ಕ್ಕೂ ಮುಂಚೆ ಇದ್ದ ನರಸಿಂಹನೆಂದರೆ ಒಂದನೆಯ ನರಸಿಂಹ.

ಬೇ. 410 ಹಾಗೂ 411 ಎರಡೂ ಒಂದೇ ವಿಷಯವನ್ನು ಒಳಗೊಂಡಿದ್ದು ಒಂದರ ಪ್ರತಿ ಇನ್ನೊಂದಾಗಿದೆ. ಎರಡೂ ಒಂದೆಡೆಯಲ್ಲಿ ಇರುವುದು ಆಶ್ಚರ್ಯ. ಇವುಗಳ ಕಾಲ ಕ್ರಿ. ಶ. 1160 ಆಗಿದ್ದು ಇವುಗಳಲ್ಲಿ ಒಂದನೆಯ ನರಸಿಂಹನವರೆಗಿನ ವಂಶಾವಳಿಯನ್ನು ವಿವರಿಸಿ ನರಸಿಂಹನಿಗೆ ಸಂಬಂಧಿಸಿದಂತೆ ವಿಸ್ತಾರವಾದ ವರ್ಣನೆಯನ್ನು ಕೊಟ್ಟು ಆತನ ಪಿರಿಯರಸಿ 'ಚಾಗಲೆ' ಎಂದು ತಿಳಿಸಿ ಅನಂತರ ನರಸಿಂಹನ ಮಂತ್ರಿ, ಪಸಾಯ್ತ ಕೂಸಚಟ್ಟನ ವಂಶಾವಳಿಯನ್ನೂ ಆ ಗಂಡಹೆಂಡಿರ ವಿವರಗಳನ್ನೂ ವಿವರಿಸಿ ಆತನು ಕಟ್ಟಿಸಿದ ಚಟ್ಟೇಶ್ವರದೇವರಿಗೆ ದತ್ತಿಬಿಟ್ಟ ಸಂಗತಿಯನ್ನು ಬರೆಯಲಾಗಿದೆ. ನರಸಿಂಹದೊರೆಗೆ ಸಂಬಂಧಿಸಿದಂತೆ ಬಂದಿರುವ ಬಿರುದಾವಳಿಗಳು, ನರಸಿಂಹನನ್ನು ಹಿಮಸೇತುಪರ್ಯಂತ ಭೂಮಿಯನ್ನು ದುಷ್ಟನಿಗ್ರಹ ಶಿಷ್ಟಪ್ರತಿಪಾಳನೆಗೆಯ್ದು ರಕ್ಷಿಸುತ್ತ "ಸುಖಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯ್ಯುತ್ತಮಿರೆ" ಎಂದು ಹೇಳಿರುವುದು ಅಚ್ಚರಿಯದ್ದಾಗಿದೆ. ಈ ನುಡಿಗಟ್ಟು ಕಲ್ಯಾಣದ ಚಾಳುಕ್ಯರ ಶಾಸನಗಳಿಂದ ಅನುಕರಿಸಿದ್ದೆಂದೂ ತೋರುತ್ತದೆ. ಬೇ. 456 ಕ್ರಿ.ಶ. 1162ರಲ್ಲಿ ಬರೆಯಲ್ಪಟ್ಟದ್ದು ಒಂದನೆಯ ನಾರಸಿಂಹನಿಗೆ 'ವಿಷ್ಣುವರ್ಧನ' ಎಂಬ ಬಿರುದಿದ್ದುದನ್ನು ದಾಖಲಿಸಿರುವುದು ಗಮನಾರ್ಹವಾದ ಅಂಶವಾಗಿದೆ. ದೊರೆಯು ಬೇಲೂರ ನಾರಾಯಣದೇವರಿಗೆ ಪವಿತ್ರಾರೋಪಣ ಮಾಡಲು ಹೊರಟದ್ದು ಒಂದು ಮಹತ್ವದ ಅಂಶವಾಗಿದೆ. ಆಗ ಬೇಲೂರ ನಾರಾಯಣದೇವರೂ (ವಿಜಯನಾರಾಯಣ) ಚೆಂನಕೇಶವನಷ್ಟೆ ಪ್ರಸಿದ್ಧವಾಗಿದ್ದ ಮತ್ತು ಚೆಂನಕೇಶವನಿಂದ ಭಿನ್ನವಾಗಿದ್ದ ಎಂಬುದು ಗಮನಿಸಬೇಕಾದ ಸಂಗತಿ.

ಕ್ರಿ.ಶ. 1173ರಲ್ಲಿ ಬರೆಯಲಾದ ಬೇ. 515ನೆಯ ಶಾಸನವು ಒಂದನೆಯ ನರಸಿಂಹನನ್ನು 'ಮಹಾರಾಜಾಧಿರಾಜ' ಎಂದು ಕರೆದಿರುವುದನ್ನು ದಾಖಲಿಸಿದೆ. ನರಸಿಂಹನು 'ಮಹಾರಾಜಾಧಿರಾಜ' ಆದದ್ದು ಯಾವ ವರ್ಷ ? ಯಾವ ಕಾಲ ? ಇನ್ನು ಬೇ. 225 ಕ್ರಿ.ಶ. 1177–78ರಲ್ಲಿ ಬಂದ ಹೇಮಳಂಬಿಸಂವತ್ಸರದಲ್ಲಿ ಬರೆದುದು ಇಮ್ಮಡಿ ವೀರಬಲ್ಲಾಳನಿಗೆ "ಸಾಮ್ರಾಜ್ಯ ಪಟ್ಟಮಂ ಕಟ್ಟಿಸಿ" ಹೆಂಮಾಡಿದೇವನು ಮಹಾಪ್ರಧಾನನಾದ ಸಂಗತಿಯನ್ನು ವಿವರಿಸಿದೆ. ಇಮ್ಮಡಿ ಬಲ್ಲಾಳನು ಪಟ್ಟಕ್ಕೆ ಬರುವ ಕಾಲದಲ್ಲೇ ಆತನ ಪಟ್ಟ, ಸಾಮ್ರಾಜ್ಯಪಟ್ಟವಾಗಿತ್ತು. ಅರ್ಥಾತ್ ಇಮ್ಮಡಿ ಬಲ್ಲಾಳನು ಸಾಮ್ರಾಜ್ಯ ಪಟ್ಟವನ್ನು ತಂದೆಯಿಂದ ಪಡೆದನು. ಆ ತಂದೆಯು ಸಾಮ್ರಾಟನಾಗಿರದೆ ಮಗನಿಗೆ ಸಾಮ್ರಾಜ್ಯಪಟ್ಟವನ್ನು ಕಟ್ಟಿದನಾದರೂ ಹೇಗೆ ? ಪಟ್ಟಬಂಧ ಮಹೋತ್ಸವವು ದೋರಸಮುದ್ರದಲ್ಲಿ ನಡೆಯಿತೆನ್ನುವುದು ಶಾಸನದಲ್ಲಿ ಸ್ಪಷ್ಟವಿರುವುದರಿಂದ ಈ ಎಲ್ಲ ಘಟನೆಗಳನ್ನು ಪುನರಾವಲೋಕಿಸಬೇಕು. ಬೇ. 268 ನಮ್ಮ ಈ ಎಲ್ಲ ಸಂದೇಹಗಳನ್ನು ದೂರ ಮಾಡುತ್ತದೆ. ವಿಷ್ಣುವರ್ಧನ ಹಾಗೂ ಲಕ್ಷ್ಮಾದೇವಿಗೆ ಜನಿಸಿ, ಜನ್ಮವೆತ್ತ ದಿನವೇ ಪಟ್ಟವನ್ನು ತಂದೆಯಿಂದ ಕಟ್ಟಿಸಿಕೊಂಡ ಪ್ರತಾಪಿ, ವಿಜಯದ ಗಳಿಗೆಯಲ್ಲಿ ಹುಟ್ಟಿದ 'ವಿಜಯ ನರಸಿಂಹ' ಹೊಯ್ಸಳ ಮನೆತನಕ್ಕೆ ಚಕ್ರವರ್ತಿಪಟ್ಟವನ್ನು ತನ್ನ ತೋಳ್ಬಲದಿಂದ, ವಿಜಿಗೀಷುತನದಿಂದ ಒದಗಿಸಿದ; ಅಂತೆಯೇ ಹೊಯ್ಸಳರಲ್ಲಿ ಆತ ಮೊದಲ ಚಕ್ರವರ್ತಿ :

ಅನುಪಮ ಶೌರ್ಯ್ಯಮಂ ಮೆಱೆವನೆಂತಿದಿರಾಂತ (ವಿ)ರೋಧಿಭೂಪ ಪಾಂ
ಡ್ಯನಬಳಗರ್ವ್ವಮಂ ಕಿಡಿಸಿ ತಂನೃಪಸೂನುವೆನಿಪ್ಪ ತೈಲನಂ
ಘನನಿಶಿತಾಸಿಯಿಂ ತಱಿದು ತದ್ವೃತ್ತಂ ಮುಱಿದಾ ವಿರೋಧಿಗೆಂ
ತನುನಯದಿಂದ . . ಳವೊಪ್ಪುವುದೀ ನರಸಿಂಹಭೂಪನೊಳು ||

ಯಿ . . ವನೇಕಗುಣಂಗಳಿನೊಪ್ಪುವ ಕಾವ್ಯಕಥಾನುಬಂಧದಿಂ
ಸಂ[ನುತ]ಚಿತ್ತಂ ನಳನಹುಷಾದಿ ನೃಪಾಳಕರೀತಂನಂನ.
ದೇಂನದು[ಮಾಗ]ಳುಂ ಪೊಗಳ್ವರೇಂ ಬುಧಧಾರಿಣಿ ಕೂಡೆ ಕೂರ್ತ್ತುಭೂ –
ಮೀನುತನಂ ನೃಸಿಂಹನನಗುರ್ವ್ವಿನ ತೆಂಕಣಚಕ್ರವರ್ತಿಯುಂ ||

ವ|| ಅಂತಾ ತೆಂಕಣಚಕ್ರವರ್ತಿ ದಿವ್ಯವಸ್ತ್ರಾಭರಣಮಾಲ್ಯಾನುಲೇಪನಂಗಳಿನಲಂಕೃತನಾಗಿ ಲೀಲೆಯಿಂ ಬಂದೋಲಗಸಾಲೆಯೊಳೋಲಗಂ ಕೊಟ್ಟು ಕುಳಿರ್ಪುದುಂ ಮಹಾಪ್ರಧಾನ ಪ್ರಕರಸೇನಾನಾಥಯೂಥ ಪ್ರಸಿದ್ಧಮಂತ್ರಿನಿಕರ ಪ್ರಮುಖ ನಿಖಿಳಪರಿಜನಂಗಳಿನ್ .... ಇತ್ಯಾದಿ.

ಈ ಶಾಸನದಲ್ಲಿ ನರಸಿಂಹನನ್ನು 'ತೆಂಕಣಚಕ್ರವರ್ತಿ' 'ಯಾದವಚಕ್ರವರ್ತಿ' ಎಂದು ಸ್ಪಷ್ಟವಾಗಿ ಬರೆದಿರುವುದು ಬಹಳ ಮಹತ್ವದ ವಿಷಯ; ಚಕ್ರವರ್ತಿ ತೈಲಪನನ್ನು ಆತ ತನ್ನ ಕತ್ತಿಯಿಂದ ತರಿದು ತಾನು ಚಕ್ರವರ್ತಿಯಾದ, ಸಾಮ್ರಾಜ್ಯ ಪಟ್ಟವನ್ನು ಅಲಂಕರಿಸಿದ[64].

---

[64] 'ಇತಿಹಾಸದರ್ಶನ' (ಸಂ. ಡಾ. ಸೂರ್ಯನಾಥಕಾಮತ್) ಸಂಪುಟ–2, ಸಂಚಿಕೆ–1, ಚಾಳುಕ್ಯ ಹಾಗೂ ಹೊಯ್ಸಳ ಮನೆತನಗಳ ಇತಿಹಾಸದ ಮೇಲೆ ಹೊಸಬೆಳಕು, ಪು. 41–44

ತೇದಿಯಿಲ್ಲದ ಬೇ. 507ನೆಯ ಶಾಸನವು ಒಂದನೆಯ ನರಸಿಂಹನ ರಾಣಿ ಬಮ್ಮಲದೇವಿಯ ಮರಣವನ್ನೂ ಮತ್ತು ಆಕೆಯ ಸೇವಕ ಜೋಳವಾಳಿಗ ಹಾಗೂ ವೇಳೆವಾಳಿಗನಾದ ಸಿರಿವೊಳಲ ಚಾಗಗವುಡನು ಆ ಸಂದರ್ಭದಲ್ಲಿ 'ಸುರಲೋಕ ಪ್ರಾಪ್ತನಾದ' ಎಂದರೆ ಸಾವನ್ನಪ್ಪಿದ ಸಂಗತಿಯನ್ನೂ ದಾಖಲಿಸಿದೆ.

ಇಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ 40 ಶಾಸನಗಳಿವೆ. ಬೇ. 329ನೆಯ ಶಾಸನವು ಕ್ರಿ.ಶ. 1173ರ ಜುಲೈ ತಿಂಗಳಲ್ಲಿ ಇಮ್ಮಡಿ ವೀರಬಲ್ಲಾಳ ದೊರೆಯ ಪಟ್ಟಾಭಿಷೇಕವಾಯಿತೆಂದು ತಿಳಿಸಿದೆ. ಈ ಶಾಸನದಲ್ಲಿಯ ತಿಥಿಯು 'ವಿಜಯ ಸಂವತ್ಸರ ಶ್ರಾವಣ ಶುದ್ಧ 1 ಸೋ' ಎಂದಿದೆ. ಈ ತಿಥಿಯಂತು ಕ್ರಮ ತಪ್ಪಿದೆ. ಇಮ್ಮಡಿ ಬಲ್ಲಾಳನ ಪಟ್ಟಾಭಿಷೇಕವಾದ ತಿಥಿಯ ಬಗ್ಗೆ ಶಾಸನಗಳಲ್ಲಿ ಐಕಮತ್ಯವಿಲ್ಲ. ಎ.ಕ. ಸಂಪುಟ–8ರಲ್ಲಿ ಹಾಸನ ಶಾಸನ ಸಂಖ್ಯೆ–128ರಲ್ಲಿ 'ವಿಜಯಸಂವತ್ಸರದ ಶ್ರಾವಣಶುದ್ಧ ದಶಮೀ ಆದಿವಾರದಂದು ದೋರಸಮುದ್ರದ ನೆಲೆವೀಡಿನೊಳು ರಾಜ್ಯಾಭಿಷೇಕದ ಪಟ್ಟಬದ್ಧೋತ್ಸಾಹ' ಎಂದಿದೆ. ಆದೇ ಸಂಪುಟದ ಹಾ. 174ನೆಯ ಶಾಸನದಲ್ಲಿ 'ಶಕವರ್ಷ 1095ನೆಯ ವಿಜಯಸಂವತ್ಸರದ ಶ್ರಾವಣ ಶುದ್ಧ 11 ಆದಿವಾರದಂದು ತಂಮ ಪಟ್ಟಬನ್ಧೋತ್ಸವದೊಳ್' ಎಂದಿದೆ. ಇಮ್ಮಡಿ ಬಲ್ಲಾಳನು ಕ್ರಿ.ಶ· 1168–69 ರಿಂದಲೇ ರಾಜ್ಯವಾಳುತ್ತಿದ್ದುದು ಅರಸೀಕೆರೆಯ ಶಾಸನ 1 ರಿಂದ ಸ್ಪಷ್ಟವಿದೆ. ಅಂತೂ ಇಮ್ಮಡಿ ಬಲ್ಲಾಳನ ಪಟ್ಟಾಭಿಷೇಕ ತಿಥಿಯ ಬಗ್ಗೆ ಇನಿತು ಗೊಂದಲವಿದೆ[65].

ಬೇ. 17ನೆಯ ಶಾಸನವು ಕ್ರಿ.ಶ. 1174ರಲ್ಲಿ ಬಲ್ಲಾಳದೊರೆ ಹಾಗೂ ಆತನ ಮಹಾಪ್ರಧಾನ ಬೂಚಿದೇವನು ವಿಜಯನಾರಾಯಣದೇವರಿಗೆ ಕಿರುಕುಳ ತೆರಿಗೆಗಳನ್ನು ಅರ್ಪಿಸಿದುದನ್ನು ದಾಖಲಿಸಿದೆ. ಆಗ ವಿಜಯನಾರಾಯಣ ದೇವಾಲಯ ಹಾಗೂ ಕೇಶವ ದೇವಾಲಯ ಇವು ಬೇರೆ ಬೇರೆ ಆಗಿದ್ದವು. ಇದೇ 1174ರಲ್ಲಿ ಬೆಲುಪುರ (ಬೇಲೂರ) ಊರಲ್ಲಿ ಅನೇಕ ಕೂಟಗಳ ದೇವಾಲಯಗಳ ಸಂಕೀರ್ಣ ಇತ್ತೆಂದಿದೆ–ಬೇ. 108ನೆಯ ಶಾಸನ. ಬೇ. 240ನೆಯ ಶಾಸನ ಕ್ರಿ.ಶ. 1182ರಲ್ಲಿ ಹಿರಿಯ ದಂಡನಾಯಕ ಮಹಾಪ್ರಧಾನ ದ್ರೋಹಘರಟ್ಟ ಬಿರುದಿನ ಬೊಪ್ಪದೇವನು ಆಸಂದಿನಾಡ ಕೊಂಡಲಿಗ್ರಾಮವನ್ನು ತನ್ನ ಹೆಸರಿನಲ್ಲಿ 'ಚತುರ್ವೇದೀಮಂಗಲ' ಗ್ರಾಮವನ್ನಾಗಿ ಮಾಡಿ ದತ್ತಿ ಇತ್ತುದನ್ನು ದಾಖಲಿಸುತ್ತ ಇಮ್ಮಡಿ ವೀರಬಲ್ಲಾಳನು 'ಗಿರಿದುರ್ಗಮಲ್ಲ' ಹಾಗೂ 'ಶನಿವಾರಸಿದ್ಧಿ' ಎಂಬ ಬಿರುದುಗಳನ್ನು ಹೇಗೆ ಹೊಂದಿದ ಎಂಬುದನ್ನು ವಿವರಿಸಿದೆ. ಇದು ಗಮನಾರ್ಹವಾಗಿದೆ :

ಚೋಳಂ ಮುತ್ತಿರೆ ಪನ್ನೆರಳ್ವರಿಸಕಂ ಕೋಳುಪೋಯೆತ್ತಾಂ ಪೋದೆನೆಂ
ಬಾಳಾಪಂ ಬರೆ ಸಾಲ್ವದೊಂದು ಮೊಳನಂ ಮೇಲು. ವುಚ್ಚಂಗಿಯುಂ
ಪೇಳಾಸಾಧ್ಯವದಾದುದೆನ್ದು ದಿವಿಜ. ಧ್ಯರ ವಿಡುತೆಯೆ ಬ
ಲ್ಲಾ[ಳ್ತಾ]ಳ್ದಂ ಗಿರಿದುರ್ಗ್ಗಮಲ್ಲವೆಸರಂ ಬಲ್ಲಾಳ ಭೂಪಾಳಕಂ ॥

ಸನಿವಾರದನ್ದೆ ಪಾಂಡ್ಯಾ
ವನಿಪನ ಸಪ್ತಾಂಗಮೆಯ್ದೆ ಸಿದ್ಧಿಸಿದುದಱಿಂ
ಸನಿವಾರಸಿದ್ಧಿವೆಸರಂ
ಜನಪತಿ ಬಲ್ಲಾಳದೇವನೆಸೆದಿರೆ ತಳೆದಂ ॥

ಬೇ. 324 ಹಾಗೂ ಬೇ. 339 ವೀರಬಲ್ಲಾಳನು ಕಳಚುರಿವಂಶದ ಚಕ್ರವರ್ತಿಯ ಪುತ್ರ ಸಂಕಮನೊಂದಿಗೆ ಯುದ್ಧವನ್ನು ಮಾಡಿದ ಸಂಗತಿಯನ್ನು ವಿವರಿಸುತ್ತವೆ. ಬೇ. 324ರ ಪ್ರಕಾರ ವೀರಬಲ್ಲಾಳನು ದಂಡೆತ್ತಿ ಬಂದ ಕಳಚುರಿ ಸೈನ್ಯದಲ್ಲಿಯ ಮುರಾರಿ ಕೇಶವನಾರಸಿಂಗನ ಮೇಲೆ ನಡೆದು ಹದಡೆಯಕುಪ್ಪದಲ್ಲಿ ಎದುರಿಸಲು ಎರಡೂ ಸೈನ್ಯಗಳ ಮಧ್ಯೆ ಘೋರ ಯುದ್ಧ ನಡೆಯಿತು. ಬಿಜ್ಜಳ....ಚಕ್ರವರ್ತಿಯ ಭಂಡಾರದ ಚೆಂನಕಾಳಮಸಾಹಣಿ ಯುದ್ಧವನ್ನು ಎದುರಿಸಿದ. ಈತನ ಬಿರುದಾವಳಿಯು ವಿಶಿಷ್ಟ ರೀತಿಯದ್ದಾಗಿದೆ. ಶಾ.ಶ. 1111ರಲ್ಲಿ ಕಳಚುರಿ ಸಂಕಮದೇವನು ಹೊಯ್ಸಳರಾಜ್ಯದ ಮೇಲೆ ದಂಡೆತ್ತಿಬಂದು ಕಟಕವನ್ನು ಬಿಟ್ಟಿದ್ದನೆಂದು ಕೆ.ಆರ್. ಪೇಟೆಯ ಶಾಸನ–77ರಿಂದ ಈಗಾಗಲೇ ತಿಳಿದುಬಂದಿದೆ[66]. ಈ ಎರಡು ಶಾಸನಗಳು ಮುಕ್ತಾಯದ ಭಾಗದಲ್ಲಿ ಇನಿತು ತ್ರುಟಿತವಾಗಿವೆ. ಯುದ್ಧದಲ್ಲಿ ಸೋಲು ಯಾರಿಗುಂಟಾಯಿತು ಎಂಬುದು

---

65. (ಎ) ಎ.ಕ.ಸಂ. 8 (1984) ಪು 345, 411 (ಕ್ರಿ. ಶ. 1173)
(ಬಿ) ಎ.ಕ.ಸಂ–5 (ಬಿ.ಎಲ್. ರೈಸ್) ಅರಸೀಕೆರೆ—71, ಪು, 321 (ಕ್ರಿ. ಶ. 1173)
(ಸಿ) ಅದೇ ಸಂಪುಟ, ಅರಸೀಕೆರೆ—1, ಪು. 258 (ಕ್ರಿ. ಶ. 1168–69)

66. ಎ.ಕ. ಸಂ. 6 (1977) ಕೃಪೆ–77, ಪು. 61–63; ಈ ಶಾಸನದಲ್ಲಿ ಸಂವತ್ಸರದ ಹೆಸರು 'ವಿಕಾರಿ' ಎಂದು ತಪ್ಪಾಗಿ ನಮೂದುಗೊಂಡಿದೆ. ವಿಕಾರಿಯು ಶಾ.ಶ. 1101ರಲ್ಲಿ ಬಂದಿತ್ತು. ಈ ಶಾಸನದಲ್ಲಿ ಬರಹಗಾರನ ಕೈ ತಪ್ಪು ನುಸುಳಿದೆ ಎಂಬುದು ಸ್ಪಷ್ಟ.

ಸ್ಪಷ್ಟವಾಗಿಲ್ಲ. ಬೇ. 339ರ ಪ್ರಕಾರ ಸಂಕಮನ ಸೈನ್ಯವು ಹಿಂದಕ್ಕೆ ಹೋಗಿದೆಯೆನ್ನುವುದು ವಿದಿತವಾಗುತ್ತದೆ. ಇದೊಂದು ನಿರ್ಣಾಯಕ ಯುದ್ಧವಾಗಲಿಲ್ಲವೆಂದು ಕಂಡುಬರುತ್ತದೆ. ಬೇ. 324 ಕ್ರಿ.ಶ. 1189 ಸೌಮ್ಯಸಂವತ್ಸರ ಆಶ್ವಿಜ ಶು. 2ರಂದು ಬರೆಯಲ್ಪಟ್ಟಿರುವುದರಿಂದ ಕಳಚುರಿ ಭುಜಬಳ ಚಕ್ರವರ್ತಿ ಸಂಕಮನು ಕ್ರಿ.ಶ. 1189ರವರೆಗೂ ಬದುಕಿದ್ದನೆಂಬುದು ನಿಶ್ಚಿತ.

ಬೇ. 207 ಮತ್ತು ಬೇ. 480 ವೀರಬಲ್ಲಾಳನು ಕುರುಗೋಡುಕೋಟೆಯನ್ನು 'ಮಹಾಲಗ್ಗೆ' ಹಾಕಿ ಮುತ್ತಿತಿಗೆದುಕೊಂಡ ಸಂಗತಿಯನ್ನು ದಾಖಲಿಸಿವೆ. ಬೇ. 459 ವೀರಬಲ್ಲಾಳನ ಶಾಸನಗಳಲ್ಲಿ ಒಂದು ಮುಖ್ಯ ಶಾಸನ. ಏಕೆಂದರೆ ಅದು ಬಲ್ಲಾಳನಿಗೆ 'ರಾಜರಾಜ' ಎಂಬ ಹೆಸರಿದ್ದುದನ್ನು ಮತ್ತು ಆತನ ತಂದೆ ನರಸಿಂಹನಿಗೆ 'ವಿಕ್ರಮ ಮಹಾರಾಜ' ಎಂಬ ಬಿರುದಿದ್ದುದನ್ನೂ ದಾಖಲಿಸಿದೆ. ತಮಿಳುನಾಡನ್ನು ಗೆದ್ದು ಅಲ್ಲಿ ತನ್ನ ರಾಜಧಾನಿಯನ್ನು ನಿರ್ಮಿಸಿದ ಬಲ್ಲಾಳ ಅದಕ್ಕೆ 'ವಿಕ್ರಮಪುರ' ಎಂದು ಹೆಸರಿಟ್ಟಿದ್ದಾನೆ. ಪಂಡಿತನಹಳ್ಳಿಯ ಈ ಶಾಸನದಿಂದ ತಮಿಳುನಾಡಿನ ರಾಜಧಾನಿಗೆ ಬಲ್ಲಾಳನು ತನ್ನ ತಂದೆಯ ಹೆಸರನ್ನೇ ಆ ಗ್ರಾಮಕ್ಕೆ ಇಟ್ಟಿದ್ದಾನೆಂದು ಈಗ ಸ್ಪಷ್ಟವಾಗಿದೆ. ಈ ಎರಡು ಹೆಸರುಗಳಿದ್ದುವೆಂಬುದಕ್ಕೆ ಕೆಳಗಿನ ಪದ್ಯ ಸಾಕ್ಷಿಯಾಗಿದೆ:

ತನಗೇಕೀ ಬಱು ರಾಜರಾಜವೆಸರೆಂದೆಂದುತ್ತರಾಶೋನು
...ದಾಕ್ಷಪ...ನೆಲ್ ವಿಕ್ರಮಮಹಾರಾಜ ರಾಜಾಂಕನಾ
ಧನದಂ ಭೀತಿಯಿನ್ದೀಶನಲ್ಲಿ ಕೆಳೆಗೊಂಡಿರ್ದ್ದಂ ಸುಖಂ ಮಿಕ್ಕರೊ
ಳ್ಮನದಿ...ಳುವೆಯ್ದಿರ್ಪದಟರಾರ್ಬ್ಬಲ್ಲಾಳ ಭೂಪಾಳನಂ॥

ಬೇ. 163ನೆಯ ಶಾಸನವನ್ನು ಕ್ರಿ.ಶ. 1198ರಲ್ಲಿ ಬರೆಯಲ್ಪಟ್ಟದ್ದು ಆಗ ಬಲ್ಲಾಳದೊರೆ ಕುಕ್ಕನೂರ ಕೊಪ್ಪದಲ್ಲಿದ್ದುದಾಗಿ ಬರೆದಿದೆ. ಪ್ರಾಯಃ ಅಲ್ಲಿ ಆತ ಬೀಡುಬಿಟ್ಟು ಅದನ್ನು ಪಯಣದ ಕಾಲದಲ್ಲಿನ ನೆಲೆವೀಡನ್ನಾಗಿಸಿಕೊಂಡಿರಬಹುದು. ಕುಕ್ಕನೂರನ್ನು ರಾಜಧಾನಿಯೆಂದು ಹೇಳಿರುವುದೂ ಗಮನಿಸಬೇಕಾದ ಸಂಗತಿ.

ಬೇ. 168 ಬೇಲೂರ ದೇವಸ್ಥಾನವನ್ನು ಕುರಿತ ತಾಮ್ರಶಾಸನ. ಇದನ್ನು ಇಮ್ಮಡಿಬಲ್ಲಾಳನ ಕಾಲದಲ್ಲಿ ಬರೆಯಲ್ಪಟ್ಟದ್ದು ಬಲ್ಲಾಳದೇವನು ಆ ವಿಜಯನಾರಾಯಣ ದೇವಾಲಯದಲ್ಲಿ ಕಟ್ಟಿಸಿದ ಜಾಳಂದ್ರ, ದೃಢಕವಾಟ, ದ್ವಾರ ಶಾಖಾಳಿ, ಬಾಣಸು, ಕೊಟ್ಟಾರ, ಪ್ರಾಕಾರಗೋಡೆ ಹಾಗೂ ವಾಸುದೇವತೀರ್ಥ ಇತ್ಯಾದಿಗಳನ್ನು ದಾಖಲಿಸಿದೆ. ವಿಷ್ಣುವರ್ಧನನು ಮೂರು ದೇವಾಲಯಗಳನ್ನು ಕಟ್ಟಿಸಿ ದತ್ತಿಬಿಟ್ಟ ಸಂಗತಿಯನ್ನೂ ಬಲ್ಲಾಳನ (II)ವರೆಗಿನ ವಂಶಾವಳಿಯ ವಿವರವನ್ನೂ ಇದರಲ್ಲಿ ನಮೂದಿಸಿದೆ.

ಬೇ. 560, ಬೆಳವಾಡಿಯ ಶಾಸನ. ಇದನ್ನು ಕ್ರಿ ಶ. 1207ರಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಬಲ್ಲಾಳನವರೆಗಿನ ವಂಶಾವಳಿಯನ್ನು ವಿವರಿಸುತ್ತ ಹೊಯ್ಸಳರ ಪ್ರಥಮ ರಾಜಧಾನಿ 'ಶಶಕಪುರ' ಎಂಬುದು ಹೇಗೆ ನಿರ್ಮಾಣವಾಯಿತೆಂಬುದರ ಬಗೆಗಿನ ಐತಿಹ್ಯವನ್ನು ನಿರೂಪಿಸಿದೆ. ಸಳನೆಂಬ ನೃಪನು ಒಮ್ಮೆ ಸಹ್ಯಾಚಳದಲ್ಲಿಯ ಸಾನುಪ್ರದೇಶದಲ್ಲಿ ಬೇಟೆಯಾಡುವಲ್ಲಿ ಮೊಲವೊಂದು ಹುಲಿಯನ್ನು ಅಟ್ಟಿಸಿಕೊಂಡು ಹೋಯಿತು. ಅದನ್ನು ಕಂಡು ಆತ ಈ ಸ್ಥಳವು ವೀರಕ್ಷೇತ್ರವೆಂದು ಬಗೆದು ಮುಂದೆ ನಡೆಯುತ್ತಿರಲು ದಿವ್ಯ ಋಷಿಯೊಬ್ಬನು ತನ್ನನ್ನು ಹುಲಿಯೊಂದು ಹಿಡಿಯಲು ಬರುತ್ತಿರುವುದನ್ನು ಕಂಡು 'ಪೊಯ್ಸಳ' ಎಂದು ಕೂಗಿಕೊಂಡನು; ಸಳನು ತತ್‌ಕ್ಷಣ ಆ ಹುಲಿಯನ್ನು ಕೊಂದನು. ಅಂದಿನಿಂದ ಸಳನೃಪನ ವಂಶದ ಹೆಸರು 'ಪೊಯ್ಸಳ' ಎಂದೂ ಆ ಹುಲಿಯೇ ವಿಜಯ ಲಾಂಛನವಾಯಿತೆಂದೂ ಮತ್ತು ಆ ಸ್ಥಳವೇ 'ಶಶಕಪುರ' ಎಂಬ ಹೆಸರನ್ನು ಪಡೆಯಿತೆಂದು ವಿವರಿಸಿದೆ. ಮುಂದೆ ಈ ಕಥೆ ಬೇರೆಬೇರೆ ರೂಪಾಂತರಗಳನ್ನು ಪಡೆದಿದೆ. 'ಶಶಕಪುರ' ಕನ್ನಡದಲ್ಲಿ ಸೊಸವೂರು ಎಂದು ರೂಪ ತಳೆದದು ಕಂಡುಬರುತ್ತದೆ. ಶಶ>ಸೆಸ>ಸೊಸ ಎಂಬ ರೂಪತಳೆದಿದೆ. 'ಸೆ' ಹಾಗೂ 'ಸೊ' ಈ ಅಕ್ಷರಗಳಲ್ಲಿಯ ರೂಪಸಾದೃಶ್ಯತೆಯಿಂದ 'ಸೆಸವೂರು' ಓದುಗರ ಕೈಯಲ್ಲಿ 'ಸೊಸವೂರು' ಆಗಿ ಮಾರ್ಪಟ್ಟಿತು, ಇಲ್ಲವೇ ಬರಹಗಾರರ ಕೈ ಕೇಡಿನಿಂದಲೂ ಹೀಗಾಗಿರಲು ಸಾಧ್ಯ. 'ಶಶ' ಶಬ್ದದ ಉಚ್ಚಾರ 'ಸೆಸ' ಆಗಿ 'ಸೆಸವೂರು' ಅರ್ಥಾತ್ ಶಶಕಪುರ ಬರವಣಿಗೆಯಲ್ಲಿ, ಉಚ್ಚಾರಣೆಯಲ್ಲಿ, ಶ್ರೀ ಸಾಮಾನ್ಯರಲ್ಲಿ ಹೊಸರೂಪವನ್ನು ತಳೆಯಿತು: ಶಶಕಪುರ>ಶಶಪುರ>ಸೆಸವುರ>ಸೊಸವುರ. ಸೆಸವೂರು>ಸೊಸವೂರು ಹೀಗೆ ಲಿಪಿಶಾಸ್ತ್ರದಲ್ಲಿ ಆಗುವ ಬದಲಾವಣೆಗಳನ್ನು ಇನಿತು ಅಧ್ಯಯನದಲ್ಲಿ ಓದುಗರು ಗಮನಿಸಬೇಕು. ಈ ಊರು ಉದ್ಭವಿಸಿದ್ದು ಸಳನೃಪನ ಕಾಲದಲ್ಲಿ ಎಂಬುದು ಬಹು ಮುಖ್ಯ ಅಂಶ. ಸೊಸವುರ ಉಲ್ಲೇಖ ಕ್ರಿ.ಶ. 10ನೆಯ ಶತಮಾನದಲ್ಲಿ ಬಂದಿದೆ—ಬೇ. 540.

ಈ ಶಾಸನದಲ್ಲಿ ಇನ್ನೊಂದು ವಿಷಯವೂ ಗಮನಾರ್ಹವಾಗಿದೆ. ಅದೆಂದರೆ ವಿಷ್ಣುವರ್ಧನನ ತಮ್ಮ ಉದಯಾದಿತ್ಯನ ಹೆಸರನ್ನು 'ವಿನಯಾದಿತ್ಯ' ಎಂದು ಹೇಳಿರುವುದು. 'ಉದಯಾದಿತ್ಯ' ಮತ್ತು 'ವಿನಯಾದಿತ್ಯ' ಒಂದಕ್ಕೆ ಇನ್ನೊಂದು ವ್ಯತ್ಯಯವಾಗಿವೆ; ಹೀಗೆ ಇನ್ನೂ ಒಂದೆರಡು ಶಾಸನಗಳಲ್ಲಿ ವ್ಯತ್ಯಯವಾದುದು ಕಂಡುಬಂದಿದೆ.[67]

ಬೇ. 300 ಹಾಗೂ 372ನೆಯ ಶಾಸನಗಳು ವೀರಬಲ್ಲಾಳನ ಮಂತ್ರಿ ದಂಡಾಧಿಪ ಕುವರಲಕ್ಷ್ಮ, ಅಥವಾ ಕುವರ ಲಕ್ಷ್ಮೀಧರ ಎಂದು ಪ್ರಸಿದ್ಧನಾದ ವ್ಯಕ್ತಿಯ ಗುಣಗಾನವನ್ನು ಮಾಡುತ್ತವೆ. ವಿಶೇಷತಃ ಬೇ. 300 ಕುವರಲಕ್ಷ್ಮ ಹಾಗೂ ಆತನ ಸತಿ ಸುಗ್ಗಲದೇವಿಯ ವರ್ಣನೆಗೆ ಮೀಸಲಾಗಿದೆ. ಕುವರಲಕ್ಷ್ಮ ಅರಮನೆಯಲ್ಲಿಯೇ ಬಾಲ್ಯತನದಿಂದಲೂ ಬೆಳೆದ. ವೀರಬಲ್ಲಾಳನೆ ತನಗೆ ಗುರು, ದೈವ ಮತ್ತು ಒಡೆಯ ಎಂದು ಕುವರಲಕ್ಷ್ಮನು ನಂಬಿದ್ದ. ಆ ಪತಿಹಿತ ವ್ಯಾಪಾರವನ್ನು ತೋರಿಸುವುದಕ್ಕೆ ಕುವರಲಕ್ಷ್ಮ ತನ್ನ ಸತಿವೆರಸಿ ಗರುಡನನ್ನು ಕೂಡಿಕೊಂಡು ಪ್ರಾಣಾರ್ಪಣವನ್ನು ಮಾಡಿದ. ಈ ಶಾಸನಸ್ತಂಭ, ಕುವರಲಕ್ಷ್ಮನು ಬಲಿಯಾದ ಹಲವು ಅವಸ್ಥೆಗಳ ಚಿತ್ರಗಳನ್ನು ಹೊತ್ತು ನಿಂತಿದೆ. ವೀರಮರಣ ಹಾಗೂ ಬಲಿದಾನ ಸಂಬಂಧದಲ್ಲಿ ಇದೊಂದು ವಿಶಿಷ್ಟ ಶಾಸನ.

ಕ್ರಿ.ಶ. 1217ರಲ್ಲಿ ಬರೆಯಲಾಗಿರುವ ಇಬ್ಬೀಡಿನ ಶಾಸನ ಬೇ. 477 ಇಮ್ಮಡಿ ವೀರಬಲ್ಲಾಳನಿಗೆ 'ವೈಷ್ಣವ ಚಕ್ರವರ್ತಿ' ಎಂಬ ಬಿರುದಿದ್ದುದನ್ನು ತಿಳಿಸಿದೆಯಲ್ಲದೆ ಆತನಿಗೊಬ್ಬ ಪೆರುಮಾಳು ಮಹಾಮಂತ್ರಿ ಎಂಬ ಮಂತ್ರಿ ಇದ್ದುದನ್ನೂ ದಾಖಲಿಸಿದೆ. ಈ ಪೆರುಮಾಳುದೇವ ಈ ಲೋಕದ ಬೃಹಸ್ಪತಿಯೆಂಬಂತೆ ಇದ್ದನಂತೆ.

ಬೇ. 280ರ ಇಮ್ಮಡಿ ವೀರಬಲ್ಲಾಳದೇವನಿಗೆ 'ಅಂಮನಗಂಧವಾರಣ' 'ಮಾನಕನಕಾಚಳ' 'ಪ್ರತಾಪಶಾನ್ತರದೇವ ಪದಭಕ್ತ' 'ಪಾತಾಳಗರುಡ' 'ಪರನಾರೀಸಹೋದರ' 'ಪರಿವಾರಕಂಭ' 'ಶರಣಾಗತವಜ್ರಪಂಜ್ರ' ಮುಂತಾಗಿ ಹಲವು ಬಿರುದುಗಳನ್ನು ಧರಿಸಿದ ಅಮ್ಮಣವೆಗ್ಗಡೆ ಎಂಬ ಮಹಾಪ್ರಧಾನನಿದ್ದುದನ್ನು ದಾಖಲಿಸಿದೆ ಮತ್ತು 'ಬಲ್ಲಾಳನರಾಜ್ಯಂ ರಾಮರಾಜ್ಯಂ' ಎಂದು ಪ್ರಸಿದ್ಧವಾದುದನ್ನು ತಿಳಿಸಿದೆ. ಈ ಅಮ್ಮಣವೆಗ್ಗಡೆ ಬಲ್ಲಾಳನ ಅನಂತರ ಆತನ ಪುತ್ರ ಇಮ್ಮಡಿ ನರಸಿಂಹನಿಗೂ ಮಹಾಪ್ರಧಾನನಾಗಿದ್ದ ಸಂಗತಿ ಬೇ. 288 ರಿಂದ ವಿದಿತವಾಗುತ್ತದೆ.

ಬೇ. 424ನೆಯ ಸಂಖ್ಯೆಯ ಕಟ್ಟೇಸೋಮನಹಳ್ಳಿಯ ವೀರಗಲ್ಲಶಾಸನವು ಬಲ್ಲಾಳದೊರೆ ಹಾನೆಯಕೋಟೆ ಗೆದ್ದ ಸಂಗತಿಯನ್ನು ದಾಖಲಿಸಿದೆ. ಹಾನೆಯಕೋಟೆಯನ್ನು ಇಮ್ಮಡಿ ಬಲ್ಲಾಳನು ಗೆದ್ದನೆಂಬ ಸಂಗತಿ ಚಿತ್ರದುರ್ಗಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ಸಿದ್ಧಾಪುರದ ಒಂದು ಶಾಸನದಿಂದಲೂ ತಿಳಿದು ಬರುವುದರಿಂದ ಈ ಶಾಸನವನ್ನು ಇಮ್ಮಡಿ ಬಲ್ಲಾಳನ ಕಾಲದ್ದೆಂದು ಹೇಳಬಹುದು. ವೀರಬಲ್ಲಾಳನ ಪಕ್ಷದ ರಹಲ್ಲನಾಯಕ ಹಾಗೂ ಆತನ ಸೋದರ ಮುದ್ದನಾಯಕ ತಮ್ಮ ಒಡೆಯನ ಆಜ್ಞೆಯ ಮೇರೆಗೆ ಭೋಗಮಹೀವಲ್ಲಭನನ್ನು ಅವನ ಸೈನ್ಯವನ್ನು ತತ್ತಱಿದಱಿದರು. ಇವರ ಯುದ್ಧದ ವರ್ಣನೆಯು ಶಾಸನದಲ್ಲಿ ವಿವರವಾಗಿಯೂ ಸುಂದರವಾಗಿಯೂ ಬಂದಿದೆ.

'ಇಮ್ಮಡಿ ವೀರಬಲ್ಲಾಳ ಹಾಗೂ ಅನಂತರದಲ್ಲಿ ಬಂದ ಆತನ ವಂಶಜರು ತಮ್ಮ ಬಿರುದಾವಳಿಗಳಲ್ಲಿ 'ನಿಶ್ಶಂಕ ಪ್ರತಾಪಚಕ್ರವರ್ತಿ' 'ನಿಶ್ಶಂಕ ಪ್ರತಾಪಹೊಯ್ಸಳ' 'ನಿಶ್ಶಂಕ ಹೊಯ್ಸಳ' ಹಾಗೂ 'ನಿಶ್ಶಂಕಭುಜಬಳಚಕ್ರವರ್ತಿ' ಮುಂತಾಗಿ ಒಂದು ಬಿರುದನ್ನು ಧರಿಸಿರುವುದು ಕಂಡುಬರುತ್ತದೆ. ಇವುಗಳಲ್ಲಿ ಕಿಂಚಿತ್ ಭಿನ್ನತೆ ಇದ್ದರೂ 'ನಿಶ್ಶಂಕ' ಎಂಬುದು ಒಂದು ಮುಖ್ಯ ಘಟಕವಾಗಿದೆ. 'ನಿಶ್ಶಂಕ' ಎಂದರೆ ಏನು ಎಂಬುದನ್ನು ಇದೀಗ ವಿಚಾರಿಸಬೇಕಾದ ಸಂಗತಿ. ವಿಷ್ಣುವರ್ಧನ ತಮಿಳುನಾಡಿನಲ್ಲಿ ಕಂಚಿಯನ್ನು ಗೆದ್ದು 'ಕಂಚಿಗೊಂಡ ವಿಕ್ರಮಗಂಗ' ಎಂಬ ಬಿರುದನ್ನು ಧರಿಸಿದ. ಇಮ್ಮಡಿ ಬಲ್ಲಾಳ ತಮಿಳುನಾಡಿನಲ್ಲಿ ವಿಕ್ರಮಪುರ ಎಂಬ ರಾಜಧಾನಿಯನ್ನೇ ಕಟ್ಟಿದ. ಅನಂತರ ಆತ ಶ್ರೀಲಂಕೆಯ ದೊರೆ 'ನಿಶ್ಶಂಕಮಲ್ಲ' ಎಂಬವನನ್ನು ಎದುರಿಸಿ ಆತನ ಮೇಲೆ ತನ್ನ ಪ್ರತಾಪವನ್ನು ಬೀರಿದ. ಮತ್ತೆ ಈ ನಿಶ್ಶಂಕಮಲ್ಲನ ಶಾಸನದಲ್ಲಿ ಆತ ಕರ್ನಾಟಕವನ್ನು ಗೆದ್ದುದಾಗಿಯೂ ಬರೆದಿದೆ.[68] ಈ ನಿಶ್ಶಂಕಮಲ್ಲ ಮತ್ತು ವೀರಬಲ್ಲಾಳ ಇಬ್ಬರೂ ಅತ್ಯಂತ ಸಮಕಾಲೀನರಾದುದರಿಂದ, ಆತನು ನೆಲ್ಲೂರವರೆಗೆ ದಂಡೆತ್ತಿ ಬಂದುದು ಶಾಸನಾದಿಗಳಿಂದ ತಿಳಿದುಬಂದಿರುವುದರಿಂದ, ಈ ಇರ್ವರ ಸೈನ್ಯಗಳ ಮಧ್ಯೆ ಕದನ ಜರುಗಿದ್ದರೆ ಆಶ್ಚರ್ಯಪಡುವಂತಹ ಸಂಗತಿಯೇನಿಲ್ಲ. ನಿಶ್ಶಂಕಮಲ್ಲ ತನ್ನ ಗೆಲುವಿನ ಸಂಬಂಧದಲ್ಲಿ ಕರ್ನಾಟಕದಲ್ಲಾಗಲಿ ಭಾರತದ ಇತರ ಕಡೆಗಳಲ್ಲಾಗಲಿ ಏನನ್ನೂ ನೆನಪಿಗಾಗಿ ಸ್ಥಾಪಿಸಿಲ್ಲ. ಹೊಯ್ಸಳರು ಅವನ ಕಾಲದಲ್ಲೂ ಅನಂತರದಲ್ಲೂ 'ದಕ್ಷಿಣ ಚಕ್ರವರ್ತಿ'ಗಳಾಗಿ ಮೆರೆದುದು ಖಚಿತ ಸಂಗತಿಯಾಗಿದೆ. ಅರ್ಥಾತ್ ಹೊಯ್ಸಳರ ಪ್ರತಾಪ ಅಧಿಕವಾಗಿದ್ದುದು ಸ್ಪಷ್ಟವಿದೆ. ಅಂತೆಯೇ ಇಮ್ಮಡಿ ವೀರಬಲ್ಲಾಳನ ಬಿರುದಿನಲ್ಲಿಯ 'ನಿಶ್ಶಂಕಪ್ರತಾಪ' ಎಂಬುದು ಆತ ನಿಶ್ಶಂಕನನ್ನು

---

[67] ಎ.ಕ.ಸಂ. 6 (1977) ಕೃಪೇ-60, 98 ಪು. 43 ಮತ್ತು 80

[68] Epigraphia Zeylanka, Vol. II, p. 112

ಹಿಮ್ಮೆಟ್ಟಿಸಿದ ವಿಷಯವನ್ನು ತಿಳಿಸುತ್ತದೆಯೆಂದು ಈಗ ನಿರೂಪಿಸಬಹುದು. ಶ್ರೀಲಂಕೆಯ ನಿಶ್ಯಂಕಮಲ್ಲನು ಕ್ರಿ.ಶ. 1196ರ ವರೆಗೆ ರಾಜ್ಯವಾಳಿದ ಕಾರಣ ಈ ಬಲ್ಲಾಳನನ್ನು ತತ್ಪೂರ್ವದಲ್ಲಿ ಆತ ಎದುರಿಸಿದ. ಬಲ್ಲಾಳನು ಕ್ರಿ.ಶ. 1168ರಿಂದಲೇ ರಾಜ್ಯವಾಳಲು ಆರಂಭಿಸಿದುದು ಸ್ಪಷ್ಟವಿರುವುದರಿಂದ[69] ಈ ಕಾಲದಲ್ಲಿ, ಈ ಇಬ್ಬರ ಮಧ್ಯದಲ್ಲಿ ಕದನ ಜರುಗಿದೆ.

ಬೇ. 156 ಮುಂತಾಗಿ ಇಮ್ಮಡಿ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದಂತೆ 17 ಶಾಸನಗಳು ಈ ಸಂಪುಟದಲ್ಲಿವೆ. ಬೇ.156 ಈ ನರಸಿಂಹನು ಕ್ರಿ.ಶ. 1220ರ ಏಪ್ರಿಲ್ 3ರಂದು ಪ್ರತಾಪ ಚಕ್ರವರ್ತಿ ಆಗಿದ್ದನೆಂದು ದಾಖಲಿಸಿದೆ. ದಿವಂಗತ ರೈಸ್ ಅವರು ಈ ನರಸಿಂಹ ಕ್ರಿ.ಶ. 1220 ಏಪ್ರಿಲ್ 18ರಂದು ಪಟ್ಟಾಭಿಷೇಕ ಮಾಡಿಸಿಕೊಂಡನೆಂದು ಬರೆದಿದ್ದಾರೆ[70]. ಇದಕ್ಕೆ ಆಧಾರ ಚೆನ್ನರಾಯಪಟ್ಟಣದ ದಿಂಡಗೂರ ತಾಮ್ರಶಾಸನ[71]. ರೈಸರು ಈ ಶಾಸನವನ್ನು ಸಂಪಾದನ ಮಾಡಿದ ಕಾಲಕ್ಕೆ ಶ್ರೀಯುತರಿಗೆ ಬೇ. 156 (ಬೇ. 85) ಶಾಸನದ ಪೂರ್ಣಪಾಠ ದೊರೆತಿದ್ದಿಲ್ಲ. ಆದುದರಿಂದ ಶ್ರೀಯುತರಿಗೆ ಈ ಶಾಸನ ಹಾಗೂ ದಿಂಡಗೂರ ಶಾಸನ ಎರಡನ್ನೂ ತೌಲನ ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಆಗಿಲ್ಲವೆಂಬುದು ಸ್ಪಷ್ಟವಿದೆ. ಏಕೆಂದರೆ ಎ.ಕ.ಸಂ. XVರಲ್ಲಿ ಇದನ್ನು ಪುನಃ ಪರಿಷ್ಕರಿಸಿದ್ದಾರೆ. ಬೇ. 256, ಈ ನರಸಿಂಹ ಪಟ್ಟಕ್ಕೆ ಕುಳಿತ ಎರಡನೆಯ ವರ್ಷದಲ್ಲಿ ಬರೆಯಲಾಗಿದೆಯೆಂದು ತಿಳಿಸಿ ನರಸಿಂಹನು 1220ರಲ್ಲಿ ಬಂದ ವಿಕ್ರಮ ಸಂವತ್ಸರದ ಚೈತ್ರ ತಿಂಗಳದ ಎಡಬಲದಲ್ಲಿ ಪಟ್ಟಕ್ಕೆ ಕುಳಿತಿದ್ದಾನೆ ಎಂಬುದನ್ನು ಖಚಿತಗೊಳಿಸುತ್ತದೆ. ಬೇ. 332ನ್ನು ಇಮ್ಮಡಿ ವೀರನರಸಿಂಹನು ಪಟ್ಟಕ್ಕೆ ಬಂದ ಹೊಸದರಲ್ಲಿ ಬರೆಯಲಾಗಿದೆ. ಇದರಲ್ಲಿ 'ತೈಲಪನತಲೆಗೊಂಡಗಂಡ' ಎಂಬ ಬಿರುದನ್ನು ಈ ನರಸಿಂಹನಿಗೆ ಆರೋಪಿಸಲಾಗಿದೆ. ಈ ನರಸಿಂಹನು ಯಾವ ತೈಲಪನನ್ನು ಕೊಂದ? ನಮಗೆ ಈಗಾಗಲೇ ತಿಳಿದುಬಂದಂತೆ ಒಂದನೆಯ ನರಸಿಂಹನೇ ಚಾಳುಕ್ಯ ಚಕ್ರವರ್ತಿ ತೈಲಪನನ್ನು ಕೊಂದವನು—ಅವನ ತಲೆ ಕತ್ತರಿಸಿದವನು. ಈ ಬಿರುದೂ ಇತರ ಬಿರುದುಗಳೊಂದಿಗೆ ನರಸಿಂಹನಿಗೆ ಪಾರಂಪರಿಕವಾಗಿ ಬಂದಿದೆ. ಒಂದನೆಯ ನರಸಿಂಹನು ತೈಲಪನನ್ನು ಹಿಡಿದು ತಲೆ ಕತ್ತರಿಸಿದನೆಂಬುದಕ್ಕೆ ಇದು ಇನ್ನೊಂದು ಸಾಕ್ಷಿಯಾಗಿದೆ. ಶಾಸನದ ತೇದಿಯು ಏಪ್ರಿಲ್ 19, 1220 ಎಂಬುದೂ ಅತ್ಯಂತ ಗಮನಾರ್ಹವಾಗಿದೆ.

ಬೇ. 309 ಹೊಯ್ಸಳ ವಂಶದ ವರ್ಣನೆಯನ್ನು ಸಂಸ್ಕೃತದಲ್ಲಿ ಆರಂಭವೆಸಗಿ ಒಂದು ಪದ್ಯವಾಗುತ್ತಲೆ ಕನ್ನಡ ಭಾಷೆಗೆ ಹೊರಳುತ್ತದೆ. ಈ ಶಾಸನ ಇಮ್ಮಡಿನರಸಿಂಹನಿಗೆ 'ಅಭಿನವ ಕೇತಲದೇವಿ' ಎಂಬ ಕಿಱಿಯರಸಿ ಇದ್ದಳೆಂದು ತಿಳಿಸುತ್ತದೆ. ಬೇ. 352 ಇಮ್ಮಡಿ ನರಸಿಂಹ 'ಮಗರ' ರಾಜಮನೆತನದ ಮೇಲೆ ದಂಡೆತ್ತಿ ಹೋದುದನ್ನು ದಾಖಲಿಸಿದೆ. 'ಮಗರರಾಜ್ಯ ನಿರ್ಮೂಲನ' ಎಂಬ ಬಿರುದು ಈ ಹೊಯ್ಸಳ ಮನೆತನಕ್ಕೆ ಸು. ಕ್ರಿ.ಶ. 1224ರ ಅನಂತರ ಎಂಬುದು ಇದರಿಂದ ನಮಗೆ ವಿದಿತವಾಗುತ್ತದೆ. ಈ ಘಟನೆ ಸು. ಕ್ರಿ.ಶ. 1227ರ ಜುಲೈ 17ಕ್ಕೂ ಮುಂಚೆಯೆ ಮುಗಿದುಹೋಗಿದೆ ಎಂಬುದು ಬೇ. 420ರಲ್ಲಿ ಬಂದಿರುವ ವರ್ಣನೆಯಿಂದ ತಿಳಿದುಬರುತ್ತದೆ; ಆ ಪದ್ಯವಿಂತಿದೆ :

> ಪಾಳಿಸಿ ಚೋಳನನು ಮಗರನಾನೆಯನರ್ತ್ಥಮನೆಯ್ದಕೊಂಡು ನಿ
> ರ್ಮ್ಮೂಳಿಸಿ ಪಾಂಡ್ಯಪಲ್ಲವಮಹೀಶರನಾಳುವೆಸಗೆಯಿಸಿ ಕೂಡೆ ಬಾಯಿ
> ಕೇಳಿಸಿ ಪೂರ್ವದಿಗ್ವಳೆಯಮಂ ಕಡಲಾಂಕೆಯದಾಗಿ ಸೌರ್ಯ್ಯದಿಂ
> ದೇಳಿಸಿದಂ ನ್ರಿಸಿಂಹನ್ರಿಪನಾಜಿಯೊಳಾದಿನ್ರಿಪಾಳಜಾಳವನು ॥

ಬೇ. 505, ಹಾಲುತೊಱೆಗ್ರಾಮದಲ್ಲಿ ಮಹಾಜನಗಳು ಬಿಟ್ಟ ಕೊಡಿಗೆಯನ್ನು ದಾಖಲಿಸುತ್ತ ಇಮ್ಮಡಿ ನರಸಿಂಹನು ಹೊರನೂರ ಪಟ್ಟಣದಿಂದ ರಾಜ್ಯವಾಳುತ್ತಿದ್ದುದನ್ನೂ ದಾಖಲಿಸಿದೆ. ಹೊರನೂರಪಟ್ಟಣ ಕೆಲಕಾಲ ರಾಜಧಾನಿ ಆಗಿತ್ತೆಂಬುದು ಒಂದು ಮುಖ್ಯ ಸಂಗತಿಯಾದರೆ ತಮ್ಮ ಒಂದು ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡುತ್ತೇವೆಯೆಂದು ರಾಜಾಜ್ಞೆಯನ್ನು ಪಡೆದ ಹಾಲ್ತೊಱೆಯ ಜನ, ಮಹಾಜನರನ್ನು ಕರೆದುಕೊಂಡು ಬನ್ನಿ ಎಂದಾಗ, ಹಿಂದೇಟು ಹಾಕುತ್ತಾರೆ! ಅಗ್ರಹಾರವನ್ನು ಸ್ಥಾಪಿಸುವುದು ಎಂದರೆ ಆ ಗ್ರಾಮದ ಆದಾಯವೆಲ್ಲವನ್ನು ಸರ್ವನಮಸ್ಯವಾಗಿ ಬಿಟ್ಟುಬಿಡುವುದು; ಅರ್ಥಾತ್ ಕೊಡಬೇಕಾದ ಎಲ್ಲ ತೆರಿಗೆಗಳನ್ನು ರಾಜಾಜ್ಞೆಯ ಮೂಲಕ ಮನ್ನಾಮಾಡಲಾಗುತ್ತಿತ್ತು. ಜನರ ನಡತೆ ತುಂಬ ಅಚ್ಚರಿಯದಾಗಿದೆ.

ಇಮ್ಮಡಿನರಸಿಂಹನ ಅನಂತರ ಪಟ್ಟಕ್ಕೆ ಬಂದ ಸೋಮೇಶ್ವರನ ಆಳ್ವಿಕೆಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ 11 ಶಾಸನಗಳಿವೆ. ಇವುಗಳಲ್ಲಿ ಹೆಚ್ಚು ವೀರಗಲ್ಲ ಶಾಸನಗಳೇ ಆಗಿವೆ. ಸೋಮೇಶ್ವರನು ಚೋಳನಾಡಿನ ರಾಜಕೀಯದಲ್ಲಿ ವಿಶೇಷ ಪಾತ್ರವಹಿಸಿ 'ಚೋಳರಾಜ್ಯ ಪ್ರತಿಷ್ಠಾಚಾರ್ಯ' ಎಂಬ ಬಿರುದನ್ನು ಧರಿಸಿದುದು ಇವುಗಳಿಂದ ತಿಳಿದುಬಂದಿದೆ

---

69. ಎ. ಕ. ಸಂ. 5 (ಬಿ. ಎಲ್. ರೈಸ್) ಚೆನ್ನರಾಯಪಟ್ಣ–191, ಪು. 472
70. ಅದೇ, ಮುನ್ನುಡಿ, ಪು. xxiii
71. ಅದೇ, ಚೆನ್ನರಾಯಪಟ್ಟಣ ಶಾಸನ–172, ಪು. 461

ಯಲ್ಲದೆ ಕೆಲಕಾಲ ಈತನು ಚೋಳರಾಜ್ಯದಲ್ಲಿಯ ' ಕಣ್ಣದೂರಪಟ್ಟಣ ' ಎಂಬ ಊರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನೆಲೆನಿಂತಿದ್ದ ಎಂಬುದೂ ವಿದಿತವಾಗಿದೆ. ವಿಷ್ಣುವರ್ಧನ ಚೋಳರ ರಾಜಧಾನಿಯಾದ ಕಂಚಿಯನ್ನು ಗೆದ್ದು ' ಕಂಚಿಗೊಂಡ ವಿಕ್ರಮಗಂಗ ' ಎನ್ನಿಸಿಕೊಂಡ; ಬಲ್ಲಾಳನು (II) ಚೋಳನಾಡಿನಲ್ಲಿ ಚೋಳರನ್ನು ಗೆದ್ದು ' ವಿಕ್ರಮಪುರ ' ಎಂಬ ರಾಜಧಾನಿಯನ್ನು ಸ್ಥಾಪಿಸಿದನು. ಅದೇ ವಂಶದ ಕುಡಿ ಸೋಮೇಶ್ವರ, ಆ ಚೋಳರಾಜ್ಯವನ್ನು ಅದು ಆಪತ್ತಿನಲ್ಲಿದ್ದಾಗ ರಕ್ಷಿಸಿದ; ಆ ವಂಶದ ಅರಸರಿಗೇ ಪಟ್ಟಗಟ್ಟಿ ' ಚೋಳರಾಜ್ಯ ಪ್ರತಿಷ್ಠಾಚಾರ್ಯ ' ಎಂಬ ಬಿರುದನ್ನು ಧರಿಸಿದ. ಈ ಎರಡು ವಂಶಗಳಲ್ಲಿ ಶರೀರ ಸಂಬಂಧಗಳು ನಡದುದೇ ಇದಕ್ಕೆ ಕಾರಣ.

ಮುಮ್ಮಡಿನರಸಿಂಹನಿಗೆ ಸಂಬಂಧಿಸಿದಂತೆ ಪ್ರಸ್ತುತ ಸಂಪುಟದಲ್ಲಿ ಸುಮಾರು 36 ಶಾಸನಗಳಿವೆ. ನರಸಿಂಹನು ಕುಮಾರನಾಗಿದ್ದಾಗಲೇ ದಾನದತ್ತಿ ಕೊಟ್ಟುದು ಬೇ. 169 ರಿಂದ ಗೊತ್ತಾಗುತ್ತದೆ. ಈ ದಾನವನ್ನು, ಶಾಸನವನ್ನು, ಚಕ್ರವರ್ತಿ ಸೋಮೇಶ್ವರನಿಂದಲೇ ಬರೆಯಿಸಿ, ಕೊಡಲ್ಪಟ್ಟಿದೆ. ಶಾಸನವನ್ನು ಕ್ರಿ.ಶ. 1254ರಲ್ಲಿ ಬಂದ ಆನಂದ ಸಂವತ್ಸರದ ಚೈತ್ರಮಾಸದಲ್ಲಿ ಬರೆಯಲ್ಪಟ್ಟಿದೆ. ಇದೇ ಆನಂದಸಂವತ್ಸರದ ಮಾರ್ಗಶಿರಮಾಸದ ಬಹುಳ ಪ್ರತಿಪದ ಗುರುವಾರದಂದು ಬರೆಯಲಾದ ಬೇ. 390ರಲ್ಲಿ ಈ ನರಸಿಂಹನನ್ನು ' ಪ್ರತಾಪಚಕ್ರವರ್ತಿ ' ನರಸಿಂಹ ಎಂದು ನಿರ್ದೇಶಿಸಿದೆ. ಒಂದರಲ್ಲಿ ಕೇವಲ ' ಕುಮಾರ ' ಎಂದೂ ಮತ್ತು ಇನ್ನೊಂದರಲ್ಲಿ ' ಪ್ರತಾಪಚಕ್ರವರ್ತಿ ' ಎಂದು ನಿರ್ದೇಶಿಸಿರುವುದು ಮುಮ್ಮಡಿನರಸಿಂಹನಿಗೆ ಈ ಕಾಲಾವಧಿಯ ಮಧ್ಯದಲ್ಲಿ ಪಟ್ಟಬಂಧವಾದುದನ್ನು ತಿಳಿಸುತ್ತದೆ. ಬೇ. 391 ಅದೇ ಆನಂದ ಸಂವತ್ಸರದ ಫಾಲ್ಗುಣ ಬಹುಳ-2 ಬುಧವಾರದಂದು (24-2-1255) ನರಸಿಂಹನಿಗೆ ಉಪನಯನವಾದುದನ್ನು ತಿಳಿಸಿದೆ. ಇದು ಗಮನಾರ್ಹವಾದ ಸಂಗತಿಯಾಗಿದೆ. ಬೇ. 267ನೆಯ ಶಾಸನ ಈ ನರಸಿಂಹನ ತಾಯಿ 'ಬಿಜ್ಜಲರಾಣಿ' ಎಂದು ತಿಳಿಸಿದೆ ಮತ್ತು ಅವನಿಗೆ 'ಸಾಹಿತ್ಯ ಸರ್ಬ್ಬಜ್ಞ' ಎಂಬ ಬಿರುದಿದ್ದುದನ್ನು ದಾಖಲಿಸಿದೆ. ವಿಷ್ಣುವರ್ಧನನನ್ನು ' ಕ್ಷತ್ರಿಯಕುಳತಿಳಕ ' ಎಂದು ಬೇ. 106ರಲ್ಲಿ ಹೇಳಿರುವುದರಿಂದ ಮುಮ್ಮಡಿ ನರಸಿಂಹನೂ ಆತನ ಹಾಗೆ ಕ್ಷತ್ರಿಯ. ಕ್ಷತ್ರಿಯರು ಉಪನಯನವನ್ನು 11-22 ವರುಷ ವಯಸ್ಸಿನ ಅವಧಿಯಲ್ಲಿ ಆಚರಿಸುವುದರಿಂದ ಅವನಿಗೆ ಈ ಸಮಯದಲ್ಲಿ ವಯಸ್ಸು 11 ವರುಷಕ್ಕೂ ಮೇಲ್ಪಟ್ಟು ಆಗಿತ್ತು. ಕಡೂರು-100ನೆಯ ಶಾಸನದಿಂದ ಈ ನರಸಿಂಹ ಕ್ರಿ.ಶ. 1240ರ ಆಗಸ್ಟ್ 11 ಅಥವಾ ಅದಕ್ಕೂ ಮುಂಚೆ ಹುಟ್ಟಿದ್ದನೆಂಬುದು ಖಚಿತ[72]. ಆದುದರಿಂದ ಈ ಶಾಸನದ ಕಾಲಕ್ಕೆ ಆತನಿಗೆ 15 ವರ್ಷ ವಯಸ್ಸಾಗಿರಬೇಕು.

ಬೇ. 226 (ಕೊರಟಿಕೆರೆ) ಶಾಸನವನ್ನು ಕಲಿಯುಗ 4374 ಮತ್ತು ಶಕವರ್ಷ 1145ನೆಯ ಆಂಗಿರ ಸಂವತ್ಸರದ ಮಾಘ ಹದಿನೈದು ಆದಿತ್ಯವಾರದಂದು ಬರೆಯಲಾಗಿದೆ. ಶಕವರ್ಷವನ್ನು ಕೆತ್ತುವಲ್ಲಿ ಇನಿತು ದೋಷವಾಗಿದೆ. 1195 ಇರಬೇಕಾದುದು 1145 ಆಗಿದೆ. ಆದರೆ ಕಲಿವರ್ಷ ಸರಿಯಾಗಿ ಹೊಂದುವುದರಿಂದ ಇದರ ತೇದಿಯು ಕ್ರಿ.ಶ. 1273ರ ಫೆಬ್ರವರಿ 19ಕ್ಕೆ ಸರಿ ಹೊಂದುತ್ತದೆ. ಈ ಶಾಸನದ ಪ್ರಕಾರ ಉಕ್ತ ತೇದಿಯಂದು ಮುಮ್ಮಡಿ ನರಸಿಂಹನಿಗೆ ' ಖಂಡೆಯರಾಯ ' ಎಂಬ ಪ್ರಧಾನಿಯು ಇದ್ದನು. ಆತನಿಗೆ ' ಭುಜಬಳಭೀಮ ' ಎಂಬ ಬಿರುದಿದ್ದಿತು. ಈ ಖಂಡೆಯರಾಯ ಎಂದರೆ ಇನ್ನಾರು ಅಲ್ಲ ' ಕಂಪಿಲರಾಯ '; ಯಾವಾತ ಕುಮ್ಮಟ ದುರ್ಗದಿಂದ ರಾಜ್ಯವಾಳುತ್ತಿದ್ದನು. ' ಖಂಡೆಯರಾಯ ' ' ಖಂಡೆಯರಾಣೆಯ ' ' ಖಂಡೆಯರಾಯರಾಣೆಯ ' ಮತ್ತು 'ಕಂಪಿಲರಾಯ' ಒಬ್ಬನೆ ಎಂಬುದನ್ನು ಇತಿಹಾಸಜ್ಞರು ಈಗಾಗಲೇ ತೋರಿಸಿಕೊಟ್ಟಿದ್ದಾರೆ[73]. ಈ ಕಂಪಿಲದೇವನು ಹೊಯ್ಸಳ ನರಸಿಂಹನಿಗೆ ದಾಯಾದಿ ಎಂಬುದು ಕುಮ್ಮಟ[74] ಹಾಗೂ ರಾಮಘಡದಲ್ಲಿ[75] ದೊರಕಿದ ಶಾಸನಗಳಿಂದ ಇದೀಗ ಸುವಿದಿತ. ಈ ಖಂಡೆಯರಾಯ ಸಿಂಗನ ಕುವರ ಎಂಬುದು ಬೇ. 113ರಲ್ಲಿ ವ್ಯಕ್ತವಾಗಿದೆ ಮತ್ತು ಸಿಂಗನು 'ಮಾರ ರಾಣೆಯ' ಎಂಬವನ ಪುತ್ರ ಎಂಬುದನ್ನು ಇದೇ ಶಾಸನದಲ್ಲಿ ಬರೆದಿದೆ.

ಕ್ರಿ.ಶ. 1273ರ ಬೇ. 422, ಮೂರನೆಯ ನರಸಿಂಹನಿಗೆ ಕುಮಾರಮಲ್ಲಿದೇವ ದಣ್ಣಾಯಕ ಎಂಬ ಒಬ್ಬ ಮಗನಿದ್ದುದನ್ನು ದಾಖಲಿಸಿದೆ. ಈತನಿಗೆ ' ಗಾಯಿಗೋವಳ ' 'ಗಂಡಪೆಂಡಾರ' ಮತ್ತು 'ಮಂಡಳಿಕ (ಮಂನೆಯ ಜೂಬು)' ಮುಂತಾದ ಬಿರುದುಗಳಿದ್ದುದನ್ನು ಈ ಶಾಸನ ತಿಳಿಸಿದೆ. ಈತ ನಾಗೇಶ್ವರ ದೇವರ ದೇವಾಲಯವನ್ನು ಮಾಡಿಸಿ ಆ ದೇವರ ಅಂಗರಂಗ ಭೋಗಕ್ಕೆ ಗೋಳಿಯಸೋಮೆಯನಹಳ್ಳಿಯ ಊರಮುಂದೆ ಕೆರೆಯ ಕೆಳಗೆ ಗೌಡಿಕೆಯ ಕೊಡಗಿಯ ತೋಟವನ್ನು ಧಾರಾ

---

72. ಎ. ಕ. ಸಂ. 6 (ಬಿ. ಎಲ್. ರೈಸ್.), ಕಡೂರು-100

73. (a) Dr. S.H. Ritti ' Seunas ' pp. 175-176 (1973)
(b) A History of Karnataka (PBD, SHR & BRG) p. 286 (1981)

74. ಮಾನವಿಕ ಕರ್ಣಾಟಕ ಸಂಪುಟ : 16, ಸಂಚಿಕೆ : 2, 3. 4 ಪು 125-131

75. ಡಾ. ಜಿ. ವರದರಾಜರಾವ್ " ಕುಮಾರರಾಮನ ಸಾಂಗತ್ಯಗಳು " ಅನುಬಂಧ—6 (1966)

ಪೂರ್ವಕವಾಗಿ ದತ್ತಿ ಕೊಟ್ಟನು. ಈ ಮಲ್ಲಿದೇವದಂಣಾಯಕನು ಸೇವುಣ ರಾಮದೇವರಾಯನ ಸೇನಾಧಿಪತಿ ಸಾಳುವ ತಿಕ್ಕಮನೊಂದಿಗೆ ಯುದ್ಧಮಾಡಿದನು. ಅವನೂ ಅವನ ಸೈನಿಕರೂ ಸೇವುಣರ ಸೈನ್ಯವನ್ನು ದೋರಸಮುದ್ರದಿಂದ ಬೆಳವಾಡಿಯವರೆಗೆ ಓಡಿಸಿದರೆಂಬುದನ್ನು ಬೇ. 430 ಮತ್ತು 552ನೆಯ ಶಾಸನಗಳು ದಾಖಲಿಸಿವೆ. ಮಲ್ಲಿದೇವದಂಣಾಯಕ ತನ್ನ ಶೌರ್ಯ ಧೈರ್ಯಗಳನ್ನು ಈ ಯುದ್ಧದಲ್ಲಿ ಮೆರೆದನೆನ್ನುವುದರಲ್ಲಿ ಸಂದೇಹವಿಲ್ಲ. ಮೂರನೆಯ ಬಲ್ಲಾಳನಿಗೆ 'ಮಲ್ಲಿದೇವ' ಎಂಬ ಸೋದರನಿದ್ದುದು ಇದೀಗ ಹೊಸದಾಗಿ ಬೆಳಕಿಗೆ ಬಂದ ಸಂಗತಿ.

ಬೇ. 181, ಬೇಲೂರ ಖಜಾನೆಯಲ್ಲಿಯ ತಾಮ್ರಶಾಸನ. ಇದು ಸಂಸ್ಕೃತ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿದೆ; ಮೂರನೆಯ ನರಸಿಂಹ ಕಾಶಿಯ ವಿಶ್ವೇಶ್ವರನ ಪೂಜೆಗೆಂದು ಕೊಂಗನಾಡ ಹೆಬ್ಬಾಲೆಗ್ರಾಮವನ್ನು ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಅದರ ಜೊತೆಜೊತೆಗೆ ಕಾಶಿಯಲ್ಲಿಯ ಎಲ್ಲಾ ಕ್ಷೇತ್ರವಾಸಿಗಳು ತುರುಕರಿಗೆ ತೆರಬೇಕಾದ ತೆರಿಗೆಯನ್ನು ಇದು ವಿವರಿಸಿದೆ. ಈ ಕಾರ್ಯಕ್ಕೆಂದು ರಾಜನು ಗ (ಗದ್ಯಾಣ) 645ನ್ನು ಕೊಟ್ಟಿರುವುದೂ ಗಮನಿಸಬೇಕಾದ ಸಂಗತಿ. ಈ ತೆರಿಗೆಯನ್ನು ಕೇವಲ ಹಿಂದುಗಳು ಕೊಟ್ಟಿರುವುದೂ ಲಕ್ಷಿಸಬೇಕಾದ ಸಂಗತಿ.

ಬೇ. 553ನೆಯ ಶಾಸನವು ಗಜಪತಿ ಹಾಗೂ ಹೊಯ್ಸಳ ರಾಮನಾಥನು ಮೂರನೆಯ ನರಸಿಂಹನ ಮೇಲೆ ಕಾಳಗಕ್ಕೆ ಬಂದುದನ್ನು ವಿವರಿಸಿದೆ. ಈ ಘಟನೆ ಕ್ರಿ.ಶ. 1279ರ ಡಿಸೆಂಬರ್ 14ರಂದು ಜರುಗಿತು. ಈ ಯುದ್ಧವು ಸೋಲೆ ಊರಲ್ಲಿ ನಡೆಯಿತು (ಇದು ಈಗಿನ ಬೆಂಗಳೂರು ಜಿಲ್ಲೆಯ ಆನೆಕಲ್ ತಾಲ್ಲೂಕಿನ ಸೋಲೂರು ಆಗಿರಬಹುದು.)

ಬೇ. 439ನೆಯ ಶಾಸನವು ಮುಮ್ಮಡಿನರಸಿಂಹನ ಕಾಲಕ್ಕೆ ಹುಲಿಗೆರೆಯ ಕ್ಷೇತ್ರವಾಸಿಗಳಾದ ಪುರಾಣದ ಮಾಯಿದೇವ ಪಂಡಿತರ ಕಾರುಣ್ಯದ ಶಿಶು ಶ್ರೀಶಿವರಾತ್ರಿಯ ಮಾಯಿದೇವರಿಗೆ ಅವರ ಕರುಣದ ಮಕ್ಕಳು ಬಯಿಚಣ್ಣ ಅಂಕಣ್ಣ ಮೊದಲಾದವರು ಗೋಪೆಯ ಶಿವದೇವರ ಮಗ ಶಿವಶರಣ...ಮೊದಲಾದವರು ಬಿಟ್ಟ ದಾನಗಳನ್ನು ಆ ಮಾಯಿದೇವರು ಅಲ್ಲಿನ ವೀರಭದ್ರ ಹಾಗೂ ಮಹಲಿಂಗ ದೇವರಿಗೆ ಅರ್ಪಿಸಿದರು. ಈ ಶಾಸನದಲ್ಲಿ ಭಿನ್ನಭಿನ್ನ ತೇದಿಗಳಂದು, ಮಾಯಿದೇವರು ದಾನ ಪಡೆದ ಸಂಗತಿಗಳನ್ನು, ವಿವರಿಸಿದೆ. ಕ್ರಿ.ಶ. 1285ರಲ್ಲಿ ಬಂದ ತಾರಣ ಹಾಗೂ ಪಾರ್ಥಿವಸಂವತ್ಸರಗಳ ಎಡಬಲದಲ್ಲಿ ಈ ದಾನಗಳನ್ನು ಕೊಡಲಾಯಿತು.

ಬೇ. 318, ರಾಜಧಾನಿಯಲ್ಲಿ ಪ್ರತಾಪಚಕ್ರವರ್ತಿ ವೀರನಾರಸಿಂಹನ ಅರಮನೆಯ ಆನೆ, ಮದ ಬಂದಾಗ ರಾಜಬೀದಿಯಲ್ಲಿ ಹೊಕ್ಕು ಜನರನ್ನು ಕೊಲ್ಲುತ್ತಿದ್ದ ಒಂದು ಘಟನೆಯನ್ನು ದಾಖಲಿಸಿದೆ. ಅದನ್ನು ತಹಬಂದಿಗೆ ತರಹೋದ ಮಾವಂತನೂ ಮರಣವನ್ನಪ್ಪಿದ. ಬೇ. 344 ಕ್ರಿ. ಶ. 1311 ಡಿಸೆಂಬರ್ 26ರಂದು ಬರೆಯಲ್ಪಟ್ಟಿರಬಹುದು. ಆದರೆ ಈ ತೇದಿಯಂದು ಮುಮ್ಮಡಿ ನರಸಿಂಹನು ಬದುಕಿದ್ದನೆ ಎಂಬುದು ಬಿಡಿಸಲಾರದ ಸಮಸ್ಯೆ. ಈ ನಾರಸಿಂಹದೇವರಸನು ಯಾರೆಂಬುದು ಇನ್ನೂ ನಿಗೂಢವಾಗಿದೆ. ತೇದಿಯಿಲ್ಲದ ಬೇ. 471ನೆಯ ಶಾಸನವು ಮುಮ್ಮಡಿ ನರಸಿಂಹನು ದೋರಸಮುದ್ರದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದಲ್ಲಿ ಸಿಂಗಪ್ಪನಾಯಕನು ಇನ್ನೊಬ್ಬ ನಾಯಕನೊಂದಿಗೆ (ಹೆಸರು ಅಳಿಸಿಹೋಗಿದೆ) ಯುದ್ಧಮಾಡುವಲ್ಲಿ ಮರಣವನ್ನಪ್ಪಿದನೆಂದು ತಿಳಿಸುತ್ತದೆ.

ಮುಮ್ಮಡಿ ಬಲ್ಲಾಳನಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ 11 ಶಾಸನಗಳಿವೆ. ಬೇ. 427ನೆಯ ಶಾಸನವು ವಿಕಾರಿ ಸಂವತ್ಸರದ ಪುಷ್ಯ ಬಹುಳ 1 ಸೋ ಎಂದಿದೆ. ಈ ತೇದಿಯನ್ನು ಯಥಾವತ್ತಾಗಿ ಸ್ವೀಕರಿಸಿದರೆ ಕ್ರಿ.ಶ. 1300 ಜನವರಿ 1ನೆಯ ತಾರೀಖಿಗೆ ಹೊಂದುತ್ತದೆ. ಆದರೆ ಆ ದಿನದಂದು ಶುಕ್ರವಾರವಾಗಿತ್ತು ಮತ್ತು ಸೋಮವಾರವಲ್ಲ. ಅಂಕೆಯ ದಣ್ಣಾಯಕ ಮತ್ತು ಸಿಂಗೆಯ ದಣ್ಣಾಯಕರ ಉಲ್ಲೇಖವಿರುವುದರಿಂದ ಈ ಶಾಸನದ ಕಾಲ ಮುಮ್ಮಡಿ ಬಲ್ಲಾಳನ ಕಾಲದ್ದೆಂದು ನಿಶ್ಚಿತವಾಗಿ ಹೇಳಬಹುದು. 'ಪುಷ್ಯ ಬಹುಳ 1'ಕ್ಕೆ ಪ್ರತಿಯಾಗಿ ಪುಷ್ಯಬಹುಳ 11 ಎಂದು ಸ್ವೀಕರಿಸಿದರೆ ಆದಿನ ಸೋಮವಾರ ಎಂಬ ವಾರವೇ ಬಂದಿದ್ದು ಜನವರಿ 18, 1300ಕ್ಕೆ ಸಂಪೂರ್ಣ ಸರಿಹೋಗುತ್ತದೆ. ಶಾಸನ ಕೆತ್ತುವವನ ಕರಸ್ಖಾಲಿತ್ಯವೊ ಅಥವಾ ಶಾಸನ ಓದುವವರ ತಪ್ಪೊ ಆಗಿರಲು ಸಾಧ್ಯವಿದೆ. ಈ ಶಾಸನದ ಸಿಂಗೆಯದಣ್ಣಾಯಕ ಮತ್ತು ಬೇ. 471ನೆಯ ಶಾಸನದಲ್ಲಿ ಬಂದಿರುವ ಸಿಂಗೆಯನಾಯಕ ಒಬ್ಬನೇ ವ್ಯಕ್ತಿ ಆಗಿರಲು ಸಾಧ್ಯವಿದೆ. ಇದು ಮುಮ್ಮಡಿ ಬಲ್ಲಾಳನು ಕಡಬದಲ್ಲಿ ಮಾಡಿದ ಯುದ್ಧವನ್ನು ದಾಖಲಿಸಿದೆ.

ತೇದಿಯಿಲ್ಲದ ಸುಮಾರು 35 ಶಾಸನಗಳು ಹೊಯ್ಸಳರ ಆಳ್ವಿಕೆಯ ಅವಧಿಗೆ ಸಂಬಂಧಿಸಿವೆ. ಇವುಗಳಲ್ಲಿ ನರಸಿಂಹ ಹಾಗೂ ಬಲ್ಲಾಳ ಎಂಬ ಹೆಸರುಗಳು ಬಂದಿದ್ದರು ಆಯಾ ಹೆಸರಿನ ರಾಜರು ಮೂವರು ಮೂವರು ಇರುವುದರಿಂದ ಅವುಗಳನ್ನು ನಿರ್ದಿಷ್ಟವಾಗಿ ಇಂತಹ ರಾಜನ ಆಳ್ವಿಕೆಗೆ ಸಂಬಂಧಿಸಿವೆ ಎಂದು ಹೇಳಲು ಬರುವುದಿಲ್ಲ. ಆದರೂ ಕೆಲವು ಮುಖ್ಯ ಶಾಸನಗಳನ್ನು ಇಲ್ಲಿ ಗಮನಿಸಬಹುದು.

ಬೇ. 44, ಒಂದು ಪದ್ಯ ಶಾಸನವಾಗಿದ್ದು ಹೊಯ್ಸಳದೊರೆ ವಿಷ್ಣುವರ್ಧನನ ಚಮೂಪ ಪುಣಿಸಮಯ್ಯನ ವಿವರಣೆ

ಯನ್ನು ಹೊಂದಿದ್ದು ಆತನಿಗಿದ್ದ ‘ಶಾಸನವಾಚಕಚಕ್ರವರ್ತಿ’ ಎಂಬ ಬಿರುದನ್ನು ದಾಖಲಿಸುವುದರೊಂದಿಗೆ ಆತನ ವಂಶಾವಳಿಯ ವಿವರವನ್ನೂ ಇನಿತು ಕೊಟ್ಟಿದೆ :



ಪುಣಿಸನೊಬ್ಬ ವಿಷ್ಣುವರ್ಧನ ಹೊಯ್ಸಳದೇವರ ಮಹಾಪ್ರಧಾನ, ದಣ್ಡನಾಯಕ, ಎಂಬುದು ಕೆ.ಆರ್. ಪೇಟೆ ತಾಲೂಕಿನ ಬಸ್ತಿ ಊರಿನ ಶಾಸನದಿಂದ ತಿಳಿದುಬಂದಿದೆ[76]. ಈತ ವಿಷ್ಣುವರ್ಧನನ ದಂಡನಾಯಕನಾಗಿದ್ದುದು ಚಾಮರಾಜನಗರದ ಪಾರ್ಶ್ವನಾಥ ಬಸದಿಯ ಶಾಸನದಿಂದಲೂ ಖಚಿತವಿದೆ. ಆ ಶಾಸನದಲ್ಲಿ ಈತನ ವಂಶಚರಿತ್ರೆಯ ಬಗ್ಗೆ ಇನ್ನಷ್ಟು ವಿವರಗಳಿವೆ. ಇಮ್ಮಡಿ ಪುಣಿಸಮದಂಡನಾಥ ವಿಷ್ಣುವರ್ಧನನ ದಂಡನಾಯಕ ಹಾಗೂ ಸಮಕಾಲೀನನಾಗಿದ್ದು ಚಾಮರಾಜನಗರದ ಶಾಸನವನ್ನು ಕ್ರಿ.ಶ. 1116ರಲ್ಲಿ ಬರೆಸಿರುವನು. ಈತ ಗಂಗವಾಡಿ 96000ಕ್ಕೂ ಪ್ರಧಾನನಾಗಿದ್ದು ಪ್ರಸಿದ್ಧ ವ್ಯಕ್ತಿಯಾಗಿದ್ದನು[77]. ಇದೇ ಪದ್ಯ ಇನಿತು ಪಾಠಾಂತರಗಳಿಂದ ಚಾಮರಾಜನಗರದ ಶಾಸನದಲ್ಲಿಯೂ ಕಾಣಬಹುದು.

ಬೇ. 292ರ ಪ್ರಕಾರ ಹಳೆಯಬೀಡಿನ ಹೋಸಣೇಶ್ವರ ದೇವರ ದೇವಾಲಯದಲ್ಲಿ ಪಂಚಿಕೇಶ್ವರ ಇತ್ಯಾದಿ ಪೂಜಾ ಕಾರ್ಯಕ್ಕೆ ಧರ್ಮದತ್ತಿಗಳನ್ನು ಬಿಟ್ಟವರಲ್ಲಿ ಮುಖ್ಯವ್ಯಕ್ತಿ ಪಿರಿಯರಸಿ ಕೇತಲದೇವಿ. ಈ ಶಾಸನದ ಮೇಲಿನ ಸ್ಥಳದಲ್ಲಿ ಬರೆದಿರುವ ಬೇ. 291ನೆಯ ಶಾಸನವನ್ನು ಕ್ರಿ.ಶ. 1280ರಲ್ಲಿ ಬರೆದಿದೆ. ಮತ್ತೆ ಈ ಶಾಸನದ ಕೆಳಗೆಯೆ ಬರೆದಿರುವ ಬೇ. 293ನೆಯ ಶಾಸನವನ್ನು ಕ್ರಿ.ಶ. 1284ರಲ್ಲಿ ಬರೆದಿದೆ. ಆದುದರಿಂದ ಮಧ್ಯದಲ್ಲಿ ಬರೆಯಲ್ಪಟ್ಟಿರುವ ಪ್ರಸ್ತುತ ಶಾಸನವೂ ಇದೇ ಕಾಲಕ್ಕೆ ಎಂದರೆ ಕ್ರಿ.ಶ. 1280–1284ರ ಮಧ್ಯದಲ್ಲಿ ಬರೆಯಲ್ಪಟ್ಟಿದೆ. ಈ ಶಾಸನದಲ್ಲಿ ಬಂದಿರುವ ಪಿರಿಯರಸಿ ಕೇತಲದೇವಿಯು ಯಾವ ಹೊಯ್ಸಳದೊರೆಯ ಪಟ್ಟದರಸಿ ಮತ್ತು ಪಿರಿಯರಸಿ ಎಂಬುದು ಪ್ರಶ್ನೆ. ಕ್ರಿ.ಶ. 1280–84ರ ಮಧ್ಯದಲ್ಲಿ ಚಕ್ರವರ್ತಿಯಾಗಿದ್ದವನಂತೂ ಮುಮ್ಮಡಿ ನರಸಿಂಹ. ಈಕೆ ಮುಮ್ಮಡಿ ನರಸಿಂಹನ ಪಿರಿಯರಸಿ ಆಗಿದ್ದರೆ ಈ ಶಾಸನವೇ ಸದ್ಯ ಈಕೆಯನ್ನು ಪ್ರಸ್ತಾಪಿಸಿರುವ ಮೊದಲ ಶಾಸನ. ಇದುವರೆಗೆ ‘ಪಟ್ಟಮಹಾದೇವಿ’ ಎಂದು ಡಾ. ಡೆರೆಟ್ಟ ಹೇಳಿರುವ ವ್ಯಕ್ತಿಯೂ ಈಕೆಯೂ ಒಬ್ಬಳೆಯೊ ಅಥವಾ ಬೇರೆಬೇರೆಯೊ ಸದ್ಯ ಏನನ್ನೂ ಹೇಳಲು ಬರುವುದಿಲ್ಲ. ಈ ಮುಮ್ಮಡಿ ನರಸಿಂಹನ ಮಹಾಪ್ರಧಾನನಾದ ಪೆರುಮಾಳೆದೇವನ ವಂಶಚರಿತ್ರೆಯ ಬಗ್ಗೆ ಇನಿತು ಹೊಸಸಂಗತಿಗಳು ಈ ಸಂಪುಟದ ಶಾಸನಗಳಲ್ಲಿ ದೊರೆಯುತ್ತವೆ. ಪೆರುಮಾಳೆದೇವನ ತಾಯಿ ಮಂಚಿಯಕ್ಕನು ಕ್ರಿ.ಶ. 1280ರ ಆಗಸ್ಟ್‌ನಲ್ಲಿ ಮರಣಹೊಂದಲು ಆಕೆಯ ವೃಂದಾವನವನ್ನು ನರಸೀಪುರದಲ್ಲಿ ಮಾಡಲಾಯಿತೆಂದು ಬೇ. 562ನೆಯ ಶಾಸನವು ತಿಳಿಸುತ್ತದೆ. ಬೇ. 565ನೆಯ ಶಾಸನವು ಈ ಪೆರುಮಾಳದೇವನಿಗೆ ‘ಮಂಚಿಯ ದಂಣಾಯಕ’ ಎಂಬ ಮಗನಿದ್ದುದಾಗಿ ತಿಳಿಸಿದೆ. ಈ ದಂಡನಾಯಕರ ವಂಶಾವಳಿಯು ಹೀಗಿರುತ್ತದೆ:



---

[76] ಎ.ಕ. ಸಂ. 6 (1977) ಕೃಪೆ–107, ಪು. 96

[77] ಎ.ಕ. ಸಂ. 4 (1975) ಚಾನ–2 ಪು. 4; ಈ ಸಂಪುಟದಲ್ಲಿ ಒಂದನೆಯ ಪುಣಿಸಮ ದಂಡನಾಥನಿಗೆ ತಂದೆ ಚಾವುಚಮೂಪ ಎಂದು ಮತ್ತು ಇಮ್ಮಡಿ ಪುಣಿಸಮ ದಂಡನಾಥನಿಗೆ “ಬಿಟ್ಟಿಗ” ಎಂಬ ಒಬ್ಬ ಮಗನಿದ್ದುದಾಗಿಯೂ ಬರೆದಿದೆ. ಈ ಎರಡು ಸಂಗತಿಗಳೂ ಸರಿಯಲ್ಲ. ಓದುಗರು ಈ ಅಂಶಗಳನ್ನು ಸರಿಪಡಿಸಿಕೊಳ್ಳಬೇಕು.

ಈ ವಂಶದವರನ್ನು ತೊರೆನಾಡವರೆಂದು ಹೇಳಲಾಗುತ್ತದೆ. ಮೈಸೂರು ಜಿಲ್ಲೆಯ[78] ನಂಜನಗೂಡು, ಗುಂಡ್ಲುಪೇಟೆ, ಕೊಳ್ಳೇಗಾಲ ಹುಣಸೂರು, ಕೆ. ಆರ್. ನಗರ, ಮತ್ತು ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ಹಾಗೂ ನಾಗಮಂಗಲ ಮೊದಲಾದ ತಾಲೂಕುಗಳಲ್ಲಿ ಇವರ ಶಾಸನಗಳು ದೊರಕಿವೆ. ಹೊಯ್ಸಳ ನಾಡೆಲ್ಲ ಪಸರಿಸಿದ ಇವರ ಶಾಸನಗಳನ್ನು ಸಂಗ್ರಹಿಸಿದ ಮೇಲೆ ಚರಿತ್ರೆಯನ್ನು ನಿರೂಪಿಸಬಹುದು.

ವಿಜಯನಗರ

ವಿಜಯನಗರ ಅರಸುಮನೆತನಗಳಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ 52 ಶಾಸನಗಳಿವೆ. ಕ್ರಿ.ಶ. 1359ರಲ್ಲಿ ಬರೆಯಲಾದ ಬೇ. 519, ಚಂದಾಪುರ ಶಾಸನವೇ, ಸದ್ಯ ಮೊದಲ ಶಾಸನ. ಇದು ಸಂಗಮ ಮನೆತನದ ಒಂದನೆಯ ಬುಕ್ಕದೊರೆಗೆ ಸಂಬಂಧಿಸಿದೆ. ಆತನು ಹೊಯ್ಸಳ ನಾಡಿನಲ್ಲಿಯ ಹರಿಹರಪಟ್ಟಣದಲ್ಲಿದ್ದು ಸ್ಥಿರರಾಜ್ಯವಾಳುವಲ್ಲಿ, ಈ ಶಾಸನವನ್ನು ಆತನ ಅಧಿಕಾರಿ 'ಖಂತಿಕಾಱರಾಯರಗಂಡ' ತೆಪ್ಪದ ನಾಗಣ್ಣವೊಡೆಯನು ತಗರೆ ನಾಡಿನಲ್ಲಿಯ ಚೀರಮನಹಳ್ಳಿಯನ್ನು ಕುಳವಕಡಿದು ತನ್ನ ತಮ್ಮ ಚೆಂದವೊಡೆಯರ ನೆನಪಿನಲ್ಲಿ ಬೇಲೂರ ಮಲ್ಲಿನಾಥದೇವರ ಕೊಯಡಿವೊಡೆಯರಿಗೆ ದಾನಕೊಟ್ಟುದನ್ನು ಬರೆಯಿಸಿದ್ದಾನೆ. 'ಸ್ಥಿರರಾಜ್ಯಂಗೆಯ್ಯುವುದು' ಎಂಬ ಮಾತು ಬಹಳ ಮುಖ್ಯವಾದುದು. ಈ ಮಾತು ಹರಿಹರಪಟ್ಟಣ ಸ್ವಲ್ಪಕಾಲ ರಾಜಧಾನಿಯಾಗಿತ್ತೆಂಬುದನ್ನು ಸೂಚಿಸುತ್ತದೆ.

ಬೇ. 3ನೆಯ ಶಾಸನವು ಕ್ರಿ.ಶ. 1381ರಲ್ಲಿ ಬರೆಯಲಾಗಿದ್ದು ಇಮ್ಮಡಿ ಹರಿಹರರಾಯನಿಗೆ ಸಂಬಂಧಿಸಿದೆ. ಆತನ ಆಜ್ಞೆಯ ಮೇರೆಗೆ ಮಹಾಪ್ರಧಾನ ಕಂಪಣವೊಡೆಯನು ಈಗಿನ ಚೆಂನಕೇಶವ ದೇವಾಲಯದ (ಮೂಲತಃ ವಿಜಯನಾರಾಯಣ ದೇವಾಲಯದ) ಜೀರ್ಣೋದ್ಧಾರ ಮಾಡಿಸಿದುದನ್ನು ವಿವರಿಸಿದೆ. ಕ್ರಿ ಶ. 1381 ರಷ್ಟೊತ್ತಿಗೆ ವಿಜಯನಾರಾಯಣ ದೇವಾಲಯ ಚೆಂನಕೇಶವ ದೇವಾಲಯವಾಗಿರುವುದು; ಇದು ಯಾವಕಾಲಕ್ಕೆ ದೇವಾಲಯಗಳ ಹೆಸರಿನಲ್ಲಿ ಗೊಂದಲವುಂಟಾಗಿದೆಯೆಂಬುದನ್ನು ಸೂಚಿಸುತ್ತದೆ. ಬೇ. 171ನೆಯ ಶಾಸನವು ಈ ಹರಿಹರನ ಮಂತ್ರಿ ಮುದ್ದದಂಡೇಶನು ವ್ಯಕ್ತಿತ್ವದಲ್ಲಿ ಸುಮಂತ್ರ ಹಾಗೂ ಯೌಗಂಧರಾಯಣರಂತಿದ್ದು ರಾಜನ ಹಾಗೂ ಪ್ರಜೆಗಳ ಯೋಗಕ್ಷೇಮವನ್ನು ಪ್ರೀತಿಯಿಂದ ನೋಡಿಕೊಂಡು ಆಡಳಿತವನ್ನು ನಡೆಸುತ್ತಿದ್ದನೆಂದು ತಿಳಿಸಿದೆ. ಅದರ ಜೊತೆಗೆ ನಾನಾ ಬಗೆಯ ವ್ಯಾಪಾರಿಗಳು ಮಹಾಪ್ರಧಾನ ಮುದ್ದದಂಡನಾಯಕನಿಗೆ ಸಲ್ಲಿಸಬೇಕಾಗಿದ್ದ ವಿವಿಧ ಬಗೆಯ ತೆರಿಗೆಗಳ ಒಂದು ದೊಡ್ಡ ಪಟ್ಟಿಕೆಯನ್ನೇ ಈ ಶಾಸನ ಕೊಟ್ಟಿದೆ. ಆರ್ಥಿಕ ಅಧ್ಯಯನಕ್ಕೆ ಇದೊಂದು ಒಳ್ಳೆಯ ದಾಖಲೆಯಾಗಿದೆ. ಇದೇ ಮುದ್ದಪಮಂತ್ರಿಯ ಕಾಲದಲ್ಲಿ ಬೇಲೂರಿನ ಕೇಶವ ದೇವಸ್ಥಾನದ (ಸದ್ಯದ) ಕಳಶವನ್ನು ಮಲಗರಸವಿಭು ಕಾಂಚನಮಯವಾಗಿ ಮಾಡಿಸಿದನೆಂದು ಬೇ. 12ನೆಯ ಶಾಸನವು ವಿವರಿಸಿದೆ; ಈತ ಕಾಶ್ಮೀರ ವಂಶಕ್ಕೆ ಸಂಬಂಧಿಸಿದ್ದನೆಂದೂ ಬರೆದಿದೆ.

ಈ ಹರಿಹರರಾಯನ ಮನೆಯ ಪ್ರಧಾನಿ ಗುಂಡಪದಂಣಾಯಕನು ದೇವಾಲಯಕ್ಕೆ ಕಂಚಿನಕಂಬದ ದೀವಿಗೆಯನ್ನು ಕ್ರಿ.ಶ. 1395ರಲ್ಲಿ ಮಾಡಿಸಿಕೊಟ್ಟುದನ್ನು ದಾಖಲಿಸಿದೆ—ಬೇ. 20. ಇನ್ನು ಬೇ. 144 ಅಂತೂ ಗುಂಡಪದಂಡನಾಯಕನ ಕೀರ್ತಿಯನ್ನು ಆಚಂದ್ರಾರ್ಕವಾಗಿ ನಿಲ್ಲಿಸುವ ಶಾಸನ. ಅದು ಇಂದಿನ ಬೇಲೂರು ದೇವಸ್ಥಾನದ ಸಹಸ್ರಾರು ಯಾತ್ರಿಗಳ ಮನಮೋಹಿಸುವ ಮಹಾಗೋಪುರ ಕಟ್ಟಿಸಿದ ಬಗ್ಗೆ ವಿವರಗಳನ್ನು ನೀಡುವುದಲ್ಲದೆ ಜಗತ್ ಪ್ರಸಿದ್ಧ ಸರ್ವಧರ್ಮ ಸಮನ್ವಯವನ್ನು ಬೋಧಿಸುವ ಸುಂದರ ಪದ್ಯವೊಂದನ್ನು ಹೊಂದಿದೆ; ಆ ಪದ್ಯವಿಂತಿದೆ:

> ಯಂ ಶೈವಾಸ್ಸಮುಪಾಸತೇ ಶಿವಇತಿ ಬ್ರಹ್ಮೇತಿ ವೇದಾಂತಿನೋ
> ಬೌದ್ಧಾಬುದ್ಧ ಇತಿ ಪ್ರಮಾಣಪಟವಃ ಕರ್ತ್ರೇತಿ ನೈಯ್ಯಾಇಕಾಃ
> ಅರ್ಹಶ್ಚೇತಿಹ ಜೈನಶಾಸನಮಿತಿ ಕರ್ಮೇತಿ ಮೀಮಾಂಸಕಾಃ
> ಸೋಯಂವೋ ವಿಧದಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ॥

ಈ ಶಾಸನದ ಕಾಲ ಕ್ರಿ.ಶ. 1397; ಆದುದರಿಂದ ಈ ಶಾಸನ ಕರ್ತೃ ತನಗಿಂತಲೂ ಪೂರ್ವದಲ್ಲಿ ಇದ್ದ ಬಿಲ್ವಮಂಗಲ ಕವಿಯು ರಚಿಸಿದ ರಚನೆಯನ್ನು ಇನಿತು ಮಾರ್ಪಡಿಸಿ ಬಳಸಿಕೊಂಡಂತಿದೆ. 'ಶ್ರೀಕೇಶವೇಶಸ್ಸದಾ' ಎಂಬುದಕ್ಕೆ 'ಶ್ರೀದೇವಕೀನಂದನಃ' ಎಂಬ ಪಾಠಾಂತರವಿದೆ ಅಷ್ಟೇ:

> ಯಂ ಶೈವಾಸ್ಸಮುಪಾಸತೇ ಶಿವಇತಿ ಬ್ರಹ್ಮೇತಿ ವೇದಾಂತಿನೋ
> ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
> ಅರಹಿನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
> ಸೋಽಯಂವೋ ವಿದಧಾತು ವಾಂಛಿತಫಲಂ ಶ್ರೀ ದೇವಕೀನಂದನಃ ॥

---

[78] 'ವನಶ್ರಿ' (ಸಂ. ಜಿ. ಜಿ. ಮಂಜುನಾಥನ್) ಪು. 79 (1982)

ಬಿಲ್ವಮಂಗಲ ಕವಿಯು ಕ್ರಿ.ಶ. 11ನೆಯ ಶತಮಾನದಲ್ಲಿದ್ದನೆಂದು ಸಂಸ್ಕೃತ ಸಾಹಿತ್ಯ ಚರಿತ್ರೆಯಿಂದ ತಿಳಿದುಬಂದಿರುತ್ತದೆ[79]. ಇದೇ ಪದ್ಯವನ್ನು 'ಶ್ರೀ ದೇವಕಿನಂದನಃ' ಎಂಬ ಪಾಠದೊಂದಿಗೆ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಅರಸರು ಹಾಕಿಸಿದ ಬೇಲೂರಿನ ಶಾಸನದಲ್ಲಿಯೂ ಬರೆದಿದೆ[80].

"ಕಲುಬರಗೆಯ ತುರುಕ ಗೆಂಗಶಲಾರನು ಬಂದು ಮುರಿದು ಸುಡಿಸಿದಂಥಾ ಬಾಗಿಲುವಾಡದ ಗೋಪುರವನು ಏಳು ನೆಲೆಯಾಗಿ ಮಾಡಿಸಿ" ಎಂಬ ಈ ಶಾಸನದ ಪಂಕ್ತಿ 123–125ರಲ್ಲಿ ಬಂದಿರುವ ಮಾತುಗಳು ಬಹಮನಿ ಅರಸುಮನೆತನದ ಸೈನ್ಯ ಗೆಂಗಶಲಾರನ ನೇತೃತ್ವದಲ್ಲಿ ಬೇಲೂರಿಗೆ ಬಂದು ಲಗ್ಗಹಾಕಿ ದೇವಸ್ಥಾನದ ಬಾಗಿಲುವಾಡವನ್ನು ಸುಟ್ಟಿತೆಂದು ತಿಳಿಸಿವೆ. ಹೀಗೆ ಸುಡಿಸಿದ ಬಾಗಿಲ್ವಾಡದ ಗೋಪುರವನ್ನು ಗುಂಡಮದಂಡನಾಥನು ಏಳು ನೆಲೆಯಾಗಿ ಮಾಡಿಸುವದರೊಂದಿಗೆ ದೇವಸ್ಥಾನದ ಜೀರ್ಣೋದ್ಧಾರವನ್ನೂ ಮಾಡಿಸಿ ಅಲ್ಲಿ ಸಂಕೋಚಗೊಂಡಿದ್ದ ವಿಷ್ಣುವರ್ಧನದೊರೆಯ ಕಾಲದಲ್ಲಿ ನಡೆಯುತ್ತಿದ್ದಂತಹ ಅನೇಕ ಅಂಗರಂಗಭೋಗ ವೈಭವವನ್ನು ಪುನಃ ನಡೆಯುವಂತೆ ಏರ್ಪಡಿಸಿ, ದೇವಸ್ಥಾನಕ್ಕೆ ಚಿನ್ನದ ಕಳಶವನ್ನಿಡಿಸಿದನು ಮತ್ತು ದೇವಸ್ಥಾನವನ್ನು ಸುಸ್ಥಿತಿಗೆ ತಂದನು. ಆತನು ಕಟ್ಟಿಸಿದ ಗೋಪುರ ಇಂದಿಗೂ ವಿಜಯನಗರ ಕಾಲದ ಒಂದು ಅತ್ಯಂತ ಆಕರ್ಷಣೀಯ ವಾಸ್ತುವಾಗಿದೆ.

ಈ ಶಾಸನ ಸಂಗಮ ಮನೆತನದ ಇಮ್ಮಡಿ ಹರಿಹರರಾಯನ ಹಾಗೂ ಆತನ ದಂಡನಾಥ ಗುಂಡಮಚಮೂಪನ ಚರಿತ್ರೆಗಳನ್ನೂ ವ್ಯಕ್ತಿತ್ವಗಳನ್ನೂ ಬಹಳ ಸುಂದರವಾಗಿ, ವಿಶದವಾಗಿ ವರ್ಣಿಸಿದೆ. ಹಲವು ಬಗೆಯ ಪೂಜೆಗಳ ಉಲ್ಲೇಖನೆ ಮತ್ತು ಅಂಗ, ವಂಗ, ಕಳಿಂಗ, ಕಠಾರ, ಕಾಂಭೋಜ, ಸಿಂಹ್ವಣ, ತುಳುವ, ಮಗಧ, ಮಾಳನ (ವ), ಕೇರಳ, ಒಡ್ಡಿಯ, ಜಿನ, ಜೋನೆಗ, ಅರಿಮಣ, ಕೊಂಕಣ, ಚೇರ, ಚೋಳ, ಪಾಂಡ್ಯ, ವಿದರ್ಭ, ಸೌರಾಷ್ಟ್ರ, ಕುರು, ಮರು, ಪಂಚ, ಪಾಂಚಾಳ, ಮಾಗವಿಯ, ತೆಲುಂಗ, ಪಾರಸಿಕ, ಪಾರ್ಯ್ಯಾತ್ರ, ಕೊಲ್ಲಹಣ, ಕಾಸ್ಮೀರ ಬರ್ಬ್ಬರಭೊಟ್ಟ, ಮಹಾಭೊಟ್ಟ, ಶಾಕ, ಮೂಕ, ಏಕಪಾದ, ಘೋಡಾಮುಖ ಮತ್ತು ಕೆಂದು ಎಂಬ ಹಲವು ಪ್ರದೇಶಗಳ ಉಲ್ಲೇಖನೆ ಭೌಗೋಲಿಕ ಹಾಗೂ ಧಾರ್ಮಿಕ ವಿಷಯಗಳ ಅಧ್ಯಯನದಲ್ಲಿ ಉಪಯುಕ್ತವಾಗಿವೆ.

ಬೇ. 165ನೆಯ ಶಾಸನವೂ ಗುಂಡಪದಂಡನಾಯಕನಿಗೆ ಸಂಬಂಧಿಸಿದೆ. ಇದನ್ನು ಕ್ರಿ. ಶ. 1398 ಆಗಸ್ಟ್ 22 ಗುರುವಾರದಂದು ಬರೆಯಲಾಗಿದೆ. ಮಹಾರಾಜಾಧಿರಾಜ ವೀರಹರಿಹರರಾಯ, ವೀರಬುಕ್ಕರಾಯ, ಮತ್ತು ತೆಪ್ಪದ ನಾಗಣ್ಣ ವೊಡೆಯರು ಕೊಟ್ಟ ಧರ್ಮದತ್ತಿಯನ್ನು ಗುಂಡಪದಂಡನಾಯಕನು ಕಾಪಾಡಬೇಕಿತ್ತು. ಈ ದತ್ತಿಯನ್ನು ಬೇಲೂರ ಸುರೇಂದ್ರತೀರ್ಥರ ಮಠಕ್ಕೆ ಕೊಡಲಾಗಿತ್ತು. ಇವರು ಮಾಧ್ವಯತಿಗಳು; ಆದರೆ ಸದ್ಯ ಇರುವ ಮಾಧ್ವರ ಮಠಗಳ ಯಾವ ಪರಂಪರೆಯಲ್ಲಿಯೂ ಇವರ ಹೆಸರು ಕಾಣದೊರೆಯದು.

ಬೇ. 448, 449 ಮತ್ತು 450ನೆಯ ಶಾಸನಗಳಲ್ಲಿ ವೀರಹರಿಹರರಾಯನ ಕಾಲದಲ್ಲಿ ನಖರೇಶ್ವರದ ವೋರುಂಗಲ್ಲ ದೇವತಿ ಶ್ರೀ ವೀರಭದ್ರದೇವರಿಗೆ ದತ್ತಿಬಿಟ್ಟ ಸಂಗತಿಗಳನ್ನುಬರೆದಿದೆ. 448ರಲ್ಲಿ ಹರಿಹರರಾಯನ ಅಳಿಯ ಪುಲ್ಲಖಂಡ ಸಿದರಾಜನು ಪಂಡಿತನಹಳ್ಳಿ ಹಾಗೂ ಜಾಜಿಗೆಱೆ ಊರುಗಳಲ್ಲಿ ಭೂದಾನವೆಸಗಿದ ಸಂಗತಿಯನ್ನು ಹೇಳಿದೆ. ವೋರುಂಗಲ್ಲ ದೇವತೆಗೆ ದತ್ತಿ ಬಿಟ್ಟ ಸಂಗತಿಯನ್ನು ಗಮನಿಸಿದರೆ ವೋರುಂಗಲ್ಲ ಜೊತೆಗೆ ಪುಲ್ಲಖಂಡ ಸಿದರಾಜನಿಗೂ ಆತ ಹರಿಹರರಾಯನ ಅಳಿಯನಾದುದರಿಂದ ಹರಿಹರರಾಯನಿಗೂ ಒಂದು ಆತ್ಮೀಯ ಸಂಬಂಧವಿದೆಯೆನ್ನುವದರಲ್ಲಿ ಸಂಶಯವಿಲ್ಲ. ಪ್ರಾಯಃ ಈ ಒಂದು ಸಂಬಂಧ ಒಂದನೆಯ ಹರಿಹರ ಹಾಗೂ ಆತನ ಸೋದರ ಬುಕ್ಕರಾಯ ಇವರ ಮೂಲವನ್ನು ವೋರುಂಗಲ್ಲಿನಲ್ಲಿದೆಯೆಂದು ಹೇಳಲು ಕಾರಣವಾಗಿರಬೇಕು; ಅಷ್ಟೇಅಲ್ಲ ನಾವು ಈ ದಿಶೆಯಲ್ಲಿ ವಿಜಯನಗರದ ಅರಸುಮನೆತನಗಳಲ್ಲಿ ಮೊದಲನೆಯದಾದ ಸಂಗಮ ಮನೆತನದ ಮೂಲಚೂಲಗಳ ಬಗೆಗೆ ಇನಿತು ವಿಚಾರ ಮಾಡಬೇಕು. ಏಕೆಂದರೆ ಅವರು ಎಲ್ಲಿಯವರು ಏನು ಎಂಬುದು ಇನ್ನೂ ಇತಿಹಾಸದ ಪುಟಗಳಲ್ಲಿ ಸರಿಯಾಗಿ ನಿಶ್ಚಯವಾಗಿಲ್ಲ. ವಿಜಯನಗರದ ಮೂಲಪುರುಷರು ಎಂದರೆ ಸಂಗಮ ಮನೆತನದವರು ವಸ್ತುತಃ ಚಾಳುಕ್ಯಾನ್ವಯದವರು. ಸಂಗೂರು ಶಾಸನದಲ್ಲಿ ಇದು ಸ್ಪಷ್ಟವಿದೆ :

1 ಸ್ವಸ್ತಿ । ಸಮಸ್ತಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ ಸತ್ಯಾ
2 ಶ್ರಯಕುಳತಿಲಕ ಶ್ರೀ ವೀರಪ್ರತಾಪ ಹರಿಹರಮಹಾರಾಯರ ಕುಮಾರ ದೇವರಾಯ
3 ರು ಸುಖದಿಂ ರಾಜ್ಯಂಗೆಯ್ವುತ್ತಿರ್ದ್ದಲ್ಲು । ....

---

79. (a) M. Winternitz & Subhadra Zha 'History of Indian Literature' Vol. III, p. 140
(b) ತಾಳ್ಳಪಾಕ ಅನ್ನಮಾಚಾರ್ಯ ಜಯಂತಿ ಉತ್ಸವ ಸಂಚಿಕೆ : ವಾಗ್ಗೇಯಕಾರಲೋ ಅನ್ನಮಾಚಾರ್ಯುನಿ ಸ್ಥಾನಮು (ಬಿ. ರಜನೀಕಾಂತರಾವ್) ಪು. 53

80. ಈ ಶಾಸನ ಕ್ರಿ. ಶ. 1900 ಅನಂತರದ್ದಾದುದರಿಂದ ಈ ಸಂಪುಟದಲ್ಲಿ ಸೇರಿಸಿಲ್ಲ. ಇದು ಬೇಲೂರಿನ ಕೇಶವ ದೇವಸ್ಥಾನದಲ್ಲಿ ಕಾರ್ಯಾಲಯದ ಬಾಗಿಲ ಮೇಲಿದೆ.

ಈ ಶಾಸನದ ಕಾಲ ಕ್ರಿ.ಶ. 1407 ಸೆಪ್ಟೆಂಬರ್ 11; ಎಂದರೆ, ವಿಜಯನಗರ ಸ್ಥಾಪನೆಯಾಗಿ ಸುಮಾರು 71 ವರ್ಷದಲ್ಲಿ ಇದು ಹುಟ್ಟಿದೆ. ಆದುದರಿಂದ ಇದರೊಳಗಿನ ವಿಷಯ ಅಂತಹ ಅಪನಂಬಿಗೆಯ ವಿಷಯವಲ್ಲ. ಶಾಸನವು ಸಾಧು (genuine) ದಾಖಲೆ ಎಂದು ವಿದ್ವಾಂಸರಾದ ಪಂಚಮುಖಿಯವರು ಒಪ್ಪಿಕೊಂಡಿರುವುದರಿಂದ[81] ಅದರೊಳಗಿನ ಸಂಗತಿಗಳೂ ಸಾಚಾಸಂಗತಿಗಳು; ಅರ್ಥಾತ್ ಕೂಟ (spurious) ವಿಷಯಗಳಲ್ಲ. ಭಾರತೀಯರಲ್ಲಿ ಅದರಲ್ಲೂ ಹಿಂದೂ ಕುಟುಂಬಗಳಲ್ಲಿ ಯಾವನೇ ಒಬ್ಬ ವ್ಯಕ್ತಿಯು ತನ್ನನ್ನು ಎಂದೂ ಯಾವನದೋ ವಂಶಸ್ಥ ಎಂದು ಹೇಳಿಕೊಳ್ಳುವುದಿಲ್ಲ. ಹಾಗೆ ಹೇಳಿಕೊಳ್ಳುವುದು ಅತ್ಯಂತ ಅಪಮಾನಕರವೆಂದೂ ಅವರು ತಿಳಿದಿದ್ದರು. ಅಂತೆಯೆ 'ಸತ್ಯಾಶ್ರಯಕುಳತಿಳಕ' ಎಂಬ ವಿಶೇಷಣ ಸಂಗಮ ಮನೆತನದ ಮೂಲವನ್ನು ಚಾಳುಕ್ಯವಂಶದಲ್ಲಿ ಕಾಣಬೇಕೆಂದು ನಿರ್ದೇಶಿಸುತ್ತದೆಯಲ್ಲದೆ, ಖಚಿತವಾದ ಸಂಗತಿಯನ್ನು ತಿಳಿಸಿಕೊಟ್ಟಿದೆ. ಕಲ್ಯಾಣದ ಚಾಳುಕ್ಯವಂಶದವರು ಮೊದಲು ಹನುಮಕೊಂಡದಲ್ಲಿದ್ದರು. ಚಾಳುಕ್ಯಾನ್ವಯದ ಇಮ್ಮಡಿಭೀಮನು ರಾಷ್ಟ್ರಕೂಟ ನೃಪತುಂಗ ಚಕ್ರವರ್ತಿಯ (ಒಂದನೆಯ ಅಮೋಘವರ್ಷ, ಕ್ರಿ.ಶ. 814-878) ಮಾಂಡಲಿಕನಾಗಿದ್ದನು[82]. ಈತನ ವಂಶಸ್ಥರು ಹನುಮಕೊಂಡದ ಸುತ್ತಮುತ್ತಲಲ್ಲಿ ಇದ್ದರೆಂದರೆ ತಪ್ಪಾಗದು[83]. ಪುಲ್ಲಖಂಡ ಸಿದರಾಜನ ವಂಶಸ್ಥರು ಮತ್ತು ಆತನ ಮಾವನಾದ ವೀರಹರಿಹರರಾಯನ ವಂಶಸ್ಥರು ವೋರುಂಗಲ್ಲ ಕಡೆಯಿಂದ ಬಂದವರೆಂದರೆ ಆಶ್ಚರ್ಯವನ್ನು ಪಡಬೇಕಿಲ್ಲ. ಈ ಪ್ರಶಸ್ತಿ ಪಾರಂಪರಿಕ ಎಂಬುದನ್ನು ಕೆಳದಿನೃಪ ವಿಜಯವೂ ದಾಖಲಿಸಿದೆ[84]. ಚಾಲುಕ್ಯರ ಆಡಳಿತಕ್ಕೂ ಮತ್ತು ವಿಜಯನಗರದ ಸಂಗಮ ಮನೆತನದ ಆಡಳಿತ ಆರಂಭವಾಗುವುದಕ್ಕೂ ಮಧ್ಯೆ ಉತ್ತರದಲ್ಲಿ ಸೇವುಣರು ಮತ್ತು ದಕ್ಷಿಣದಲ್ಲಿ ಹೊಯ್ಸಳರು ಚಕ್ರವರ್ತಿಗಳೆಂದೇ ಆಳಿದರು. ಹೀಗಾಗಿ ಸಂಗಮ ಮನೆತನಕ್ಕೆ ನೇರವಾಗಿ ಚಾಳುಕ್ಯರ ಬಿರುದಾವಳಿ ಬರಲಿಲ್ಲ. ಹೊಯ್ಸಳರಾಗಲಿ ಅತ್ತ ಸೇವುಣರಾಗಲಿ ತಮ್ಮನ್ನು 'ಸತ್ಯಾಶ್ರಯಕುಳತಿಳಕ' ಎಂದು ಹೇಳಿಕೊಂಡಿಲ್ಲ. ಅರ್ಥಾತ್ ಸಂಪ್ರದಾಯ ಸ್ವರೂಪದಲ್ಲಿ ಈ ಬಿರುದಾವಳಿ ಸಂಗಮ ಮನೆತನಕ್ಕೆ ಬರಲಿಲ್ಲ. ಅವನ್ನು ಅವರು ಬೇಕಂತಲೆ ಆರಿಸಿಕೊಂಡರು. ಇನ್ನು ಅವರು ಆರಿಸಿಕೊಂಡ ವರಾಹಲಾಂಛನವೂ ಅವರನ್ನು ಚಾಳುಕ್ಯ ಮನೆತನದವರೆಂದೇ ಸೂಚಿಸುತ್ತದೆ.

ಬೇ. 10 ಇಮ್ಮಡಿ ಬುಕ್ಕರಾಯನ ಮನೆಯ ಪ್ರಧಾನನಾದ ಹೆಗ್ಗಪ್ಪನ ಪುತ್ರ ಮಲ್ಲರಸನು ಕ್ರಿ.ಶ. 1405 ನವೆಂಬರ್ 4 ರಂದು ದಕ್ಷಿಣ ವಾರಣಾಸಿಯಾದ ವೇಲಾಪುರದ ಶ್ರೀ ಚೆಂನಕೇಶವನಾಥ ದೇವರಿಗೆ ಚಿಂನತೊಡಹದ ಧವಳಶಂಖವನ್ನು ಸಮರ್ಪಿಸಿದನೆಂದು ತಿಳಿಸಿದೆ. ಈ ಶಾಸನದಲ್ಲಿ ಬುಕ್ಕರಾಯನು 'ವಿಷ್ಣುವರ್ಧನ ಪ್ರತಾಪ' ಎಂಬ ಬಿರುದನ್ನು ತಳೆದಿದ್ದಾನೆ. ಇದು ಗಮನಾರ್ಹ. 'ವಿಷ್ಣುವರ್ಧನ' ಎಂಬ ಹೆಸರು ಚಾಳುಕ್ಯ ಆರನೆಯ ವಿಕ್ರಮಾದಿತ್ಯನಿಗೆ ಇದ್ದಿತು. ಚಾಳುಕ್ಯರಲ್ಲಿ ಈ ಹೆಸರು ಹಲವು ರಾಜರಿಗಿದೆ.

ಸಪು. 54, ಒಂದನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ಕ್ರಿ. ಶ. 1413 ಅಕ್ಟೋಬರ್ 25 ರಂದು ಬರೆಯಲಾಗಿದ್ದು ತೆಪ್ಪದ ಈಶ್ವರದೇವನ ಮೊಮ್ಮಗನಾದ ಮಾದಂಣನು ತಂಮ ತಾಯಿ ಗೌರಾದೇವಿಯರಿಗೆ ಪುಣ್ಯವುಂಟಾಗಬೇಕೆಂದು ತಮಗೆ ನಾಯಕತನಕೆ ಕೊಟ್ಟ ಗೋದುಮಲೆನಾಡಿನಲ್ಲಿಯ ಬಿಕ್ಕಿನಹಳ್ಳಿಯನ್ನು ದತ್ತಿಕೊಟ್ಟನೆಂದಿದೆ. ಈ ಶಾಸನ ಹಾಗೂ ಬೇ. 519 ಮತ್ತು ಆಲೂರು–41ನೆಯ ಶಾಸನ[85] ಇತ್ಯಾದಿಗಳಿಂದ ಈ ಮಾದಂಣನ ವಂಶವೃಕ್ಷವನ್ನು ಹೀಗೆ ನಿರೂಪಿಸಬಹುದು. ಬುಕ್ಕಣ್ಣವೊಡೆಯರ "ಹಿರಿಯ ಕೊಮಾರನೆಂದೆನ್ನಿಸಿದ" 'ಖಂತಿಕಾಜಿರಾಯರಗಂಡ' ತೆಪ್ಪದ ನಾಗಂಣ ಮತ್ತು ಆತನಿಂದ ಅನಂತರದಲ್ಲಿ ಬಂದ ಒಡೆಯರು :

(ಮುಂದುವರೆದಿದೆ)

---

[81] ಎ.ಇಂ.ಸಂ. 23,ಪು. 182—85

[82] S.I.I. Vol. XX, No. 19

[83] ಖಾಜಿಪೇಟೆಯಲ್ಲಿಯ ದರ್ಗಾಶಾಸನ ತುಂಬ ಗಮನಾರ್ಹವಾದ ದಾಖಲೆಯಾಗಿದೆ–Inscriptions of Andhrapradesh : Warangal District Insp. No. 1 pp. 1–2

[84] ಕೆಳದಿನೃಪವಿಜಯ (ಪ್ರ. ಸಂ. ಆರ್. ಶಾಮಶಾಸ್ತ್ರಿ) ಪು. 19 (1973)

[85] ಎ. ಕ. ಸಂ. 8 (1984) ಆಲೂರು–41, ಪು. 451–457

ತೆಪ್ಪದ ನಾಗಂಣವೊಡೆಯರು — ಚಂದಪವೊಡೆಯರು
ತೆಪ್ಪದ ಈಶ್ವರದೇವ
ಹೆಂ. ವೀರಾದೇವಿ
ತಿಪ್ಪನೃಪಾಲ — ಚಿಕ್ಕ ವಿಜಂಣ ಹೆಂ. ಗೌರಾದೇವಿ
ಮಾದಂಣ

ಬೇ. 519ರಲ್ಲಿ ತೆಪ್ಪದ ನಾಗಂಣವೊಡೆಯನಿಗೆ ಉಂಬಳಿ ಅಥವಾ ನಾಯಕತನ ಭೂಮಿಯು ದೊರಕಿದುದು ಸ್ಪಷ್ಟವಿದೆ.

ಬೇ. 90 ಮತ್ತು ಸಪು. 56 ಈ ಎರಡು ಶಾಸನಗಳು ದೇವರಾಯನ ಆಳ್ವಿಕೆಯ ಅವಧಿಯಲ್ಲಿ ಮಹಾಪ್ರಧಾನ ಜೈಚೆಯ ದಂಣಾಯಕನು ಬೇಲೂರ ದೇವಸ್ಥಾನದಲ್ಲಿ ಕೃತ್ತಿಕಾಮಹೋತ್ಸವ (ಕಾರ್ತಿಕದ ಹಬ್ಬ)ಕ್ಕೆಂದು ದೀಪಸ್ತಂಭವನ್ನು ಕಟ್ಟಿಸಿದುದನ್ನೂ ಮತ್ತು ಶ್ರವಣಬೆಳಗೊಳದ ಗೊಮ್ಮಟೇಶ್ವರನಿಗೆ ಮೆಪಿನಾಡ 'ಬೆಳವಿ' ಗ್ರಾಮವನ್ನು ದೇವರಾಯರ ನಿರೂಪದಿಂದ ಬಿಟ್ಟುದನ್ನೂ ತಿಳಿಸಿವೆ.

ಬೇ. 576 ಕ್ರಿ.ಶ. 1445ರಲ್ಲಿ ಬರೆಯಲಾಗಿದ್ದು ಪ್ರೌಢದೇವರಾಯನವರೆಗಿನ ಸಂಗಮ ಮನೆತನದ ಒಂದು ವಂಶವೃಕ್ಷದ ವಿವರವನ್ನು ಹೀಗೆ ಕೊಟ್ಟಿದೆ :

ಸಂಗಮ
ಬುಕ್ಕರಾಯ
ಹರಿಹರ
ಹೆಂ. ದೇವಾಂಬಿಕಾ
(ಪ್ರತಾಪ) ದೇವರಾಯ
ಹೆಂ. ದೇವಾಂಬಿಕಾ
ವಿಜಯಭೂಪತಿ
ಹೆಂ. ನಾರಾಯಣಾಂಬಿಕಾ
ದೇವರಾಯ
ಹೆಂ. ಬಿಜ್ಜಲಾದೇವಿ
ಪ್ರೌಢದೇವೇಶ

ನಾಲ್ಕು ಜನ ರಾಣಿಯರ ಹೆಸರುಗಳು ಇಲ್ಲಿ ಬಂದಿರುವುದು ಗಮನಾರ್ಹವಾದ ಸಂಗತಿ.

ಬೇ. 172 ಕ್ರಿ.ಶ. 1512ರಲ್ಲಿ ಬರೆಯಲಾಗಿದ್ದು ಕೃಷ್ಣದೇವರಾಯನ ಆಳ್ವಿಕೆಯ ಅವಧಿಗೆ ಸಂಬಂಧಿಸಿದೆ. ಇದು ಕೃಷ್ಣದೇವರಾಯನವರೆಗೆ ತುಳುವ ಮನೆತನದ ಚರಿತ್ರೆಯನ್ನು ನಿರೂಪಿಸಿದೆ. ಕ್ರಿ.ಶ. 1515ರಲ್ಲಿ ಬರೆಯಲಾದ ಹಾಸನದ ತಾಮ್ರಶಾಸನವು[86] (ಒಂದು ಬಿಟ್ಟುಹೋದ ಪದ್ಯವನ್ನು ಬಿಟ್ಟರೆ) ಇದರ ನಕಲೇ ಆಗಿದೆ. ದತ್ತಿಕೊಟ್ಟ ಊರುಗಳು ವಿವರಗಳು ಬೇರೆ ಬೇರೆ ಆಗಿವೆ. ಈ ಎರಡೂ ಶಾಸನಗಳಲ್ಲಿ ಇರುವ ಮುಖ್ಯವಾಗಿ ಇದುವರೆಗೆ ಇತಿಹಾಸದ ಅಭ್ಯಾಸಿಗಳಿಗೆ ಗಮನಕ್ಕೆ ಬಾರದ ವಸ್ತುವೆಂದರೆ ತುಳುವ ಮನೆತನದ ಇತಿಹಾಸವು ತಿಂಮಭೂಪತಿ ಹಾಗೂ ಆತನ ರಾಣಿ ದೇವಕಿ ಇವರಿಂದ ಆರಂಭವಾಗಬೇಕಿದ್ದುದು ಆಗಿಲ್ಲ ಎಂಬುದು. ಈ ಎರಡು ಶಾಸನಗಳಿಂದ ತಿಳಿದುಬರುವ ವಂಶಾವಳಿಯ ವಿವರಗಳು ಹೀಗಿವೆ :

ತುಳುವ ರಾಜರು ಯದುವಂಶದವರು, ಅದರಲ್ಲಿ :

---

[86] ಎ.ಕ.ಸಂ. 8 (1984) ಹಾ–8. ಪು. 218–222



ಈ ಕೃಷ್ಣದೇವರಾಯನ ಸೇವಕಶ್ರೇಷ್ಠನಾದ (ಮಂತ್ರಿಯಾದ) ತಿಂಮನಿಗೆ 'ಜಕ್ಕನೃಪ' ಎಂಬ ಮಗನಿದ್ದ ಸಂಗತಿಯನ್ನೂ ಆತನೂ ಕೃಷ್ಣದೇವರಾಯನ ಸೇವಕಶ್ರೇಷ್ಠವ್ಯಕ್ತಿಯಾಗಿದ್ದನೆಂಬುದನ್ನೂ ಬೇ. 93ನೆಯ ಶಾಸನವು ದಾಖಲಿಸಿದೆ. ಆತ ಬೇಲೂರ ದೇವಾಲಯದಲ್ಲಿ ಗರುಡಗಂಬವನ್ನು ಸ್ಥಾಪಿಸಿದನು. ಈ ಜಕ್ಕಣ್ಣನ ಪುತ್ರ ಬಸವಪ್ಪನಾಯಕನು (ಬೇ. 159) ತಮ್ಮ ತಂದೆ ತಾಯಿ ಹಾಗೂ ಕೃಷ್ಣಪ್ಪನಾಯಕರಿಗೆ ಅನೇಕ ಧರ್ಮಕಾರ್ಯದ ಪುಣ್ಯವಾಗಬೇಕೆಂದು ತೆಪ್ಪಕೊಳವನ್ನು ಮತ್ತು ವಸಂತಮಂಟಪವನ್ನು ಕಟ್ಟಿಸುವುದಲ್ಲದೆ ತೆಪ್ಪತಿರುನಾಳಿಗೂ ಉತ್ಸವಕ್ಕೂ ನಿತ್ಯ ನೈವೇದ್ಯಕ್ಕೂ 40 ಬ್ರಾಹ್ಮಣರ ಊಟಕ್ಕೂ ತಮಗೆ ಕೃಷ್ಣದೇವರಾಯರು ಕೊಟ್ಟ ವಸ್ತಾರೆಸೀಮೆಯ ನಾಯಕತನದ ಭೂಭಾಗದ ದೇವಣಿಗೆನಾಡಿನ ನಾರಾಯಣಪುರ ಮತ್ತು ಹಲುಮಿಡಿ ಗ್ರಾಮಗಳ ಸರ್ವ ಆದಾಯವನ್ನು ದಾನದತ್ತಿಯಾಗಿ ಕೊಟ್ಟನು. ಈ ನಾಯಕರ ವಂಶವಿವರ ಬೇ. 159 ಮತ್ತು 93ರ ಪ್ರಕಾರ ಹೀಗಿರುತ್ತದೆ :



ವಸ್ತಾರೆ ಊರು ಈಗ ಚಿಕ್ಕಮಗಳೂರು ತಾಲ್ಲೂಕಿನಲ್ಲಿದೆ. ಬೇ. 182, ಈ 159ರ ನಕಲೇ, ಅಂದರೆ ಇವರೆಡೂ ಒಂದೇ ಆಗಿವೆ. ಈ ಶಾಸನಗಳಲ್ಲಿ ಬರುವ 'ಹಾವಣಿಗೆನಾಡು' 'ದೇವಣಿಗೆನಾಡು' ಮತ್ತು ಬೇರೆಡೆ ಬರುವ 'ಜೇವಣಿಗೆನಾಡು' ಒಂದೇ ಭೂಭಾಗವನ್ನು ಸೂಚಿಸುವ ಶಬ್ದಗಳಾಗಿವೆ. ಬೇಲೂರ ಚೆನ್ನಕೇಶವ ದೇವಾಲಯದ ಅಮೃತಪಡಿಗಳಿಗೆ ಬಿಟ್ಟ ಭೂಭಾಗ ಎಂಬುದು ಈ ಶಾಸನಗಳಿಂದ ಸ್ಪಷ್ಟವಿದೆ.

ಬೇ. 11 ಕ್ರಿ. ಶ. 1522ರಲ್ಲಿ ಬರೆಯಲಾಗಿದ್ದು ಕೃಷ್ಣದೇವರಾಯಮಹಾರಾಯನ 'ಕೊಮಾರ' ಎಂದು ಕರೆಯಲ್ಪಟ್ಟ ಮಂಚಪ್ಪನಾಯಕನ ಪುತ್ರ ಸಿಂಗಪನಾಯಕನು ಗೋಣಿಯಬೀಡಿನ ಸೀಮೆಯ ತಮ್ಮ ನಾಯಕತನಕ್ಕೆ ಸಲ್ಲುವ ಗಂಗಾವರ, ಮಲ್ಲವಳ್ಳಿ ಮತ್ತು ಕೂಸಾವರ ಎಂಬ ಮೂರು ಗ್ರಾಮಗಳ ಸುವರ್ಣಾದಾಯ ಹಾಗೂ ಭತ್ತಾದಾಯಗಳನ್ನು ಚೆಂನಿಗರಾಯನ ಅಮೃತಪಡಿಗೆ ಧಾರೆಯನೆರದು ಕೊಟ್ಟನು. ಇದು ಬೇಲೂರು ಮತ್ತು ವಸ್ತಾರೆ ನಾಯಕರ ನಾಯಕತನದ ಭೂಮಿಯಿಂದ ಬೇರೆ ಎನ್ನುವುದು ಗಮನಾರ್ಹ.

ಬೇ. 455, ಕ್ರಿ.ಶ. 1529 ಆಗಸ್ಟ್ 9ರಂದು ಬರೆಯಲಾಗಿದ್ದು ಕೃಷ್ಣದೇವರಾಯನಿಗೆ ಪುಣ್ಯವಾಗಬೇಕೆಂದು ಚೆಂನಪಂಣನೆಂಬ ವ್ಯಕ್ತಿ ದತ್ತಿಬಿಟ್ಟ ಸಂಗತಿಯನ್ನು ತಿಳಿಸಿ ಕೃಷ್ಣದೇವರಾಯನ ಆಳ್ವಿಕೆಯ ಕಾಲವನ್ನು ಗುರುತಿಸುವಲ್ಲಿ ಸಹಾಯಕವಾಗಿದೆ. ಅಚ್ಯುತರಾಯನು ಕ್ರಿ.ಶ. 1529ರಲ್ಲೇ ಪಟ್ಟಕ್ಕೆ ಬರುವುದರಿಂದ ಆ ತೇದಿಯು ಇದರ ಅನಂತರದಲ್ಲಿ ಎನ್ನುವುದರಲ್ಲಿ ಸಂದೇಹವಿಲ್ಲ.

ಬೇ. 476 ಕ್ರಿ.ಶ. 1535ರಲ್ಲಿ ಬರೆಯಲಾಗಿದ್ದು ಮಹಾಮಂಡಲೇಶ್ವರ ರಘುಪತಿರಾಜಮಹಾಅರಸುಗಳು ವೇಲಾಪುರದಲ್ಲಿ ಧರ್ಮಸತ್ರ ನಡೆಯಿಸಿಕೊಂಡು ಹೋಗುವುದಕ್ಕೆ ಖಂಡೇನಹಳ್ಳಿ ಮತ್ತು ರಾಮಸೋಮನಹಳ್ಳಿ ಎಂಬ ಎರಡು ಹಳ್ಳಿಗಳನ್ನು ವೇಲಾಪುರದ ಚೆನ್ನಕೇಶವಸ್ವಾಮಿಗೆ ಅರ್ಪಿಸಿದುದನ್ನು ದಾಖಲಿಸುತ್ತದೆ. ಈ ರಘುಪತಿ ಅರಸರು ಮಹಾನಂದಿಯ

(ನಂದ್ಯಾಲದ ಬಳಿಯ ಕ್ಷೇತ್ರ)ವರು ಮತ್ತು ಮಹಾಮಣ್ಡಲೇಶ್ವರ ತಿರುಮಲಯ ಮಹಾಅರಸುಗಳ ಅಳಿಯ ಎಂಬುದೂ ಹಾಗೆಯೆ ಇವರು ಹಾಸನದ ಸೀಮೆಗೆ ನಾಯಕರಾಗಿದ್ದರೆಂಬುದೂ ಗಮನಾರ್ಹ. ಪೂರ್ವೋಕ್ತ ಎರಡು ಹಳ್ಳಿಗಳೂ ಅವರ ನಾಯಕತನಕ್ಕೆ ಸಲುವ ಹಾಸನದ ಸೀಮೆಯ ಇಬೀಡಿನ ಗ್ರಾಮಕ್ಕೆ ಸಂಬಂಧಿಸಿದ್ದುವು. 'ನಂದ್ಯಾಲ' ಹಾಗೂ 'ಮಹಾನಂದಿ' ಇವೆರಡೂ ಪದಗಳು ಒಂದೇ ಅರಸು ಮನೆತನವನ್ನು ಸೂಚಿಸುತ್ತವೆ; ಏಕೆಂದರೆ ಇವೆರಡೂ ಒಂದೇ ಪ್ರದೇಶದಲ್ಲಿ ತುಂಬ ಹತ್ತಿರದಲ್ಲಿ ಇರುವ ಸ್ಥಳಗಳು. ನಂದ್ಯಾಲ, ಮಹಾನಂದಿಗೆ ದ್ವಾರವೆಂದರೂ ಸರಿಹೋಗುತ್ತದೆ. ನಂದ್ಯಾಲ ಅರಸರ ಶಾಸನ ಎ.ಕ. ಸಂಪುಟ–8ರಲ್ಲಿ ಬಂದಿದೆ[87].

ಬೇ. 38ನ್ನು ಕ್ರಿ.ಶ. 1556ರಲ್ಲಿ ಬರೆಯಲಾಗಿದೆ. ಸದಾಶಿವರಾಯನ ಅಧಿರಾಜತ್ವದ ಉಲ್ಲೇಖವಿದ್ದರೂ ರಾಮರಾಜಯ್ಯ ತಿರುಮಲರಾಜಯ್ಯನವರ ನಿರೂಪದ ಮೇರೆಗೆ ಬೇಲೂರಲ್ಲಿ ಸಮಸ್ತ ಹಲರೂ ಮತ್ತು ಪಾಂಚಾಳದವರೂ ತಮ್ಮ ಮಧ್ಯೆ ಬಂದ ವ್ಯಾಜ್ಯವನ್ನು ಬಗೆಹರಿಸಿ ಕೊಂಡರು. ಆ ನ್ಯಾಯವನ್ನು ಬಗೆಹರಿಸಲು ಊರಿನ 88ಜನ ಶ್ರೀ ವೈಷ್ಣವ ಮಹಾಜನಂಗಳು ಮತ್ತು ಇಬ್ಬರು ಅಧಿಕಾರಿಗಳು ಸೇರಿದ್ದರೆಂಬುದು ಗಮನಾರ್ಹ.

ಬೇ. 442 ಕ್ರಿ.ಶ. 1559ರಲ್ಲಿ ಬರೆಯಲಾಗಿದ್ದು ಜಾವಗಲ್ಲಸೀಮೆಯ ಭೂಭಾಗವನ್ನು ರಾಮಪ್ಪಯ್ಯ ಎನ್ನುವವರಿಗೆ ಆವುಜಮಾಗಳಿ (ಆವುಜಮಾಗಣಿ=ಮೃದಂಗ ಬಾಜಿಸುವುದಕ್ಕೆ ಕೊಟ್ಟ ಉಂಬಳಿ) ಎಂದು ದತ್ತಿಕೊಟ್ಟದನ್ನು ದಾಖಲಿಸಿದೆ.

ಬೇ. 66, 109 ಮತ್ತು 219 ಮೂರು ಶಾಸನಗಳು ಶ್ರೀರಂಗರಾಯರ (2) ಆಡಳಿತಕ್ಕೆ ಸಂಬಂಧಪಟ್ಟಿದ್ದು ಬೇಲೂರ ಚೆಂನಕೇಶವಸ್ವಾಮಿಗೆ ದತ್ತಿಗಳನ್ನು ಎರಕೃಷ್ಣಪ್ಪ ನಾಯಕನ ಮಗ ವೆಂಕಟಾದ್ರಿನಾಯಕನು ಕೊಟ್ಟುದನ್ನು ದಾಖಲಿಸಿದೆ. ಕ್ರಿ.ಶ. 1583ರಲ್ಲಿ ಬರೆಯಲಾಗಿರುವ ಬೇ. 219ರ ಪ್ರಕಾರ ಶ್ರೀರಂಗರಾಜನು ಪೆನುಗೊಂಡೆಯಿಂದ ಸಾಮ್ರಾಜ್ಯವನ್ನು ಆಳುತ್ತಿದ್ದನೆಂದು ತಿಳಿಯುತ್ತದೆ. ಇದರಲ್ಲಿ ವೆಂಕಟಾದ್ರಿನಾಯಕನನ್ನು ಕೃಷ್ಣಪ್ಪನಾಯಕನ ಮಗನೆಂದೂ ಮತ್ತು ಆ ಎರಕೃಷ್ಣಪ್ಪನಾಯಕನು ಪೋತಪನಾಯಕನ 'ಪೌತ್ರ' ಎಂದು ಹೇಳಿದೆ. ಬೇ. 66ರಲ್ಲಿ ಕೃಷ್ಣಪ್ಪನಾಯಕನನ್ನು ಪೋತಪನಾಯಕನ 'ಪುತ್ರ' ಎಂದು ಬರೆದಿದೆ. ಆದರೆ ನಮಗೆ ಬೇರೆಯ ಅನೇಕ ಶಾಸನಗಳಿಂದ ಎರಕೃಷ್ಣಪ್ಪನಾಯಕನ ತಂದೆಯು ಬಯ್ಯಪ್ಪನಾಯಕನೆಂದು ತಿಳಿದು ಬಂದಿದೆ; ಕಾರಣ 'ಪೋತಪನಾಯಕನು' ಅವನ ತಂದೆ ಆಗಲು ಸಾಧ್ಯವಿಲ್ಲ. 'ಪೌತ್ರ' ಎಂಬುದನ್ನು ಸ್ವೀಕರಿಸಿದರೆ ಪೋತಪನಾಯಕನು 'ತಾತ' ಆಗುತ್ತಾನೆ. 'ವಸುಧಾರೆ' ಎಂಬುದನ್ನು ಇವರಿಗೆ ನಾಯಕತನಕ್ಕೆ ಪಾಲಿಸಿದುದು ಇಲ್ಲಿ ಗಮನಾರ್ಹ.

ನಾಲ್ವಡಿ ಶ್ರೀರಂಗರಾಯನ ಆಳ್ವಿಕೆಗೆ ಸಂಬಂಧಪಟ್ಟಂತೆ 9 ಶಾಸನಗಳಿವೆ. ಇವುಗಳಲ್ಲಿ ಬೇ. 176 ಬಹಳ ಮಹತ್ವದ್ದಾಗಿದೆ. ಇದು ಈ ರಾಜನ ವಂಶವೃಕ್ಷವನ್ನು ಖಚಿತಖಚಿತವಾಗಿ ನಿರ್ಧರಿಸಿಕೊಟ್ಟಿದೆ. ಇದರ ಪ್ರಕಾರ ವಂಶದ ವಿವರ ಹೀಗಿದೆ:


ವೆಂಕಟೇಶಭೂಪಾಲ (ವೆಂಕಟಾದ್ರಿ)
ಹೆಂ. ಶ್ರೀರಂಗಮಾಂಬಾ*
ಶ್ರೀರಂಗ* (2)
(1578–1586)
ರಾಮರಾಜು
ವೆಂಕಟಪತಿ (1)
(1586–1614)
ಗೋಪಾಲರಾಯ*
ಹೆಂ.ವೆಂಗಮಾಂಬಾ
ತಿರುಮಲ
ಶ್ರೀರಂಗ (3)
(1614ರಲ್ಲಿ ಕೊಲ್ಲಲ್ಪಟ್ಟನು)
ಶ್ರೀರಂಗ (4)*
(1642–1646)
(ಈತ ಕ್ರಿ.ಶ. 1681ರವರೆಗೆ ಬದುಕಿದ್ದನು)
ರಾಮದೇವ
(1617–1632)

ಈ ಶ್ರೀರಂಗರಾಯನು ಗೋಪಾಲರಾಜನ ಮಗನೆಂದು ತಿಳಿದುಬರುತ್ತದೆ; ಬೇ. 173, 174, 175, 177 ಮತ್ತು 178ನೆಯ ಶಾಸನಗಳು ಈ ಸಂಗತಿಯನ್ನು ಸಮರ್ಥಿಸುತ್ತವೆ.

---

[87] ಎ.ಕ.ಸಂ. 8 (1984) ಹೊನ–17, ಪು. 11

* ಈ ಗುರುತು ಶಾಸನದಲ್ಲಿ ಬಂದಿರುವ ನೇರ ವಂಶಾವಳಿಯನ್ನು ಸೂಚಿಸುತ್ತದೆ.

ಕೊಂಗಾಳ್ವರು

ಕೊಂಗಾಳ್ವರು ಕ್ರಿ.ಶ. 9ನೆಯ ಶತಮಾನದಲ್ಲಿಯೆ ಇದ್ದರೆಂದೂ ಮತ್ತು ಅವರ ಆನೆಗಳನ್ನು ಒಂದನೆಯ ಬೂತುಗನೆಂಬ ಗಂಗ ದೊರೆಯು ರಣದಲ್ಲಿ ಗೆದ್ದುಕೊಂಡು ಬಂದನೆಂದು ನಂಜನಗೂಡು[88] ಹಾಗೂ ಚಾಮರಾಜನಗರದ[89] ಶಾಸನಗಳಿಂದ ತಿಳಿದು ಬಂದಿದೆ. ಈ ಸಂಪುಟದಲ್ಲಿ ಇವರ ಆಳ್ವಿಕೆಗೆ ಸಂಬಂಧಪಟ್ಟಂತೆ ಒಂದೇ ಒಂದು ಶಾಸನವಿದೆ-ಸಪು. 67. ಇದರಲ್ಲಿ ತೇದಿಯ ವಿವರಗಳಿಲ್ಲ. ಇಲ್ಲಿ ಬರುವ ' ಮಂಗಲದುದ್ದ' ರಾಜನನ್ನು ಇದುವರೆಗೆ ಉಪಲಬ್ಧವಾಗಿರುವ ಕೊಂಗಾಳ್ವ ದೊರೆಗಳಲ್ಲಿ ಯಾರೊಂದಿಗೆ ಸಮೀಕರಿಸಬೇಕೆಂಬುದು ಒಂದು ದೊಡ್ಡ ಸಮಸ್ಯೆ. 'ದುದ್ದಮಲ್ಲ' ಎಂಬ ಹೆಸರಿನ ರಾಜರು ಕೊಂಗಾಳ್ವರಲ್ಲಿ ಇಬ್ಬರಿದ್ದಾರೆ. ವಿಷ್ಣುವರ್ಧನ ಹೊಯ್ಸಳದೇವನ ಪಿರಿಯರಸಿ ಚಂದಲದೇವಿಯು ಪೃಥ್ವೀ ಕೊಂಗಾಳ್ವದೇವನ ಮಗಳಾಗಿದ್ದು 'ದುದ್ದಮಲ್ಲ' ಎಂಬ ತಮ್ಮನನ್ನು ಹೊಂದಿದ್ದಳು[90]. ಹೊಳೇನರಸೀಪುರ ತಾಲೂಕಿನ ಎರಡು ಶಾಸನಗಳಲ್ಲಿ ಕ್ರಿ.ಶ. 1171 ಹಾಗೂ ಕ್ರಿ.ಶ. 1177ರಲ್ಲಿ ಬರೆಯಲಾದುವುಗಳಲ್ಲಿ 'ವೀರದುದ್ದ ಕೊಂಗಾಳ್ವ' ಎಂಬರಾಜನ ಉಲ್ಲೇಖವಿದೆ[91]. ಪ್ರಸ್ತುತ ಶಾಸನದಲ್ಲಿಯ 'ಮಂಗಲದುದ್ದ' ಎಂಬುದು ವಾಸ್ತವದಲ್ಲಿ 'ಕೊಂಗಲದುದ್ದ' ಆಗಿರಲು ಸಾಧ್ಯ. ಏಕೆಂದರೆ ವಕ್ರವಲನದ ಪ್ರಾಚೀನ 'ಮ' (cursive *Ma*) ಮತ್ತು 'ಕೊ' ಎಂಬ ಅಕ್ಷರಗಳು ರೂಪಸಾದೃಶ್ಯವನ್ನು ಹೊಂದಿದ್ದು ವ್ಯತ್ಯಯಕ್ಕೆ ಎಡೆ ಕೊಟ್ಟುದ್ದುಂಟು[92].

ಚಂಗಾಳ್ವರು

ಪ್ರಸ್ತುತ ಸಂಪುಟದಲ್ಲಿ ಚಂಗಾಳ್ವ ಮನೆತನಕ್ಕೆ ಸಂಬಂಧಪಟ್ಟಂತೆ ಎರಡು ದಾಖಲೆಗಳಿವೆ. ಪರಮೇಶ್ವರನಾಯಕ ಎಂಬ ಮಹಾವಡ್ಡಬ್ಯವಹಾರಿಯು ಕ್ರಿ.ಶ. 1280ರಲ್ಲಿ ಮಹಾಮಂಡಲೇಶ್ವರ ಕುಲೋತ್ತುಂಗ ಚೋಳ ಶ್ರೀ ವೀರ ಚಂಗಾಳುವ ಮಲಿದೇವರಸರಿಂದ 'ಕಣ್ಣಮಂಗಲ' ಎಂಬ ಗ್ರಾಮವನ್ನು ಧಾರಾಪೂರ್ವಕವಾಗಿ ಪಡೆದು ನಾರಣಪುರದ ದೇವತೆಗಳಿಗೆ ದತ್ತಿಕೊಟ್ಟುದನ್ನು ದಾಖಲಿಸಿದೆ—ಬೇ. 234. ಬೇ. 233 ಕೂಡ ಇದೇ ಬಗೆಯ ಇನ್ನೊಂದು ದಾಖಲೆಯಾಗಿದೆ. ಆದರೆ ಗ್ರಾಮಗಳು ಮಾತ್ರ ಬೇರೆಯಾಗಿವೆ. ಇದರಲ್ಲಿನ ವಿವರಗಳು ಹೆಚ್ಚಾಗಿ ಅಳಿಸಿಹೋಗಿವೆ.

ಅಜಲರು

ಕ್ರಿ.ಶ. 1428 ಜನವರಿ 28ರಂದು ಬರೆಯಲ್ಪಟ್ಟ ಬೇ. 9ನೆಯ ಶಾಸನವು ಅಜಲ ವಂಶವನ್ನು ನಿರ್ದೇಶಿಸುವ ಒಂದು ದಾಖಲೆಯಾಗಿದೆ. 'ಆಳುವ ಪುರವರಾಧೀಶ್ವರ' 'ಮಂಡಳಿಕ ಸೋಮನಾಥ' ಎಂಬ ಬಿರುದುಗಳನ್ನು ಧರಿಸಿದ ಬಿರುಮಂಣರಸನು ಚೆಂನಕೇಶವನಾಥದೇವರಿಗೆ ಉಕ್ತ ತಿಥಿಯಂದು 100 ಮೂಡೆ ಭತ್ತವನ್ನು ಧರ್ಮವಾಗಿ ಕೊಟ್ಟುದನ್ನು ಈ ಶಾಸನ ವಿವರಿಸಿದೆ.

ತಗರೆ ನಾಯಕರು

ಈ ನಾಯಕ ಮನೆತನಕ್ಕೆ ಸಂಬಂಧಪಟ್ಟಂತೆ ಸದ್ಯ ಐದು ಶಾಸನಗಳು ಉಪಲಬ್ಧವಾಗಿವೆ. ಇವರಿಗೆ ತಗರೆನಾಡವೇಂಠೆಯ ಭೂಭಾಗವು ಅಮರದಣ್ಣಾಯಕತನವಾಗಿ ಕೊಡಲ್ಪಟ್ಟಿತೆಂದು ಬೇ. 547 ಹಾಗೂ ಬೇ. 548ರಿಂದ ತಿಳಿದುಬಂದಿದೆ. ಈ ಮನೆತನದ ಅರಸರಲ್ಲಿ ಲಖುಂಣನಾಯಕ ಬಹಳ ಪ್ರಸಿದ್ಧ ವ್ಯಕ್ತಿ. ಈತನ ತಂದೆ ಮಧುವರಸ. ಬೇ. 139ನೆಯ ಶಾಸನವು ಲಖುಂಣನಾಯಕನ ತಾಯಿಯ ಹೆಸರು 'ನಾಗಾಂಬಿಕಾ' ಎಂದು ತಿಳಿಸಿದೆ. ಮಧುವರಸನಾಯಕರು "ಮುತ್ತುಗದಹಾಳ ಮಧುವರಸನಾಯಕ" ಎಂದೆ ಪ್ರಸಿದ್ಧರಾಗಿದ್ದರೆಂದು ತೋರುತ್ತದೆ. ಈ ಮಧುವರಸರಿಗೆ ಬೇ. 227 ನೆಯ ಶಾಸನದ ಪ್ರಕಾರ 'ಉಂಣಿನಾಯಕ' ಎಂಬ ಇನ್ನೊಬ್ಬ ಮಗನಿದ್ದುದಾಗಿ ತಿಳಿದುಬಂದಿದೆ:

---

88. ಎ.ಕ.ಸಂ. 3 (1974) ನಂಜನಗೂಡು–402, ಪು. 547
89. ಎ.ಕ.ಸಂ. 4 (1975) ಚಾಮರಾಜನಗರ–354, ಪು. 227
90. ಎ.ಕ.ಸಂ. 6 (1977) ಕೃಷ್ಣರಾಜಪೇಟೆ–21, ಪು. 15
91. ಎ.ಕ.ಸಂ. 8 (1984) ಹೊಳೇನರಸೀಪುರ–106, 108 ಪು. 67 ಹಾಗೂ 68
92. ಎ.ಕ.ಸಂ. 7 (1979) ನಾಗಮಂಗಲ-99, ಪು. 829

ಮಧುವರಸನಾಯಕ
ಹೆಂ. ನಾಗಾಂಬಿಕ

ಲಖಂಣನಾಯಕ
ಉಂಣಿನಾಯಕ

ಬೇಲೂರ ನಾಯಕರು

ಬೇಲೂರ ನಾಯಕರನ್ನು ಕುರಿತು ಬರೆಯುತ್ತ ದಿವಂಗತ ರೈಸ್ ಅವರು ಹೀಗೆ ಬರೆದಿದ್ದಾರೆ :

This province has been called Balam in volume VI, and Major Montgomery, in an official report of 62 years ago, says,– “ This tract of country (Maharajdoorg) formed a part of the old province of Ballum, so called from a village of that name (now Mañjarābād). The word is said to be derived from the Canarese ‘ Bala ’ or strong, and to have been given in commemoration of the great bodily strength and activity of the villagers ”. I have not met with any support of this statement in the numerous inscriptions that have come under notice, on the contrary, it is called the Bēlūr kingdom[93].

ಶ್ರೀ ರೈಸರ ಮಾರ್ಗವನ್ನೇ ಅನುಸರಿಸಿ ಇಲ್ಲಿಯೂ ಐಗೂರು ನಾಯಕರು[94], ಹೊಳೇನರಸೀಪುರ ಪ್ರಭುಗಳು[95] ಮತ್ತು ಬೇಲೂರನಾಯಕರು ಎಂದು ಕರೆಯಿಸಿಕೊಳ್ಳುವ ನಾಯಕ ಪ್ರಭುಗಳನ್ನು ‘ ಬೇಲೂರ ನಾಯಕರು ’ ಎಂದು ಕರೆದಿದೆ. ಆದುದರಿಂದ ಬೇಲೂರನಾಯಕರ ವಂಶಾವಳಿಯ ನಿರೂಪಣೆಗೆ ಈ ಎಲ್ಲ ಮನೆತನಗಳ ಶಾಸನಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಪುಟದಲ್ಲಿ ಸುಮಾರು 36ಕ್ಕೂ ಹೆಚ್ಚು ಶಾಸನಗಳು ಇವರ ಚರಿತ್ರೆಯನ್ನು ಒಳಗೊಂಡಿವೆ. ಹೆಚ್ಚು ಶಾಸನಗಳು ಈ ಮನೆಯ ಚರಿತ್ರೆಯನ್ನು ಬಯ್ಯಪ್ಪನಾಯಕನ ಪುತ್ರ ಎರಕೃಷ್ಣಪ್ಪನಿಂದ ಆರಂಭಿಸುತ್ತವೆ. ಇದಕ್ಕೆ ಕಾರಣ ಬೇಲೂರ ಅಮರಮಾಗಣಿಯನ್ನು ವಿಜಯನಗರದ ಕೃಷ್ಣದೇವರಾಯನು ಎರಕೃಷ್ಣಪ್ಪನಾಯಕನಿಗೆ ಮೊದಲಬಾರಿಗೆ ದಯಪಾಲಿಸಿದ್ದು ; ಬೇಲೂರಿಗೆ ಬರುವುದಕ್ಕಿಂತ ಮುಂಚೆ ಇವರು ಸಿಂದನಾಡೆನಿಸಿದ ಬಾಗಡೆಗೆ–70ರಲ್ಲಿಯ ಬಾದಾಮಿ ಮುಂತಾದ ಪ್ರದೇಶಗಳಲ್ಲಿದ್ದರು. ಬಯ್ಯಪ್ಪನಾಯಕನು ಬಾದಾಮಿಯ ದುರ್ಗವನ್ನು ಭದ್ರಪಡಿಸಿದುದಕ್ಕೆ ಅಲ್ಲೊಂದು ಶಾಸನವಿದೆ[96]. ಬಯ್ಯಪ್ಪನಾಯಕನ ಹೆಂಡತಿ ಕೊಂಡಮ್ಮ ಎಂಬುದು ದಾವಣಗೆರೆಯ ಒಂದು ಶಾಸನದಿಂದ ತಿಳಿದುಬರುತ್ತದೆ[97]. ಇವರ ಬಹಳ ಪ್ರಸಿದ್ಧವಾದ ಬಿರುದುಗಳೆಂದರೆ : ಮಣಿನಾಗಪುರವರಾಧೀಶ್ವರ, ಸಿಂಧಗೋವಿಂದ (ಸಿಂಧುಗೋವಿಂದ), ಧವಳಾಂಕಭೀಮ, ಸಿತಕರಗಂಡ ಮತ್ತು ಬರೀದಸಪ್ತಾಂಗ ಹರಣ. ‘ ಮಣಿನಾಗಪುರ ’ ಎಂಬುದು ಬಾದಾಮಿ ತಾಲೂಕಿನ ಮಣಿನಾಗರ ಗ್ರಾಮ ; ‘ ಸಿಂಧಗೋವಿಂದ ’ ಎಂಬ ಬಿರುದು ಈ ಮನೆತನದ ರಾಜರು ಮೂಲತಃ ‘ ಸಿಂಧ ’ರ ಮನೆತನದವರೆಂದು ಸೂಚಿಸುತ್ತದೆ. ‘ಸಿಂದಗೋವಿಂದ’ ಮತ್ತು ‘ಸಿತಕರಗಂಡ’ ಎಂಬ ಬಿರುದುಗಳು ಸಿಂದರಾಚಮಲ್ಲ ದೊರೆಗೆ ಇದ್ದುದು ಕುರುಗೋಡ (ಬಳ್ಳಾರಿಜಿಲ್ಲೆ) ಶಾಸನದಿಂದ ತಿಳಿದುಬಂದಿದೆ[98]. ಶೃಂಖಲಾಬದ್ಧ ಸಂಬಂಧಗಳನ್ನು ಸದ್ಯ ತೋರಿಸಲು ಸಾಧ್ಯವಿಲ್ಲದಿದ್ದರೂ ಇವರು ಒಂದೇ ವಂಶಕ್ಕೆ ಸಂಬಂಧಪಟ್ಟವರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ದಿಶೆಯಲ್ಲಿ ‘ಸಿಂಧಗೋವಿಂದ’ ಎಂಬ ಬಿರುದು ಅತ್ಯಂತ ಗಮನಾರ್ಹವಾಗಿದೆ. ‘ಸಿತಕರಗಂಡ’ ಮುಂದೆ ‘ಶೀತಕರಗಂಡ’ ಆಗಿ ಅದು ‘ಹಿಮಕರಗಂಡ’ ಎಂಬುದಕ್ಕೆ ಪರಿವರ್ತಿತವಾಗಿರುವುದು ಒಂದು ಅಚ್ಚರಿಪಡುವ ಸಂಗತಿ ; ಹೀಗಾಗಿದೆ ಎನ್ನುವುದು ಸತ್ಯ; ಅಷ್ಟೇ ಅಲ್ಲ ‘ ಹಿಮಕರಗಂಡ[99] ’ ಎಂಬುದು ‘ ದಿನಕರಗಂಡ ’ ಎಂದೂ ಆಗಿದೆ[100] ! ಆದರೆ ‘ ಸಿತಕರಗಂಡ ’ ಎಂಬುದು ಅನೂಚಾನವಾದ ಪ್ರಾಚೀನ ಪರಂಪರೆ ಎಂಬುದು ಈ

---

93. ಎ.ಕ. ಸಂ. 5 (ಬಿ.ಎಲ್. ರೈಸ್) ಪಿಠಿಕೆ, ಪು. XXXII–XXXIII
94. “ ಬಂದೀರೆ ನನ್ನ ಜಡಿಯೊಳಗೆ ” (ಸಂ: ಡಾ. ಚಂದ್ರಶೇಖರ ಕಂಬಾರ ಹಾಗೂ ಶ್ರೀ ಜಿ. ಆರ್. ತಿಪ್ಪೇಸ್ವಾಮಿ) ಪು. 103–113
95. ಎ.ಕ. ಸಂ. 8 (1984) ಪೀಠಿಕೆ, ಪು. LXX
96. S.I.I. Vol. XV (Dr. P.B. Desai) No. 706 ; ಈ ಶಾಸನವನ್ನು ಕ್ರಿ.ಶ. 1506 ಫೆಬ್ರವರಿ 3ರಂದು ಬರೆಯಲಾಗಿದೆ
97. ಎ.ಕ.ಸಂ. 11 (ಬಿ. ಎಲ್. ರೈಸ್) ದಾವಣಗೆರೆ—18
98. S.I.I. Vol. IX, pt. I, p. 318
99. ಎ.ಕ.ಸಂ. 8 (1984) ಪು. 19, 71, 106, 113, 129
100. ಅದೇ. ಪು. 122

ಸಂಪುಟದ ಬೇ.151 ಮತ್ತು 180 ರಿಂದ ಸ್ಪಷ್ಟವಿದೆ. ಹೀಗೆಯೆ ಅರ್ಥಕೆಟ್ಟು, ರೂಪುಕೆಟ್ಟು ನಿಂತಿರುವ ಇನ್ನೊಂದು ಶಬ್ದ: ಬರೀದ (ಬರಿದ, ಬರಿಯದ, ಬಿರಿದ, ಬರಿವ, ಬರ್ರಿದ, ಬಿರಿದು, ಬಿರುದ, ಬಿರಿಯದ, ಬಲಿದ, ಭರಿತ್ತವೈರಿಯೆದ್ದ) ಸಪ್ತಾಂಗಹರಣ[101]. 'ಬರೀದಸಪ್ತಾಂಗಹರಣ' ಎಂದರೆ[102] ಬೀದರಿನ ಬರೀದ್‌ಷಾಹಿ ಅರಸನ ಸಪ್ತಾಂಗವನ್ನು (ರಾಜ, ಮಂತ್ರಿಗಳು, ಪಕ್ಷದವರು, ಭಾಂಡಾರ, ರಾಜ್ಯದ ಎಲ್ಲೆಗಳು, ದುರ್ಗಗಳು ಹಾಗೂ ಸೈನ್ಯ) ಸೂರೆಗೊಂಡವನು ಎಂದು ಅರ್ಥ. ವಿಜಯನಗರದ ದೊರೆ ಕೃಷ್ಣದೇವರಾಯನ ಕಾಲಕ್ಕೆ ಬರೀದ್‌ಷಾಹಿ ಅರಸನ ಮೇಲೆ ದಂಡೆತ್ತಿಹೋಗಿ ಅವನ ಸರ್ವಸಂಪತ್ತನ್ನೂ ರಾಜ್ಯವನ್ನೂ ಕೊಂಡುದ್ದು 'ಕೆಳದಿನೃಪವಿಜಯ' ಗ್ರಂಥದಿಂದಲೂ ತಿಳಿದುಬಂದಿದೆ[103]. ವಿಜಯನಗರದ ಕೃಷ್ಣದೇವರಾಯನ ಸೈನ್ಯದಲ್ಲಿ ಕೆಳದಿಯನಾಯಕರಿದ್ದಂತೆ ಆತನ ಹಡಪದ ಅಧಿಕಾರಿ ಎರಕೃಷ್ಣಪ್ಪನಾಯಕನ ಸೈನ್ಯವೂ ಇದ್ದಿತು. ಬರೀದ್‌ಶಾಹನನ್ನು ಸೋಲಿಸಿದ ಅಧಿಕಾರಿಗಳಿಗೆಲ್ಲ ಕೃಷ್ಣದೇವರಾಯ ಈ 'ಬರೀದ್‌ಸಪ್ತಾಂಗಹರಣ' ಎಂಬ ಬಿರುದನ್ನು ಕೊಟ್ಟಿರಲುಂಟು[104]. 'ತುರಕದಳ ವಿಭಾಡ' ಎಂಬ ಬಿರುದೂ[105] ಇದನ್ನೇ ಸ್ಪಷ್ಟೀಕರಿಸುತ್ತದೆಯಲ್ಲದೆ ದೃಢೀಕರಿಸುತ್ತದೆ. ಐಗೂರ ಸೀಮೆಯನ್ನು ಈ ಕೃಷ್ಣಪ್ಪನಾಯಕನಿಗೇ ಕೊಟ್ಟಿತ್ತೆಂಬುದು ಸಪು. 3ನೆಯ ಶಾಸನದಿಂದ ವಿದಿತವಾಗುತ್ತದೆ; ಅದು ಬೇಲೂರು ರಾಜ್ಯದ ಅಂತರ್ಗತವಾಗಿತ್ತು ಎಂದು ಈ ಶಾಸನದಲ್ಲಿ ಬರೆದಿದೆ. ಐಗೂರು ಲಾವಣಿಯಲ್ಲಿ ಬರುವ ವೆಂಕಟಾದ್ರಿನಾಯಕನನ್ನು ಈ ಬೇಲೂರ ನಾಯಕರ ಮನೆಯ ರಾಜರಲ್ಲಿ 5ನೆಯ ವೆಂಕಟಾದ್ರಿನಾಯಕನೆಂದು ಗುರುತಿಸಬಹುದು. 'ಕೃಷ್ಣಪ್ಪನಾಯಕ' ಮತ್ತು 'ವೆಂಕಟಾದ್ರಿನಾಯಕ' ಈ ಹೆಸರುಗಳು ಈ ಮನೆತನದ ರಾಜರಲ್ಲಿ ಹೆಚ್ಚು ಆವರ್ತನಗೊಂಡ ಹೆಸರುಗಳಾಗಿವೆ.

ಹೊಳೇನರಸೀಪುರ, ಅರಕಲಗೂಡು, ಹಾಸನ, ಆಲೂರು, ಬೇಲೂರು ಮತ್ತು ಸಕಲೇಶಪುರ ಇತ್ಯಾದಿ ತಾಲೂಕುಗಳಲ್ಲಿ ಇದುವರೆಗೆ ಉಪಲಬ್ಧವಾದ ಶಾಸನಗಳ ಆಧಾರದಿಂದ ಬೇಲೂರ ನಾಯಕರ ವಂಶಾವಳಿಯನ್ನು ಕೆಳಗೆ ಕಾಣಿಸಿದಂತೆ ನಿರೂಪಿಸಬಹುದು :

(ಮುಂದುವರೆದಿದೆ)

---

101. ಅದೇ. 122
102. ಈ ಸಂಪುಟದ ಪದಸೂಚಿಯನ್ನು ನೋಡಿ ಪು. 931
103. ಕೆಳದಿ ನೃಪವಿಜಯ (ಪ್ರ. ಸಂ. ಆರ್. ಶಾಮಶಾಸ್ತ್ರಿ) ಪು. 31–35(1973)
104. ಕೆಳದಿನಾಯಕರಿಗೂ ಈ ಬಿರುದಿದೆ ; ನೋಡಿ : "ಕೆಳದಿ ನೃಪ ವಿಜಯ" ಪೂರ್ವೋಕ್ತ ಪು. 35
105. ಪ್ರಸ್ತುತ ಸಂಪುಟ ಪು. 112


ರಾಮದಾಸ
ಗಿರಿಯಪ್ಪನಾಯಕ (ಶ್ರೀಗಿರೀಶ)
ತಿಮ್ಮಪ್ಪನಾಯಕ
ಯರ್ರಭೂಪತಿ
ಪೋತಪ್ಪನಾಯಕ
ಬಯ್ಯಪ್ಪ ; ಬೈಯ್ಯಪೇಂದ್ರ (ಕ್ರಿ.ಶ.ಸು. 1506–1538) ಹೆಂ. ಕೊಂಡಮ್ಮ
ಎರಕೃಷ್ಣಪ್ಪನಾಯಕ (1524–1570) ಹೆಂ. ಪದ್ಮಾಂಬಾ[106]
ವೀರಯ್ಯ (1538)
ವೆಂಕಟಾದ್ರಿನಾಯಕ I (ಚಿಕ್ಕನಾಯಕ 1566–1584) ಹೆಂ. ಪದ್ಮಾಂಬಾ[107]
ಸೂರಪನಾಯಕ
ಕೃಷ್ಣಪ್ಪನಾಯಕ II (1588–1625)
ಲಕ್ಷ್ಮಪ್ಪನಾಯಕ (1588–1605) ಹೆಂ. ಚೆನ್ನಾಂಬಿಕಾ
ವಿರುಪನಾಯಕ
ರಂಗಪ್ಪನಾಯಕ I ಮಗಳು ಕೊಂಡಮ್ಮ
ವೆಂಕಟಾದ್ರಿನಾಯಕ II (1626–1643)
ತಿರುಮಲನಾಯಕ (1640)
ನರಸಿಂಹನಾಯಕ I (1658)[108]
ರಂಗಪ್ಪನಾಯಕ II (1654)[109]
ನರಸಿಂಹನಾಯಕ II
ಕೃಷ್ಣಪ್ಪನಾಯಕ III (1643–1654)
ವೆಂಕಟಾದ್ರಿನಾಯಕ III (1655–1670)
ಕೃಷ್ಣಪ್ಪನಾಯಕ IV (1685–1692)
ವೆಂಕಟಾದ್ರಿನಾಯಕ IV (1708–1751)
ಕೃಷ್ಣಪ್ಪನಾಯಕ V (1711)[110]
ಕೃಷ್ಣಪ್ಪನಾಯಕ VI (1755–1794)
ವೆಂಕಟಾದ್ರಿನಾಯಕ V (1799)

---

106. ಎ.ಕ.ಸಂ. 8 (1984) ಹೊನ. 47 ಪು. 25

107. ಅದೇ. ಅಗೂ. 16 ಮತ್ತು 20 ಪು. 112 ಮತ್ತು 121

108. ಅದೇ. ಅಗೂ. 16 ಮತ್ತು 20 ಪು. 112 ಮತ್ತು 121

109. ಅದೇ ಹೊನ. 15, 16 ಮತ್ತು 53 ಪು. 10, 11 ಮತ್ತು 30

110. ಪ್ರಸ್ತುತ ಸಂಪುಟ, ಸಪು. 2 ಪು. 504

ಬೇ. 67 ಹಾಗೂ ಸಪು. 21ರಲ್ಲಿ ಒಬ್ಬ ಸಿಂಗಪ್ಪನಾಯಕನ ಉಲ್ಲೇಖವಿದೆ. ಸದ್ಯ ಸಂಬಂಧಗಳನ್ನು ಕಲ್ಪಿಸಲು ಆಧಾರಗಳು ಸರಿಯಾಗಿ ಹೊಂದುತ್ತಿಲ್ಲ.

ವಿಜಯನಗರದ ಅರಸೊತ್ತಿಗೆ ತಾಳಿಕೋಟೆಯ ಯುದ್ಧದ (1565) ಅನಂತರ ದಿನೇ ದಿನೇ ಕ್ಷೀಣಿಸುತ್ತ ಹೋದಾಗ ತುಂಡರಸರೂ ಮಾಂಡಲಿಕನಾಯಕರೂ ತಮ್ಮ ತಮ್ಮ ಶಕ್ತಿಗೆ ಸಾಧ್ಯವಿದ್ದಷ್ಟು ತಮ್ಮ ತಮ್ಮ ರಾಜ್ಯಗಳನ್ನು ವಿಸ್ತರಿಸಿದರು. ಅನೇಕರು ತಮ್ಮನ್ನು ತಾವೇ ಸಾರ್ವಭೌಮರೆಂದು ಘೋಷಿಸಿಕೊಂಡರು. ಇಂತಹ ಮನೆತನಗಳಲ್ಲಿ ಬೇಲೂರ ನಾಯಕರದೂ ಒಂದು. ಸಪು. 63ರಲ್ಲಿ ಬಳಸಿರುವ ಬಿರುದಾವಳಿಗಳನ್ನು ಇನಿತು ಇಲ್ಲಿ ಗಮನಿಸಬಹುದು.

ಪಂಕ್ತಿಗಳು

4 ....॥ ಸ್ವಸ್ತಿ ಶ್ರೀ ವಿಜಯಭ್ಯುಯ ಶಾಲಿವಾಹನ ಶಕಾಬ್ದಃ
5 1593ನೇ ವರ್ತಮಾನಕ್ಕೆ ಸಲ್ಲುವ ಸಾಧಾರಣಸಂ॥ರದ ವೈಶಾಖ ಶುಧ
6 3ಯಲ್ಲು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶಿಂಧುಗೋವಿಂ
7 ದ ಹಿಮಕರಗಂಡ .... ಇತ್ಯಾದಿ

‘ಶ್ರೀಮದ್ರಾಜಾಧಿರಾಜ’ ಹಾಗೂ ‘ರಾಜಪರಮೇಶ್ವರ’ ಎಂಬ ಬಿರುದುಗಳು ಇಲ್ಲಿ ರಾರಾಜಿಸಿರುವುದು ಅವರ ಸ್ವಾತಂತ್ರ್ಯವನ್ನು ಸೂಚಿಸುತ್ತದೆ.

ಮೈಸೂರಿನ ಒಡೆಯರು

ಪ್ರಸ್ತುತ ಸಂಪುಟದಲ್ಲಿ ಮೈಸೂರಿನ ಒಡೆಯರಿಗೆ ಸಂಬಂಧಿಸಿದಂತೆ 11 ಶಾಸನಗಳಿವೆ. ಚಿಕ್ಕದೇವರಾಯರ ಕಾಲದಿಂದ ಚಾಮರಾಜ ಒಡೆಯರ ಕಾಲದವರೆಗೆ ಇವುಗಳ ವ್ಯಾಪ್ತಿಯಿದೆ. ಬೇ. 491 ಚಿಕ್ಕದೇವರಾಯ ಒಡೆಯರು ಮಾಡಿಸಿದ ಸೇವೆಯನ್ನು ದಾಖಲಿಸಿದೆ. ಆದರೆ ಈ ಸೇವೆ ಏನು ಎತ್ತ ಎಂಬುದರ ಬಗೆಗೆ ವಿವರಗಳಿಲ್ಲ. ಒಂದನೆಯ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಪಟ್ಟಂತೆ ಎರಡು ಶಾಸನಗಳಿವೆ. ಬೇ. 28 ಕೃಷ್ಣರಾಜ ಒಡೆಯರು ‘ದೊಡ್ಡ ಅಮ್ಮನವರಿಗೆ ಬಂಗಾರದ ಹಸ್ತ ಮಾಡಿಸಿದುದನ್ನು ತಿಳಿಸುತ್ತದೆ;’ ಈ ಶಾಸನವನ್ನು ಬಂಗಾರದ ಹಸ್ತದ ಮೇಲೆ ಬರೆದಿದೆ. ಬೇ. 149 ಇವರ ಕಾಲದಲ್ಲಿ ಶಾನಭಾಗ ಹೊನ್ನಣ್ಣ ಎಂಬ ವ್ಯಕ್ತಿಯ ಹೆಸರಿನಲ್ಲಿ ಬಿಟ್ಟ ಧರ್ಮದತ್ತಿಯನ್ನು ದಾಖಲಿಸಿದೆ. ಎರಡನೆಯ ಕೃಷ್ಣರಾಜ ಒಡೆಯರ ಕಾಲದಲ್ಲಿ ಬೇಲೂರಿನ ದೊರೆ ವೆಂಕಟಾದ್ರಿನಾಯಕನು ಬೇಲೂರ ದೇವಾಲಯದ ಕಲಶವನ್ನು ಮಾಡಿಸಿದುದಾಗಿ ಬೇ. 13 ತಿಳಿಸುತ್ತದೆ. ಈ ಕೃಷ್ಣರಾಜನಿಗೆ ‘ಸೌಮ್ಯನಂಜಾ’ ಎಂಬ ರಾಣಿ ಇದ್ದುದಾಗಿಯೂ ಈ ಶಾಸನದಲ್ಲಿ ಬರೆದಿದೆ.

ಬೇ. 14ರ ಪ್ರಕಾರ ಬೆಟ್ಟದ ಚಾಮರಾಜರ ಆಳ್ವಿಕೆಯ ಕಾಲದಲ್ಲಿ ‘ನವಾಬ್‌ಪ್ರವರ’ ಹೈದರ್‌ಆಲಿ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿರಲು ಅವರ ಅಧಿಕಾರಿಯಾದ ನಂಜಯಾರ್ಯನು ಬೇಲೂರ ಕೇಶವ ದೇವಾಲಯಕ್ಕೆ ಕಳಶವನ್ನು ಮಾಡಿಸಿದನು. ಇದು ಜೀರ್ಣೋದ್ಧಾರದ ಕಾರ್ಯ; ಏಕೆಂದರೆ ಈ ಮೊದಲೂ ಇಲ್ಲಿ ಕಳಶಗಳನ್ನು ಆಗಾಗ ಮಾಡಿಸಿದುದುಂಟು. ಬೇಲೂರ ವೆಂಕಟಾದ್ರಿನಾಯಕನು ಈ ಮೊದಲು ಬೇ. 13ರ ಪ್ರಕಾರ ಕಳಶವನ್ನು ಮಾಡಿಸಿದ್ದನು. ಸಪು. 47 ಹಜರತ್ ಟೀಪು ಸುಲ್ತಾನ್ ಅವರು ಮಹಂಮದ್ ಸನಾಂ ಸಾಬರ ಮುಖಾಂತರ ಮಹಾರಾಜ ಹರಿಪಗೆ ಇನಾಂ ದಯಪಾಲಿಸಿದುದನ್ನು ದಾಖಲಿಸಿದೆ. ಈ ಹರಿಪ ಯಾರೆಂಬುದು ಸರಿಯಾಗಿ ತಿಳಿಯದು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ ಮೂರು ಶಾಸನಗಳಿವೆ. ಇವುಗಳಲ್ಲಿ ಎರಡು ಶಾಸನಗಳು ಬೇ. 27 ಹಾಗೂ ಬೇ. 31, ಮುಮ್ಮಡಿಯವರ ನಾಮತೀರ್ಥತೊಟ್ಟಿ ಕಾರ್ಯಾಲಯದಲ್ಲಿ ಕೆಲಸಮಾಡತ್ತಿದ್ದ ಶ್ರೀನಿವಾಸೈನಂಣ ರಂಗಯ್ಯ ಎಂಬವನು ಮಾಡಿದ ಸೇವೆಯನ್ನು ದಾಖಲಿಸಿವೆ. ಸಪು. 23 ಕೃಷ್ಣರಾಜ ಒಡೆಯರ ಸ್ವತಃ ಮಡಿವಾಳಸ್ವಾಮಿಯೆಂಬವರಿಗೆ ಚಿದಾರಣ್ಯದಲ್ಲಿ ಸಲ್ಲಿಸಿದ ಸೇವೆಯನ್ನು ಕುರಿತಿದೆ.

ಬೇ. 17 ಮಹಾರಾಜ ಚಾಮರಾಜೇಂದ್ರ ವಡೆಯರ್ ಬಹದರ್ ಅವರ ಆಳ್ವಿಕೆಯ ಕಾಲದಲ್ಲಿ ಸರ್ ಕೆ. ಶೇಷಾದ್ರಿ ಐಯ್ಯರ್ ಅವರ ಆಡಳಿತದಲ್ಲಿ ಬೇಲೂರ ಬದರೀನದಿ (ಯಗಚಿ ಹೊಳೆ)ಗೆ ಸೇತುವೆ ಆದದ್ದನ್ನೂ ಅದರ ಬಳಿಯಲ್ಲಿ ಗಣೇಶ ದೇವಾಲಯ ಕಟ್ಟಿಸಿದುದನ್ನು ಮತ್ತು ಆ ದೇವಾಲಯಕ್ಕೆ ಸೇತುವೆಯ ಉಭಯ ಪಾರ್ಶ್ವದಲ್ಲಿಯ ಜಮೀನನ್ನು ಕೊಟ್ಟುದನ್ನು ದಾಖಲಿಸುತ್ತದೆ. ತೇದಿಯಿಲ್ಲದ ಕ್ರಿ.ಶ. 19ನೆಯ ಶತಮಾನದ ಲಿಪಿಯಲ್ಲಿರುವ ಬೇ. 91 ಮೈಸೂರು ರಾಣಿಯರಾದ ಮಲ್ಲವ್ವೆ, ಲಕ್ಷ್ಮಂಮ, ದೇವಾಜಿಯಮ್ಮ, ಕೃಷ್ಣಾಜಂಮ (ಕ್ರಿಣಾಂಜಮ) ಮತ್ತು ಕಾಂತಮಣಿ ಅವರ ಹೆಸರನ್ನು ಹೊಂದಿದೆ.

ವಿವಿಧ ವಿಷಯಗಳು

ಬೇ. 512 ಕ್ರಿ.ಶ. 834ರಲ್ಲಿ ಬರೆಯಲಾಗಿದೆ. ಇದು ಲಕ್ಕುಂದದಲ್ಲಿ ಈಗ 'ಚೌಡೇಶ್ವರಿಅಮ್ಮ' ಎಂದು ಕರೆಯಲ್ಪಡುವ ಮೂರ್ತಿಯ ಪೀಠದಲ್ಲಿ ಬರೆಯಲಾಗಿರುವ ಶಾಸನ. ಈ ಮೂರ್ತಿಯನ್ನು ಈಗ ಚೌಡೇಶ್ವರಿಯೆಂದು ಕರೆದರೂ ಈ ಶಾಸನದ ಪ್ರಕಾರ ಈ ದೇವತೆ 'ವಾಸಂತಿಕಾದೇವಿ' ಎಂಬುದು ಸುಸ್ಪಷ್ಟ. ಕಪಾಳೇಶ್ವರದೇವರ ಮೂಲಿಗ ಬ್ರಹ್ಮಕುಳತಿಳಕ ಮಲ್ಲಿದೇವ ಎಂಬ ವ್ಯಕ್ತಿಯು ಮಾಡಿಸಿದ್ದಾನೆ. ಇಲ್ಲಿ ಗಮನಾರ್ಹವಾದ ವಸ್ತುವೆಂದರೆ 'ವಾಸಂತಿಕಾದೇವಿ' ಚೌಡೇಶ್ವರಿ ಆಗಿರುವುದು!

ಬೇ. 212ನ್ನು ಕ್ರಿ.ಶ. 9–10ನೆಯ ಶತಮಾನದ ಲಿಪಿಯಲ್ಲಿ ಬರೆದಿದೆ. 'ನನ್ನಿಯಕೆಳೆಯ' ಎಂಬ ದೊರೆ ಅಗ್ಗಣ್ಡಲ (ಅಗ್ಗಡಲ) ಗ್ರಾಮದವರು ಕೊಡಬೇಕಾಗಿದ್ದ 'ತುಪ್ಪದತೆಱೆ' ಎಂಬ ಕರವನ್ನು, ಚನ್ದ್ರಸೂರ್ಯರುಳ್ಳನ್ನೆವರೆಗೆ ಕೊಡ ಬೇಕಾಗಿಲ್ಲವೆಂದು, ಮನ್ನಾಮಾಡಿದ. 'ಸೂರ್ಯ' ಎಂಬ ಶಬ್ದ 'ಚುಜ್ಯೆನ್' ಎಂದಾಗಿರುವುದು ಒಂದು ಗಮನಾರ್ಹವಾದ ಅಂಶ. ಇಲ್ಲಿ ಬಂದಿರುವ 'ನನ್ನಿಯಕೆಳೆಯ' ಎಂಬುದು ಪ್ರಾಯಃ ಇದೇ ಭೂಭಾಗದಲ್ಲಿ ಆಳಿದ 'ನಣ್ಣಿಕಂದರ್ಪ' ಎಂಬ ಹೊಯ್ಸಳವಂಶದ ಒಬ್ಬ ಮೂಲಪುರುಷನ ಹೆಸರಿನಂತಿದೆ[111]; ಈ ನನ್ನಿಯಕೆಳೆಯ ಆ ವಂಶಕ್ಕೆ ಸಂಬಂಧಪಟ್ಟಿದ್ದನೋ ಇಲ್ಲವೊ ಸದ್ಯ ಹೇಳಲು ಬರುವುದಿಲ್ಲ. ಸಂಶೋಧನೆಯಲ್ಲಿ ಇತಿಹಾಸದ ಕೊಂಡಿಗಳು ಸರಿಯಾಗಿ ದೊರಕಿದಾಗ ಶೃಂಖಲೆಯನ್ನು ಜೋಡಿಸಿ ರಚಿಸಬಹುದು.

ಬೇ. 541, ತೊಳಲು ಗ್ರಾಮದಲ್ಲಿ ಪದ್ಮಾವತಿಯಕ್ಕ ಎಂಬ ವ್ಯಕ್ತಿಯು ಅಭಯಚಂದ್ರದೇವರುಯೆಂಬ ಜೈನಗುರುವಿನ ಮರಣಾನಂತರ ಪರೋಕ್ಷವಿನಯಕ್ಕಾಗಿ ಹಾಕಿಸಿದ ಶಾಸನ. ಈಕೆ ಅರ್ಧಕ್ಕೆ ನಿಂತಿದ್ದ ಬಸದಿಯನ್ನು ಪೂರ್ಣಕಟ್ಟಿಸಿ ಇನ್ನಿತರ ಧರ್ಮಕಾರ್ಯಗಳನ್ನು ಮಾಡಿದಳು. ಬೇ. 542ರ ಪ್ರಕಾರ, ಈ ಅಭಯಚಂದ್ರಯತಿಯು ಕ್ರಿ.ಶ. 1062ರಲ್ಲಿ, ಹೊಯ್ಸಳ ದೊರೆ ವಿನಯಾದಿತ್ಯ ಹಾಗೂ ಆತನ ರಾಣಿ ಕೆಳೆಯಬ್ಬರಸಿ ಇವರಿಂದ ದಾನದತ್ತಿಗಳನ್ನು ಪಡೆದಿದ್ದನು; ಕಾರಣ 541ನೆಯ ಶಾಸನವು ಅನಂತರದಲ್ಲಿ ಬರೆಸಲಾದ ದಾಖಲೆಯೆಂದರೆ ತಪ್ಪಾಗದು.

ಬೇ. 192 ಕ್ರಿ.ಶ. 11–12ನೇ ಶತಮಾನದ ಲಿಪಿಯಲ್ಲಿ ಬರೆದಿದ್ದು ಹೆರ್ವ್ವಯಲ ಗೊರವಗಾವುಂಡ ಎಂಬ ವ್ಯಕ್ತಿ ಕೋಬೇಶ್ವರ ದೇವರ್ಗ್ಗೆ ಸೊಡರೆಣ್ಣಿಗೆ (ದೀಪಕ್ಕೆ) ಕರಿಕಹಳ್ಳಿಯ ಕಟ್ಟಿಯ ಕೆಳಗಣ ಗದ್ದೆಯ ಗುತ್ತಗೆಯ ಅಡ್ಡಚಿನ್ನವನ್ನು ಚಂದ್ರಾರ್ಕತಾರಂಬರ ನಡೆಯುವ ಹಾಗೆ ಬಿಟ್ಟುಕೊಟ್ಟನು. ಇಲ್ಲಿನ 'ಅಡ್ಡಚಿನ್ನ' ಎಂದರೆ 'ಅಟ್ಟದೆಱೆ' ಅರ್ಥಾತ್ ಸಂತೆಯ ಕಟ್ಟಿಗೆ, ಮಾಳಕ್ಕೆ, ಕೊಡಬೇಕಾದ ಸುಂಕ[112].

ಬೇ. 403 ಪಿರಿಯದಂಡನಾಯಕ ಏಚಿಮಯ್ಯನು ದ್ರೋಹಘರಟ್ಟಚತುರ್ವೇದೀಮಂಗಲವೆಂದು ದತ್ತಿಬಿಟ್ಟ ಕೊಂಡಲಿಯಗ್ರಾಮದ ತೋಟವೊಂದನ್ನು, ಅಲ್ಲಿಯ ಮಹಾಜನರ ಸಮ್ಮತದಿಂದ, ಪ್ರಭಾಕರಸೆಟ್ಟಿ ಹಾಗೂ ಜಕ್ಕಣ್ಣವ್ವೆಯರ ಪುತ್ರ ಮಲ್ಲಿಶೆಟ್ಟಿ ಎಂಬ ವ್ಯಕ್ತಿಯು ಕಟ್ಟಿಸಿದ ಮಲ್ಲಿನಾಥಜಿನಾಲಯಕ್ಕೆ ಆ ತೋಟವನ್ನು ಮತ್ತು ಪಟ್ಟಣಸ್ವಾಮಿ ಆಡವಲ್ಲಸೆಟ್ಟಿ ಹಾಗೂ ಇತರ ನಕರರು, ನಾನಾ ದೇಶಿಗಳು, ಬಿಟ್ಟ ದತ್ತಿಗಳನ್ನು ದಾಖಲಿಸಿದೆ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಈ ಶಾಸನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಆರಂಭದಲ್ಲಿ ಬಂದ ಎರಡು ಪದ್ಯಗಳು ಕ್ರಮವಾಗಿ ಚಾವುಂಡರಾಯನ "ತ್ರಿಷಷ್ಟಿ ಲಕ್ಷಣ ಮಹಾಪುರಾಣಂ" ಹಾಗೂ ಪಂಪನ "ಆದಿಪುರಾಣಂ" ಗ್ರಂಥಗಳಿಂದ ಎತ್ತಿಕೊಂಡುವಾಗಿವೆ. ಆ ಪದ್ಯಗಳೆಂದರೆ:

ಶ್ರೀದೇವೇಂದ್ರನತ ಶ್ರೀ
ಪಾದಂ ಶ್ರೀಪದವಿನಮ್ನ ಭವ್ಯ ಜನಂಗ
ಳ್ಗಾದರದಿಂ ದಯೆಗೆಯ್ಗೆ ಶು
ಭೋದಯಮಂ ಮುಕ್ತಿವಲ್ಲಭಂ ಮಲ್ಲಿಜಿನಂ ||[113]

ಮುನಿಜನದೋದಿಸಿದೋಜೆಯ
ಲನುವದಿಪುದಿದೊಂದೆ ಕೊಣ್ಡಕುಂದಾನ್ವಯನ
ನ್ದನವನಶುಕವೆಂದೆನಗಿನಿ
ತನನುಗ್ರಹಂಗೆಯ್ಗೆ ಕರುಣದಿಮ್ಮುನಿನಿವಹಂ ||[114]

ಈ ಎರಡು ಪದ್ಯಗಳ ಪಾಠಗಳು ಉಪಲಬ್ಧ ಎಲ್ಲ ಹಸ್ತಪ್ರತಿಗಿಂತಲೂ ಹೆಚ್ಚು ಪುರಾತನವಾದವು. ಏಕೆಂದರೆ ಈ ಶಾಸನದ ಕಾಲ ಕ್ರಿ.ಶ. 1138 ಡಿಸೆಂಬರ್ 29.

---

[111] MAR. 1932, No. 37, pp. 200–201

[112] ಸಿಂಗಾರ (ಸಂ. ಹ. ಕ. ರಾಜೇಗೌಡ) ಪು. 164

[113] 'ಚಾವುಂಡರಾಯ ಪುರಾಣ 'ಎಂದು ಪ್ರಸಿದ್ಧವಾದ "ತ್ರಿಷಷ್ಟಿಲಕ್ಷಣ ಮಹಾಪುರಾಣಂ" (ಸಂ : ಕಮಲಾ ಹಂಪನಾ ಹಾಗೂ ಕೆ. ಆರ್. ಶೇಷಗಿರಿ) ಪು. 247

[114] (a) 'ಆದಿಪುರಾಣಂ' (ಸಂ. ಎಸ್. ಜಿ. ನರಸಿಂಹಾಚಾರ್) ಆ. ೧–೧೪
(b) ಪಂಪನ ಪದ್ಯವನ್ನು ಈ ಶಾಸನದಲ್ಲಿ ಮೊದಲು ಗುರುತಿಸಿದವರು ಡಾ. ಎಂ.ಎಂ. ಕಲಬುರ್ಗಿ, ಮಾರ್ಗ II, ಪು. 39-41 (1988)

ಬೇ. 347ನೆಯ ಶಾಸನದ ಪ್ರಕಾರ ಕ್ರಿ.ಶ. 1236 ಫೆಬ್ರವರಿ 11 ರಂದು ಸಕಳಚಂದ್ರಭಟ್ಟಾರಕ ಎಂಬ ಜೈನಗುರುಗಳು ಪಾಂಡ್ಯದೇಶದ ‘ ಬಿಳಿಚಾ ’ ಗ್ರಾಮದಲ್ಲಿ ಮೂರು ದಿವಸ ಅನಶನವಿಧಿಯಿಂದಿದ್ದು ಸ್ವರ್ಗವಾಸಿಯಾದರು. ಈ ‘ಬಿಳಿಚಾ’ ಗ್ರಾಮ ಪಾಂಡ್ಯದೇಶದಲ್ಲಿದ್ದಿತು ಎಂದು ತಿಳಿದುಬರುವುದರಿಂದ ಇದು ಈಗಿನ ಚಿತ್ರದುರ್ಗಜಿಲ್ಲೆಯ ಜಗಳೂರು ತಾಲೂಕಿನ ‘ ಬಿಳಿಚೋಡು ’ ಗ್ರಾಮವೆಂದು ಗುರುತಿಸಬಹುದು.

ಬೇ. 15, ಕ್ರಿ. ಶ. 1241ರಲ್ಲಿ ಬರೆಯಲಾಗಿದ್ದು ಆ ಸಮಯದಲ್ಲಿ ಪೋಲಾಳ್ವ ದಂಣಾಯಕನು ಮಹಾಪ್ರಧಾನನಾಗಿದ್ದನೆಂದು ತಿಳಿಸುತ್ತದೆ. ಈತ ಇಮ್ಮಡಿ ನರಸಿಂಹ ಹಾಗೂ ಆತನ ಪುತ್ರ ಸೋಮೇಶ್ವರ ಈ ಇಬ್ಬರು ಹೊಯ್ಸಳ ದೊರೆಗಳ ಆಳ್ವಿಕೆಯ ಕಾಲದಲ್ಲೂ ಮಂತ್ರಿಯಾಗಿದ್ದನೆನ್ನುವುದು ಗಮನಾರ್ಹ.

ಬೇ. 383 ಮೂವರ (ಹೇಮಚಂದ್ರ ತ್ರೈವಿದ್ಯ, ಅಡಕೆಯ ತಿಪ್ಪಣ ಮತ್ತು ಅಡಕೆಯ ಪಾಯ) ನಿಷಧಿ ಶಾಸನವಾಗಿದೆ. ಅಡಕೆಯ ತಿಪ್ಪಣನ ಮರಣವನ್ನು ಮತ್ತು ಹೇಮಚಂದ್ರ ಮುನಿಪರ ಮರಣವನ್ನು ಶಕವರ್ಷಗಳಲ್ಲಿ ನಮೂದಿಸಿದರೆ ಅಡಕೆಯ ಪಾಯದೇವನ ಮರಣವನ್ನು ಕೊನೆಯ ತೀರ್ಥಂಕರನಾದ ಮಹಾವೀರ ವರ್ಧಮಾನನ ನಿರ್ವಾಣ ಶಕೆಯಲ್ಲಿ ‘ ಚರಮ ಜಿನಾಬ್ದಂ ನಯನನವಗಿರಿ ಶಶಧರ ಸಂಖ್ಯೆ ಸಲುತಿರಲ್ ಕ್ರೋಧನವತ್ಸರ ಫಾಲ್ಗುಣ ಮಾಸ ಅಸಿತಪಕ್ಷದ ಬಿದಿಗೆ ಭಾನುವಾರ ’ ಎಂದು ಮಹಾವೀರ ಶಕೆಯನ್ನು ನಿರ್ದೇಶಿಸಿದೆ. ಇದು 1792 ಎಂದಾಗುತ್ತದೆ. ಕ್ರಿ.ಶ. 1266 ಫೆಬ್ರವರಿ 21 ಭಾನುವಾರಕ್ಕೆ ಸರಿಹೊಂದುವುದರಿಂದ ಮಹಾವೀರರ ನಿರ್ವಾಣವು ಕ್ರಿ.ಪೂ. 527ರಲ್ಲಿ ಬಹುಶಃ ನಡೆದಿದೆಯೆಂದರೆ ತಪ್ಪಾಗದು.

ಬೇ. 401 ಮತ್ತು 402 ಇವು ಕ್ರಿ.ಶ. 1274ರಲ್ಲಿ ಸಮಾಧಿಮರಣವನ್ನಪ್ಪಿದ ಬಾಳಚಂದ್ರಯತಿಗಳ ಸಮಾಧಿಮರಣ ಹಾಗೂ ಗುಣಗಾನಗಳಿಗಾಗಿ ಹುಟ್ಟಿದ ಶಾಸನಗಳಾಗಿವೆ. ಕನ್ನಡದಲ್ಲಿ “ ದ್ವಾದಶಾನುಪ್ರೇಕ್ಷೆ ” ಗ್ರಂಥವನ್ನು ಬರೆದ ಸದ್ಯ ಮೊದಲ ವ್ಯಕ್ತಿ ಇವರು. ಅಭಯಚಂದ್ರ ಯತಿಗಳ ಶಿಷ್ಯಸೂನುವಾದ ಅವರಿಂದ ಜೈನಧರ್ಮವು ಬೆಳಗಿತೆಂದು ಶಿಷ್ಯಪರಂಪರೆಯು ಅಂದು ಕೊಂಡಾಡಿದೆ. ಅವರು ಸಮಾಧಿ ಮರಣವನ್ನು ಅಪ್ಪಿರುವ ಬಗೆಯೂ ಬಹಳ ಅಚ್ಚರಿಯಾಗಿದೆ. ಮರಣಕಾಲ ಸಮೀಪಿಸಿದೆಯೆಂದು ತಿಳಿದಕೂಡಲೆ ಚಾತುರ್ವರ್ಣಿಗಳನ್ನು ಕರೆದು ತಮ್ಮನ್ನು ಎಲ್ಲರೂ ಕ್ಷಮಿಸಬೇಕೆಂದು ಕೇಳಿಕೊಂಡು, ಸಕಳ ನಿವೃತ್ತಿಯಿಂದ ಪರ್ಯಂಕ (ಪಲ್ಯಂಕ) ಆಸನದಲ್ಲಿದ್ದು ಪಂಚಪರಮೇಷ್ಠಿಗಳನ್ನು ಸ್ವರೂಪದೊಂದಿಗೆ ಧ್ಯಾನಿಸುತ್ತ, ಸ್ವಸಮಯದವರೂ ಮತ್ತು ಪರಸಮಯದವರೂ ಮೆಚ್ಚುವ ಬಗೆಯಲ್ಲಿ ಉತ್ತಮ ಸಮಾಧಿಯನ್ನು ಪಡೆದರು.

ಬೇ. 8 ಕ್ರಿ. ಶ. 1277ರಲ್ಲಿ ಬರೆಯಲಾಗಿದ್ದು ‘ಕಮಳನಾಭತೀರ್ಥ’ ಯತಿಗಳಿಗೆ ಭಿಕ್ಷೆಗೋಸುಗ ಕೊಟ್ಟ ದಾನವನ್ನು ದಾಖಲಿಸಿದೆ. ಈ ಕಮಳನಾಭತೀರ್ಥರೆಂದರೆ ಯಾರು ? ಇವರು ವೈಷ್ಣವರಾದುದರಿಂದ ವೈಷ್ಣವ ಸಂಪ್ರದಾಯದ ಯತಿಗಳೆನ್ನುವುದರಲ್ಲಿ ಸಂಶಯವಿಲ್ಲ. ಉಪಲಬ್ಧವಿರುವ ಎಲ್ಲ ವೈಷ್ಣವ ಮಠಗಳ ಚರಿತ್ರೆಗಳನ್ನು ಅವಲೋಕಿಸಿದರೆ ಈ ಯತಿಗಳು ಮಾಧ್ವ ಸಂಪ್ರದಾಯದವರೆಂದು ಹೇಳಬಹುದು. ‘ ತೀರ್ಥ ’ ಎಂದು ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಹೇಳುವುದಿಲ್ಲ. ಕಮಳನಾಭತೀರ್ಥರು ಎಂದರೆ ಯಾರು ಎಂದು ಪ್ರಶ್ನೆಗಳನ್ನು ಎತ್ತಬಹುದು; ‘ ಕಮಳನಾಭತೀರ್ಥ ’ ‘ ನೀರೇಜನಾಭತೀರ್ಥ’[115]. ಮತ್ತು ‘ ಪದ್ಮನಾಭತೀರ್ಥ ’ ಈ ಮೂರು ಶಬ್ದಗಳು ಒಬ್ಬ ಯತಿಯನ್ನೇ ಸೂಚಿಸುತ್ತವೆಯೆಂದರೆ ಸರಿಹೋಗುತ್ತದೆ. ಅವರೆಂದರೆ ಶ್ರೀಮನ್ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯ ಪದ್ಮನಾಭತೀರ್ಥರು. ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಲ್ಲಿ ಅವರ ಪೀಠಕ್ಕೆ ನಾಲ್ವರು ಒಬ್ಬರಾದ ಮೇಲೆ ಒಬ್ಬರು ಕುಳಿತರು, ಪದ್ಮನಾಭತೀರ್ಥರು ಹೀಗೆ ಪೀಠವನ್ನು ಅಲಂಕರಿಸಿದವರಲ್ಲಿ ಮೊದಲಿಗರು, ಅನಂತರ ನರಹರಿತೀರ್ಥರು, ಅವರ ನಂತರ ಮಾಧವತೀರ್ಥರು, ಮಾಧವತೀರ್ಥರ ಅನಂತರ ಅಕ್ಷೋಭ್ಯತೀರ್ಥರು. ನರಹರಿತೀರ್ಥರು ಹಾಕಿಸಿರುವ ಶ್ರೀಕೂರ್ಮಶಾಸನವನ್ನು ಕ್ರಿ.ಶ. 1281ರಲ್ಲಿ ಬರೆದಿರುವುದರಿಂದ ಈ ಯತಿಗಳು ಮಧ್ವಾಚಾರ್ಯರ ಅನಂತರ ಪೀಠಾರೋಹಣ ಮಾಡಿರುವುದು ಲೋಕವಿಶ್ರುತ ಸಂಗತಿಯಾದುದರಿಂದ ‘ಕಮಳನಾಭ’ ಅಥವಾ ‘ ಪದ್ಮನಾಭ ’ ತೀರ್ಥರು ಕ್ರಿ.ಶ. 1277ರಲ್ಲಿ ಬದುಕಿದ್ದರೆಂಬುದು ದ್ವೈತಸಂಪ್ರದಾಯದ ಪೀಠವನ್ನು ಅಲಂಕರಿಸಿದ್ದರೆಂಬುದು ಧಾರ್ಮಿಕ ಇತಿಹಾಸದಲ್ಲಿ ಮತ್ತು ಮಧ್ವಾಚಾರ್ಯರ ಕಾಲನಿರ್ಣಯವನ್ನು ಮಾಡುವಲ್ಲಿ ಹೆಚ್ಚು ಮಹತ್ವದ ಸಂಗತಿಯ ದಾಖಲೆ—ಈ ಪ್ರಸ್ತುತ ಶಾಸನ. ಮುಂಬರುವ ಕಾಲದಲ್ಲಿ ಮಾಧ್ವ ಸಂಪ್ರದಾಯದ ಮಠಗಳ ಇತಿಹಾಸವನ್ನು ಬರೆಯುವಲ್ಲಿ ಈ ಶಾಸನಕ್ಕೊಂದು ವಿಶಿಷ್ಟವಾದ ಸ್ಥಾನವಿದೆ, ಏಕೆಂದರೆ ಇದೊಂದು ಸಮಕಾಲೀನ ದಾಖಲೆ ; ಮತ್ತೆ ಯಾವುದೇ ಮಠದಲ್ಲಿ ದಾಖಲೆಗಳು ಈ ಶಾಸನಗಳ ಹಾಗೆ ಸಮಕಾಲಿನ ನಂಬಲರ್ಹವಾದುವು ಇದುವರೆಗೆ ಉಪಲಬ್ಧವಿಲ್ಲ.

---

115. ಎ.ಕ. ಸಂ. 8 (ಬಿ.ಎಲ್.ರೈಸ್.) ತೀರ್ಥಹಳ್ಳಿ-24ರಲ್ಲಿ ನೀರೇಜನಾಭತೀರ್ಥರ ಉಲ್ಲೇಖ ಬಂದಿದ್ದು ಅವರನ್ನು ಮಾಧವ ತೀರ್ಥರ ಗುರು ಎಂದೇ ಬರೆದಿದೆ; ಪು. 461 : ಶ್ರೀ ಮದ್ರಾಮಾಂಘ್ರಿಯುಗ್ಮಾಂಬುರುಹ . . . . ಯಾಬ್ದ ಸೋಮಂ ನಿರೇಜನಾಭವ್ರತಿಪತಿ ತದಪತ್ಯಂ ಲಸನ್ಮಾದವಾರ್ಯೋದ್ದಾಮಂ ತತ್ಸೂನು ತತ್ವಾನಯ ಕುಲತಿಲಕಂ ಮ....ದ್ಧಾಮಂ ತ್ರೈಲೋಕ್ಯ ಸದ್ಭೂಷಣಸುತ ಸುಲಭಾಚಾರ್ಯ ನಾಚಾರ್ಯ್ಯವರಿಯಂ.

ಬೇ. 355, ಬಇಚೆಯ ದಂಣಾಯಕನು ಕೇತಲೇಶ್ವರ ದೇವಾಲಯಕ್ಕೆ ಕೊಟ್ಟ ಕೊಡಗಿಯನ್ನು ದಾಖಲಿಸಿದೆ. ಈತನನ್ನು ದೇವರಾಯನ ಮಂತ್ರಿಯಾದ ಬೈಚೆಯ ದಂಣಾಯಕನೊಂದಿಗೆ ಸಮೀಕರಿಸಬಹುದು. ಈ ಸಮೀಕರಣವು ಸರಿಯಾದರೆ ಬೇ. 90ರ ಪ್ರಕಾರ ಈತನು ಕ್ರಿ.ಶ. 1414ರಲ್ಲಿ ಇದ್ದನು.

ಬೇ. 406, ಜೈನಧರ್ಮದ ಅಧ್ಯಯನದಲ್ಲಿ ಒಂದು ಮುಖ್ಯ ಶಾಸನ. ಇದು ರಾಮಚಂದ್ರಮಲಧಾರಿದೇವರ ಸಮಾಧಿಮರಣವನ್ನು ನಿರೂಪಿಸುತ್ತ ಅವರ ಗುರುಗಳಾದ ಸಮುದಾಯದ ಮಾಘಣಂದಿದೇವರು ಹಾಗೂ ಅವರ ಶಿಷ್ಯ ಪರಂಪರೆಯನ್ನು ವಿವರಿಸುತ್ತ ಮಾಘಣಂದಿ ಯತಿಗಳು ಬರೆದ ‘ಸಾರಚತುಷ್ಟಯ’ (ಶ್ರಾವಕಾಚಾರಸಾರ, ಶಾಸ್ತ್ರಸಾರ, ಪದಾರ್ಥಸಾರ ಮತ್ತು ಸಿದ್ಧಾಂತಸಾರ) ಗ್ರಂಥದ ಉಲ್ಲೇಖವನ್ನು ಅದರ ವ್ಯಾಖ್ಯಾನ ನಡೆಯುತ್ತಿದ್ದ ಸಂಗತಿಯನ್ನು ದಾಖಲಿಸಿದೆ. ಇದರ ಕಾಲ ಕ್ರಿ.ಶ. 1300 ಏಪ್ರಿಲ್ 7.

ಬೇ. 208 ಹಾಗೂ 210 ಈ ಎರಡೂ ಶಾಸನಗಳು ಮಹಾಪ್ರಧಾನ ಕಾಮ್ಮೈಯ ದಂಣಾಯಕನ ಅಳಿಯ ಅಲ್ಲಪ ದಂಣಾಯಕನು ಬಿಟ್ಟ ದತ್ತಿಯನ್ನು ದಾಖಲಿಸಿವೆ. ಆದರೆ ದತ್ತಿ ಬಿಟ್ಟದ್ದು ಏನೆಂಬುದು ತಿಳಿಯಲು ಸಾಧ್ಯವಿಲ್ಲ; ಏಕೆಂದರೆ ಈ ಭಾಗ ಶಾಸನಗಳಲ್ಲಿ ಅಳಿಸಿಹೋಗಿದೆ. ಈತನ ಪ್ರಸ್ತಾಪ ಚಾಮರಾಜನಗರದ ಒಂದು ಶಾಸನದಲ್ಲಿಯೂ ಬಂದಿದೆ[116]. ಈ ಎರಡೂ ಶಾಸನಗಳಲ್ಲಿ ಆಳುವ ರಾಜನ ಉಲ್ಲೇಖವಿಲ್ಲ. ಮುಮ್ಮಡಿ ಬಲ್ಲಾಳನು ಹಳೇಬೀಡನ್ನು ಆಗ್ಗೆ ಬಿಟ್ಟು ದೂರ ಹೋಗಿದ್ದ. ಕ್ರಿ. ಶ. 1310ರಲ್ಲೇ ಹಳೇಬೀಡು ಮುಸಲ್ಮಾನರ ದಾಳಿಗೆ ತುತ್ತಾಯಿತು. ಅದೊಂದು ಕ್ಷೋಭೆಯ, ಗದ್ದಲದ, ಕಾಲ (Age of Ferment)[117]. ಈ ಎರಡೂ ಶಾಸನಗಳನ್ನು ಕ್ರಿ.ಶ. 1328ರಲ್ಲಿ ಬರೆದಿರುವುದರಿಂದ ಹಳೆಯಬೀಡಿನ ಸುತ್ತಮುತ್ತಲ ಪ್ರದೇಶದಲ್ಲಿಯ ಆಗಿನ ಗೊಂದಲವನ್ನು ಊಹಿಸಬಹುದು. ಅಧಿರಾಜರಾದ ಹೊಯ್ಸಳರ ಉಲ್ಲೇಖವಿಲ್ಲದಿರುವುದು ಗಮನಾರ್ಹವಾದ ಸಂಗತಿ.

ಬೇ. 359ರಲ್ಲಿ ‘ಧಾತುಸಂವತ್ಸರದ ಮಾಘ ಸುಧ 10ಲು ಶ್ರೀಮನ್ಮಹಾಮಂಡಲೇಶ್ವರ ಬಯಿರರಾಜ ಮಹಾಅರಸುಗಳು ಹೊಯಿಸಳೇಶ್ವರ ಧರ್ಮ’ ಎಂದು ಬರೆದಿದೆ. ಇದು ಶಾಸನವನ್ನು ನೆಟ್ಟಿರುವ ಭೂಮಿಯ ಭೂದಾನ ಶಾಸನವಾಗಿರಬಹುದು. ಇದರಲ್ಲಿ ಶಕವರ್ಷವಿಲ್ಲ. ಲಿಪಿಶಾಸ್ತ್ರದ ಬೆಳಕಿನಲ್ಲಿ ಇದರ ಕಾಲವನ್ನು ನಿರ್ಧರಿಸಬೇಕು. ಹೀಗೆ ಮಾಡುವಾಗ ಒಂದೆರಡು ಶತಮಾನಗಳಷ್ಟು ಕಾಲ ಆಚೆಈಚೆ ಆಗಬಹುದು. ಅದು ಸಹಜವಾದದ್ದು. ಲಿಪಿಶಾಸ್ತ್ರವನ್ನು ಆಧರಿಸಿ ಕ್ರಿ.ಶ. 15ನೆಯ ಶತಮಾನವೆಂದು ಪುರಾತತ್ವ ಇಲಾಖೆಯ 1940ರ ವರದಿಯಲ್ಲಿ ಬರೆದಿದೆ. ಕ್ರಿ.ಶ. 14ನೆಯ ಶತಮಾನದಲ್ಲಿಯೂ ಇದನ್ನು ಬರೆದಿದೆ ಎಂದರೆ ತಪ್ಪಾಗುವುದಿಲ್ಲ. ಉಕ್ತತಿಥಿಯು ಕ್ರಿ.ಶ. 1337 ಜನವರಿ 12ರಂದೂ ಬಂದಿತ್ತು. ಈ ಶಾಸನವನ್ನು ಹೀಗೆ ಹದಿನಾಲ್ಕನೆಯ ಶತಮಾನದ್ದು ಎಂದು ಸ್ವೀಕರಿಸಿದರೆ ಇಲ್ಲಿ ಬಂದಿರುವ ವ್ಯಕ್ತಿಯು ಕುಮ್ಮಟದುರ್ಗದಿಂದ ಆಳುತ್ತಿದ್ದ ಕಂಪಿಲದೇವನ ಹಿರಿಯ ಮಗ ‘ಬಯಿರದೇವ’ ಎಂದು ನಿರ್ಧರಿಸಬಹುದು[118]. ಹಳೆಯಬೀಡಿನಲ್ಲಿಯ ಹೊಯ್ಸಳೇಶ್ವರದೇವರಿಗೆ, ಹಳೆಯಬೀಡಿನಲ್ಲಿಯ ಭೂಮಿಯನ್ನು ಹೊಯ್ಸಳರ ಅನಂತರ ಒಬ್ಬವ್ಯಕ್ತಿ ಮಹಾಮಂಡಲೇಶ್ವರ ಪದವಿಯಲ್ಲಿದ್ದು ದತ್ತಿಕೊಟ್ಟಿರುವುದು ಗಮನಾರ್ಹ. ಈ ವ್ಯಕ್ತಿ ಒಬ್ಬ ರಾಜ ವಂಶಿಯನಾಗಿದ್ದು ಅಧಿಕಾರದಲ್ಲಿದ್ದನೆನ್ನುವುದು ಸ್ಪಷ್ಟ.

ಬೇ. 450ರಲ್ಲಿ ಬಂದಿರುವ ಬಿರುದಾವಳಿ ‘ಮೇದಿನಿಮೀಸಿಯರ ಗಂಡ’ ‘ಮೂವರುರಾಯರಗಂಡ’ ಮತ್ತು ‘ನಾಡತಟಿವಾ[ರ]’ ಎಂಬುವು ಬಹು ಗಮನಾರ್ಹ. ‘ಮೇದಿನಿಮೀಸಿಯರಗಂಡ’ ಎಂಬ ಬಿರುದನ್ನು ಕಠಾರಿಸಾಳುವ ಮನೆತನದ ರಾಜರು ಹೊಂದಿರುತ್ತಿದ್ದರು[119]. ಆದರೆ ಇಲ್ಲಿ ‘ಸಾಳುವ’ ಎಂಬ ಶಬ್ದವು “ಯೆಟ್ಟಕೆಂಮೆನಾಯಕರ ಮಕ್ಕಳು” ಎಂಬಲ್ಲಿ ಬಂದಿಲ್ಲ.

